
ಸಂಪುಟ 24 ಸಂಚಿಕೆ 15
ಏಪ್ರಿಲ್ 14, 2002 ಬೆಲೆ ರೂ. 3.00


# ಐಕ್ಯರಂಗ

ದುಡಿವ ಜನರ ಪ್ರಾಣಮಿತ್ರ



## ಪ್ಯಾಲೆಸ್ತೀನ್ ನಿರ್ನಾಮಕ್ಕೆ ಇಸ್ರೇಲ್ ಆಕ್ರಮಣ





## ಗುಜರಾತ್ ಪಾತಕಗಳು ಮತ್ತು ಎನ್‌ಡಿಎ ಭವಿಷ್ಯ





## ಸಂಸ್ಕೃತಿ ಬೆಳೆಸಿದ ಮುಸ್ಲಿಮರು

- ಗದುಗಿನ ತೋಂಟದಾರ್ಯ ಸ್ವಾಮಿಗಳು

## $H_2O$ = ನೀರು ವಾದ-ವಿವಾದ

# ಅಮೆರಿಕಾದೊಂದಿಗೆ ಅಪಾಯಕಾರಿ ರಕ್ಷಣಾ ಒಪ್ಪಂದ

ಹೋರಾಟದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



**ಜ್ಯೋತಿಬಸು ಆತ್ಮಕಥನ**

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರಾವಾಹಿ: 92

**ಕಳೆದ ಸಂಚಿಕೆಯಲ್ಲಿ ಕೇಂದ್ರ ಆರೋಗ್ಯ ಸಚಿವ ಬಿ.ಶಂಕರಾನಂದ, ರಾಜ್ಯ ಸಚಿವ ರಾಮೇಶ್ವರ ಠಾಕೋರ್, ಕಲ್ಪನಾಥ ರಾಯ್ ರಾಜೀನಾಮೆ, ಆಂಧ್ರ, ಕರ್ನಾಟಕದಲ್ಲಿ ಕಾಂಗ್ರೆಸ್ ಪರಾಭವ, ಚಂದ್ರಬಾಬು ನಾಯ್ಡು ಬಂಡಾಯ, 1996 ರಲ್ಲಿ ಎನ್.ಟಿ.ರಾಮರಾವ್ ನಿಧನ, ಅರ್ಜುನ್ ಸಿಂಗ್ ಕೇಂದ್ರ ಸರ್ಕಾರಕ್ಕೆ ರಾಜೀನಾಮೆ, ಕಾಂಗ್ರೆಸ್ (ತಿವಾರಿ) ಪಕ್ಷ ರಚನೆ ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಅಮೆರಿಕಾದೊಂದಿಗೆ ಕೇಂದ್ರ ಸರ್ಕಾರದ ರಾಜಿ, 1995 ರ ಮಹಾರಾಷ್ಟ್ರ, ಬಿಹಾರ, ಗುಜರಾತ್‌ನಲ್ಲೂ ಕಾಂಗ್ರೆಸ್ ಧೂಳೀಪಟ, 15ನೇ ಮಹತ್ವದ ಮಹಾಧಿವೇಶನ, ಸುರ್ಜಿತ್ ಪ್ರ.ಕಾರ್ಯದರ್ಶಿಯಾಗಿ ಪುನರಾಯ್ಕೆ, ಕಲ್ಕತ್ತ ಮಹಾನಗರ ಪಾಲಿಕೆಯಲ್ಲಿ ನಮ್ಮ ವಿಜಯ ಮತ್ತು 1992 ರಲ್ಲಿ ಬೆಂಗಳೂರಿನಲ್ಲಿ ಕೇಂದ್ರ ಸಮಿತಿ ಸಭೆ ಈ ಬಗ್ಗೆ ಓದಿರಿ..**

**ಈ** ನಡುವೆ, ರಾವ್ ಸರಕಾರ ಅಮೇರಿಕಾದ ಜತೆ ರಾಜಿ ಮಾಡಿಕೊಳ್ಳುವುದನ್ನು ಮುಂದುವರಿಸಿತು. 1995 ರ ರಕ್ಷಣೆ ಒಪ್ಪಂದ ಅವುಗಳಲ್ಲಿ ಒಂದು ಅಂಶ. ಅಮೆರಿಕಾದ ರಕ್ಷಣಾ ಸಚಿವ ವಿಲಿಯಂ ಪೆರಿ ದೆಹಲಿಗೆ ಭೇಟಿ ನೀಡಿದಾಗ ಈ ಒಪ್ಪಂದಕ್ಕೆ ಸಹಿ ಹಾಕಲಾಯಿತು. 1992ರ ಜನವರಿಯಲ್ಲಿ ಪ್ರಥಮ ಭಾರತ ಅಮೆರಿಕ ಸೇವಾ ಕಾರ್ಯನಿರ್ವಾಹಕ ಸಂಚಾಲನ ಸಮಿತಿಯನ್ನು ರಚಿಸಲಾಗಿತ್ತು. ರಕ್ಷಣಾ ಚಟುವಟಿಕೆಗಳ ಉಸ್ತುವಾರಿ ಮತ್ತು ಮಾಹಿತಿ ವಿನಿಮಯಕ್ಕೆ ಕೂಡ ಈ ಸಮಿತಿಗೆ ಅಧಿಕಾರ ನೀಡಲಾಗಿತ್ತು! ಪ್ರಥಮ ಜಂಟಿ ನೌಕಾಪಡೆ ಕವಾಯತನ್ನು ಕೂಡ ನಡೆಸಲಾಯಿತು. ನಮ್ಮ ರಕ್ಷಣಾ ಯೋಜನೆಗಳು ರಹಸ್ಯವಾಗಿರುತ್ತವೆ ಎನ್ನುವುದಕ್ಕೆ ಯಾವುದೇ ಖಾತರಿ ಇರಲಿಲ್ಲ. ಸಹಜವಾಗಿಯೇ ಬಿಜೆಪಿಯಂಥ ಒಂದು ಪಕ್ಷ ಇದನ್ನು ಬೆಂಬಲಿಸಿತು. ಈ ವಿಷಯದ ಮೇಲೆ ಸಾರ್ವಜನಿಕ ಅಭಿಪ್ರಾಯ ರೂಪಿಸುವ ಹೊಣೆ ನಮ್ಮ ಮೇಲೆ ಬಿದ್ದಿತು.

ಲೋಕಸಭೆ ಚುನಾವಣೆಗೆ ಮುನ್ನ ಮಹಾರಾಷ್ಟ್ರ ಮಣಿಪುರ, ಬಿಹಾರ, ಒರಿಸ್ಸಾ ಮತ್ತು ಗುಜರಾತ್ ವಿಧಾನಸಭೆಗಳಿಗೆ ಚುನಾವಣೆ ನಡೆಯಿತು. ಇದೊಂದು ಮಿನಿ ಸಾರ್ವತ್ರಿಕ ಚುನಾವಣೆಯಾಗಿತ್ತು. 1995 ಫೆಬ್ರವರಿ-ಮಾರ್ಚ್‌ನಲ್ಲಿ ಈ ಚುನಾವಣೆ ನಡೆಯಿತು. ಕಾಂಗ್ರೆಸ್ ಧೂಳೀಪಟವಾಯಿತು. ಮಹಾರಾಷ್ಟ್ರ ಮುಖ್ಯಮಂತ್ರಿ ಶರದ್ ಪವಾರ್ ರಾಜಿನಾಮೆ ನೀಡಿದರು. ಬಿಜೆಪಿ - ಶಿವಸೇನೆ ಕೂಟ ಮಾರ್ಚ್ 14 ರಂದು ಸರಕಾರ ರಚಿಸಿತು. ಗುಜರಾತಿನಲ್ಲಿ ಕೂಡ ಬಿಜೆಪಿ ಸರಕಾರ ರಚಿಸಿತು. ಆದರೆ ಶೀಘ್ರವೇ ಅಲ್ಲಿ ಪಕ್ಷ ಹೋಳಾಯಿತು. ಒರಿಸ್ಸಾದಲ್ಲಿ ಜನತಾದಳವನ್ನು ಕಾಂಗ್ರೆಸ್ ಪರಾಭವಗೊಳಿಸಿತು. ಬಿಜು ಪಟ್ನಾಯಕ್ ಸರಕಾರ ಜನರಿಂದ ದೂರವಾಗುತ್ತಿದೆ ಎಂದು ನಾವು ಮೊದಲೇ ಎಚ್ಚರಿಕೆ ನೀಡಿದ್ದೆವು. ದಳ ರಾಜ್ಯ ಘಟಕ ಭಿನ್ನಮತದಿಂದಲೂ ನಲುಗುತ್ತಿತ್ತು. ಚುನಾವಣೆ ಆಯೋಗ ತನ್ನ ವಿವೇಚನೆಯನ್ನು ಬಳಸಿ ಬಿಹಾರದ ಚುನಾವಣೆಯನ್ನು ಮುಂದೂಡಿತು. ಆಗ ಅಲ್ಲಿ ಜನತಾದಳವನ್ನು ಸೋಲಿಸಲು ಆಗಲಿಲ್ಲ. ಲಾಲೂ ಪ್ರಸಾದ್ ಯಾದವ್ 1995 ಏಪ್ರಿಲ್ 4 ರಂದು ಮತ್ತೆ ಮುಖ್ಯಮಂತ್ರಿ ಆದರು. ನಾವು ಅವರನ್ನು ಬೆಂಬಲಿಸಿದೆವು.

**15ನೇ ಮಹಾಧಿವೇಶನ**

15ನೇ ಮಹಾಧಿವೇಶನದ ಹಿನ್ನೆಲೆಯಲ್ಲಿ 1994 ಅಕ್ಟೋಬರ್‌ನಲ್ಲಿ ಪಕ್ಷದ ರಾಜ್ಯ ಸಮ್ಮೇಳನಗಳು ಆರಂಭವಾದವು. ಪಶ್ಚಿಮ ಬಂಗಾಳದಲ್ಲಿ ಪಕ್ಷದ 19645 ಘಟಕಗಳು 1,218 ಸ್ಥಳೀಯ ಸಮಿತಿಗಳು, 210 ವಲಯ ಸಮಿತಿಗಳು ಹಾಗೂ 18 ಜಿಲ್ಲಾ ಸಮಿತಿಗಳು ಇದ್ದವು. ನಾಲ್ಕು ತಿಂಗಳಿಗೂ ಹೆಚ್ಚು ಅವಧಿಯಲ್ಲಿ ಈ ಎಲ್ಲಾ ಮಟ್ಟಗಳ ಸಭೆಗಳು ನಡೆದ ನಂತರ 1995 ಮಾರ್ಚ್ 1 ರಿಂದ 4ರವರೆಗೆ ಕಲ್ಕತ್ತದಲ್ಲಿ 18ನೇ ರಾಜ್ಯ ಸಮ್ಮೇಳನ ನಡೆಯಿತು.

1991 ನವೆಂಬರ್ 21 ರಂದು ನಿಧನರಾದ ಕೇಂದ್ರ ಸಮಿತಿ ಹಾಗೂ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಅಬ್ದುಲ್ ರಸೂಲ್‌ರ ಹೆಸರನ್ನು ಸಮ್ಮೇಳನದ ಸ್ಥಳಕ್ಕೆ ಇಡಲಾಗಿತ್ತು. 1992 ಜೂನ್ 13 ರಂದು ಅಗಲಿದ ಮನೋರಂಜನ್ ರಾಯ್ ಸ್ಮರಣೆಯಲ್ಲಿ ವೇದಿಕೆಯನ್ನು ರಚಿಸಲಾಗಿತ್ತು.

ರಾಜ್ಯದಲ್ಲಿ ಪಕ್ಷದ ಸದಸ್ಯತ್ವ ಕಳೆದ ಸಮ್ಮೇಳನದಿಂದ 25,000 ಹೆಚ್ಚಿತ್ತು. ಒಟ್ಟು ಸದಸ್ಯತ್ವ 2,16, 490 ಆಗಿತ್ತು. ಯಾವುದೇ ರಾಜ್ಯ ಸಮ್ಮೇಳನದಲ್ಲಿ ಇಲ್ಲದ ಒಂದು ಕ್ರಮವಾಗಿ ಅದೇ ಮೊದಲ ಬಾರಿಗೆ 40 ಗೌರವ ಪ್ರತಿನಿಧಿಗಳನ್ನು ಸಮ್ಮೇಳನಕ್ಕೆ ಆಹ್ವಾನಿಸಲಾಯಿತು.

ಪಾಲಿಟ್‌ಬ್ಯೂರೋ ಸದಸ್ಯ ವಿನಯಾ ಚೌಧರಿ ಕೆಂಪು ಧ್ವಜಾರೋಹಣ ಮಾಡಿದರು. ಮೊದಲ ದಿನವೇ ಕಲ್ಕತ್ತಕ್ಕೆ ಬರಲು ಸುರ್ಜಿತ್‌ಗೆ ಆಗಲಿಲ್ಲ. ಅವರು ಮಾರನೇ ದಿನ ಆಗಮಿಸಿ ಬಾಷಣ ಮಾಡಿದರು. ಸೀತಾರಾಮ ಯೆಚೂರಿ ಕೂಡ ಅಭಿಪ್ರಾಯಗಳನ್ನು ಮಂಡಿಸಿದರು. ರೂಢಿಯಂತೆ ಮೊದಲ ದಿನ ಶೈಲೇನ್ ದಾಸ್ ಗುಪ್ತಾ ರಾಜಕೀಯ ನಿರ್ಣಯವನ್ನು ಮಂಡಿಸಿದರು. ರಾಜಕೀಯ ಸಂಘಟನಾತ್ಮಕ ವರದಿಯಲ್ಲಿ ಪಕ್ಷದ ಯಶಸ್ಸು ಹಾಗೂ ದೌರ್ಬಲ್ಯಗಳನ್ನು ವಿಮರ್ಶಿಸಲಾಯಿತು. ವರದಿಯ ಮೇಲೆ 68 ಪ್ರತಿನಿಧಿಗಳು ಮಾತನಾಡಿದರು. ಶೈಲೇನ್ ಗುಪ್ತ ಮತ್ತು ನಾನು ವರದಿಯ ಮೇಲಿನ ಚರ್ಚೆಯನ್ನು ಸಮಾಪನಗೊಳಿಸಿದೆವು.

**ಕಾಂ. ಎಂಗೆಲ್ಸ್ ನಿಧನ ಶತಾಬ್ದಿ,** ಫ್ಯಾಸಿಸಂ ಮೇಲಿನ ವಿಜಯದ ಸ್ವರ್ಣ ಮಹೋತ್ಸವ, ಕಾಂ। ಲೆನಿನ್‌ರ 125ನೇ ಜಯಂತಿ, ಮತ್ತು ತೇಬಾಗ ಚಳವಳಿಯ ಸ್ವರ್ಣ ಮಹೋತ್ಸವ ವರ್ಷಾಚರಣೆ ಸಂಬಂಧ ಕಾರ್ಯಕ್ರಮಗಳನ್ನು ರೂಪಿಸುವ ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.

ಮುಚ್ಚಿರುವ ಹಾಗೂ ರೋಗಗ್ರಸ್ಥ ಕೈಗಾರಿಕೆಗಳು ಹಾಗೂ ಮಾರ್ಕ್ಸ್‌ವಾದಿ ತತ್ವ ಸಿದ್ಧಾಂತಗಳನ್ನು ಪ್ರಚಾರ ಮಾಡುವುದಕ್ಕೆ ಸಂಬಂಧಿಸಿ ಕೂಡ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಕೈಗಾರಿಕೆ ಪರಿಸ್ಥಿತಿ ಬಗ್ಗೆ ಅಂಗೀಕರಿಸಿದ ನಿರ್ಣಯ ತಂತ್ರಜ್ಞಾನ ಆಮದಿಗೆ ನಮ್ಮ ಒಲವಿಲ್ಲ ಎಂದು ಸ್ಪಷ್ಟಪಡಿಸಿತು. ಸಣ್ಣ ಮತ್ತು ಗುಡಿ ಕೈಗಾರಿಕೆಗಳ ಬೆಳವಣಿಗೆಗೆ ಪ್ರಯತ್ನಗಳನ್ನು ನಡೆಸಬೇಕೆಂದು ಹೇಳಿತು. ರಾಜ್ಯ ಹಿತಕ್ಕೆ ಅನುಕೂಲವಾಗುವಂತಿದ್ದರೆ ಮಾತ್ರ ವಿದೇಶಿ ತಂತ್ರಜ್ಞಾನ ಮತ್ತು ಬಂಡವಾಳಕ್ಕೆ ಪ್ರೋತ್ಸಾಹ ನೀಡಬೇಕು. ಕೇಂದ್ರದ ಆರ್ಥಿಕ ನೀತಿಗಳ ಆಮೂಲಾಗ್ರ ಬದಲಾವಣೆಗೆ ಸಮ್ಮೇಳನ ಸಹಜವಾಗಿಯೇ ಒತ್ತಾಯಿಸಿತು.

**ಮಹತ್ವದ ಅಧಿವೇಶನ**

ಏಪ್ರಿಲ್ 3-8ರ ಅವಧಿಯಲ್ಲಿ ಚಂಡೀಗಢದಲ್ಲಿ 15ನೇ ಮಹಾಧಿವೇಶನ ನಡೆಯಿತು. ಚಂಡೀಗಢ ಒಂದು ವ್ಯವಸ್ಥಿತ ನಗರ ಸಮ್ಮೇಳನ ನಡೆದ ಕಿಶನ್ ಭವನಕ್ಕೆ ಕಾಂ। ಬಸವಪುನ್ನಯ್ಯರ ಹೆಸರಿಡಲಾಗಿತ್ತು. ಪಂಜಾಬಿನಲ್ಲಿ ನಡೆದ ಇನ್ನೂ ಎರಡು ಮಹಾಧಿವೇಶನಗಳಲ್ಲಿ ನಾನು ಭಾಗವಹಿಸಿದ್ದೆ. ಅಮೃತಸರ (1958) ಮತ್ತು ಜಲಂಧರ್ (1979).

ಒಟ್ಟು 660 ಪ್ರತಿನಿಧಿಗಳು ಹಾಗೂ 60 ಆಹ್ವಾನಿತರು ಪಾಲ್ಗೊಂಡಿದ್ದರು. ಮೊದಲ ಬಾರಿಗೆ ಭಾವಚಿತ್ರ ಸಹಿತ ಗುರುತುಚೀಟಿಯನ್ನು ನೀಡಲಾಯಿತು. ಪಾಲಿಟ್‌ಬ್ಯೂರೋ ಸದಸ್ಯ ಇ.ಎಂ.ಎಸ್. ನಂಬೂದರಿಪಾಡ್ ಕೆಂಪುಧ್ವಜವನ್ನು ಆರೋಹಿಸಿದರು. ಆರ್. ಉಮಾನಾಥ, ಕನಕ ಮುಖರ್ಜಿ, ಪಿಣರಾಯ್ ವಿಜಯನ್, ರಾಘವಲು, ನೂರುಲ್ ಹುಡಾ, ಮಘೋರ ದೇವವರ್ಮಾ ಮತ್ತು ನಾನು ಅಧ್ಯಕ್ಷ ಮಂಡಳಿಯಲ್ಲಿ ಇದ್ದೆವು.

ರಷ್ಯನ್ ಒಕ್ಕೂಟದ ನಾಯಕ ಗೆನ್ನಡಿ ಝುಗನೋವ್ ವೇದಿಕೆಯಲ್ಲಿದ್ದ ವಿದೇಶಿ ಪ್ರತಿನಿಧಿಗಳಲ್ಲಿ ಸೇರಿದ್ದರು. ಅಂದಿನ ಸಿಪಿಐ ಪ್ರಧಾನ ಕಾರ್ಯದರ್ಶಿ ಇಂದ್ರಜಿತ್ ಗುಪ್ತಾ ಕೂಡ ಹಾಜರಿದ್ದರು. ನಮ್ಮ ಪಕ್ಷ ತೀವ್ರವಾಗಿ ಬೆಳೆಯುತ್ತಿತ್ತು. ದೊಡ್ಡ ಸಂಖ್ಯೆಯ ವಿದೇಶಿ ಪ್ರತಿನಿಧಿಗಳ ಉಪಸ್ಥಿತಿ ಅದಕ್ಕೆ ಸಾಕ್ಷಿಯಾಗಿತ್ತು. ಜಗತ್ತಿನಲ್ಲಿ ಕಮ್ಯುನಿಸ್ಟ್ ಆಂದೋಲನ ಬಿಕ್ಕಟ್ಟನ್ನು ಎದುರಿಸುತ್ತಿರುವಾಗ ನಾವು ದಿನದಿಂದ ದಿನಕ್ಕೆ ಬಲಿಷ್ಠರಾಗುತ್ತಿದ್ದೆವು. ಇದು ತುಂಬಾ ಮಹತ್ವದ ಸಂಗತಿ 14ನೇ ಮಹಾಧಿವೇಶನದ ವೇಳೆ 5. 79 ಲಕ್ಷ ಇದ್ದ ನಮ್ಮ ಸದಸ್ಯತ್ವ ಈಗ 6.31ಲಕ್ಷ ಆಗಿತ್ತು. ಪ್ರಥಮ ದಿನ ಸುರ್ಜಿತ್ ರಾಜಕೀಯ ನಿರ್ಣಯವನ್ನು ಮಂಡಿಸಿದರು.

ಸಂಘಟನಾತ್ಮಕ ನಿರ್ಣಯವನ್ನು ಪ್ರಕಾಶ್ ಕಾರಟ್ ಮಂಡಿಸಿದರು. ಮಹಾಧಿವೇಶನ ರಾವ್ ಸರಕಾರದ ಆಡಳಿತದ ಬಗ್ಗೆ ಸುದೀರ್ಘ ಚರ್ಚೆ ನಡೆಸಿತು.

ಸಾಮಾನ್ಯ ಕನಿಷ್ಠ ಕಾರ್ಯಕ್ರಮ (ಸಿಎಂಪಿ)ವೊಂದರ ಆಧಾರದ ಮೇಲೆ ಎಡ-ಪ್ರಜಾಸತ್ತಾತ್ಮಕ ರಂಗವೊಂದನ್ನು ರಚಿಸುವ ಅಗತ್ಯವನ್ನು ಮಹಾಧಿವೇಶನ ಪ್ರತಿಪಾದಿಸಿತು. ಸಿಪಿಐ(ಎಂ) ಮತ್ತು ಸಿಪಿಐಗಳನ್ನು ಹತ್ತಿರ ತಂದು ಸಂಯುಕ್ತ ಹೋರಾಟಗಳನ್ನು ರೂಪಿಸುವುದು ತುರ್ತು ಅಗತ್ಯ ಎಂದು ಸಂಘಟನಾತ್ಮಕ ವರದಿ ಸ್ಪಷ್ಟಪಡಿಸಿತು. ಅಡ್ಡಿ ಆತಂಕಗಳು ಇನ್ನೂ ಇದ್ದರೂ ಈ ಪ್ರಕ್ರಿಯೆ 14 ನೇ ಮಹಾಧಿವೇಶನದಲ್ಲೇ ಆರಂಭವಾಗಿತ್ತು. 1993 ಆಗಸ್ಟ್‌ನಲ್ಲಿ ಬೆಂಗಳೂರಿನಲ್ಲಿ ಕೇಂದ್ರ ಸಮಿತಿ ಸಭೆ ನಡೆಯಿತು. ರಾಜ್ಯ ಮಟ್ಟಗಳಲ್ಲಿ ಸಿಪಿಐ(ಎಂ) ಸಿಪಿಐ ಸಮನ್ವಯ ಸಮಿತಿಗಳನ್ನು ರಚಿಸಲು ಈ ಸಭೆ ನಿರ್ಧರಿಸಿತು. ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ಉತ್ತರ ಪ್ರದೇಶ, ಬಿಹಾರ, ಪಂಜಾಬ್, ರಾಜಸ್ಥಾನ ಮತ್ತು ಒರಿಸ್ಸಾದಲ್ಲಿ ಇದನ್ನು ಅನುಷ್ಠಾನಗೊಳಿಸಲಾಯಿತು. ತ್ರಿಪುರಾ ಮತ್ತು ಪಶ್ಚಿಮ ಬಂಗಾಳದಲ್ಲಿ ನಾವು ರಂಗದ ಪಾಲುದಾರರಾಗಿರುವುದರಿಂದ ಅಲ್ಲಿ ಇಂಥ ಸಮಿತಿಗಳ ಆವಶ್ಯಕತೆ ಇರಲಿಲ್ಲ.

65 ಸದಸ್ಯರ ಹೊಸ ಸಮಿತಿಯನ್ನು ರಚಿಸಲಾಯಿತು. ಸುರ್ಜಿತ್ ಪ್ರಧಾನ ಕಾರ್ಯದರ್ಶಿಯಾಗಿ ಪುನರಾಯ್ಕೆಗೊಂಡರು. 15 ಸದಸ್ಯರ ಪಾಲಿಟ್‌ಬ್ಯೂರೋದಲ್ಲಿ ಸುರ್ಜಿತ್, ಇ.ಎಂ.ಎಸ್. ಬಾಲಾನಂದನ್, ಬಿನಯ್ ಚೌಧರಿ, ಅಚ್ಯುತನಾಂದನ್, ಗಂಗಾಧರ ರಾವ್, ಪ್ರಕಾಶ್ ಕಾರಟ್, ಸೀತಾರಾಮ ಯೆಚೂರಿ, ರಾಮಚಂದ್ರನ್ ಪಿಳ್ಳೈ, ಸುನಿಲ್ ಮೈತ್ರ, ಪಿ. ರಾಮಚಂದ್ರನ್, ಶೈಲೇನ್ ದಾಸ್ ಗುಪ್ತಾ, ಇ.ಕೆ. ನಾಯನಾರ್, ಆರ್. ಉಮಾನಾಥ ಮತ್ತು ನಾನು ಇದ್ದೆವು. ನೃಪೇನ ಚಕ್ರವರ್ತಿ ಮತ್ತು ಎ. ನಲ್ಲಶಿವನ್ ಇರಲಿಲ್ಲ. ಮೂವರು ಸದಸ್ಯರ ನಿಯಂತ್ರಣ ಸಮಿತಿಗೆ ಸಮರ ಮುಖರ್ಜಿ ಮುಖ್ಯಸ್ಥರಾಗಿದ್ದರು.

ಇದೇ ಮೊದಲ ಬಾರಿಗೆ ಮಹಾಧಿವೇಶನದ ಮೊದಲ ದಿನವನ್ನು ಸುದ್ದಿ ಮಾಧ್ಯಮಕ್ಕೆ ಮುಕ್ತವಾಗಿಡಲಾಗಿತ್ತು. ಇದು ಅವರಿಗೆ ಒಂದು ಅನುಭವವಾಗಿತ್ತು. ಮಹಾಧಿವೇಶನದ ಕೊನೆಯಲ್ಲಿ ನಡೆಸಿದ ರ್‍ಯಾಲಿ ಉತ್ತರ ಭಾರತದಲ್ಲೇ ಅತ್ಯಂತ ಬೃಹತ್ ರ್‍ಯಾಲಿಗಳಲ್ಲಿ ಒಂದಾಗಿತ್ತು.

**ಮಹಾನಗರಪಾಲಿಕೆ ಚುನಾವಣೆಗಳು :**

1995ಮೇ 28 ರಂದು ಬಂಗಾಳದ 75 ಪುರಸಭೆಗಳಿಗೆ ಚುನಾವಣೆ ನಡೆಯಿತು. ಪರಿಶಿಷ್ಟ ಜಾತಿ - ಪಂಗಡಗಳ ಮೀಸಲಾತಿ ಪದ್ಧತಿಯ ವಿರುದ್ಧ ಕಾಂಗ್ರೆಸ್ ಆ ತಿಂಗಳೇ ನ್ಯಾಯಾಲಯಕ್ಕೆ ಹೋಯಿತು. ಅದರ ದ್ವಿಮುಖ ರಾಜಕೀಯ ಇದರಿಂದ ಇನ್ನಷ್ಟು ಬಹಿರಂಗವಾಯಿತು. ಆ ಚುನಾವಣೆಗಳಲ್ಲಿ ನಮ್ಮ ಸಾಧನೆ ಚೆನ್ನಾಗಿರಲಿಲ್ಲ. ಶೇಕಡ 80ರಷ್ಟು ಮತದಾರರು ತಮ್ಮ ಹಕ್ಕನ್ನು ಚಲಾಯಿಸಿದರು. ನಾವು 36 ಹಾಗೂ ಕಾಂಗ್ರೆಸ್ 27 ಪುರಸಭೆಗಳಲ್ಲಿ ಆಡಳಿತ ಹಿಡಿಯಿತು ಎರಡು ಮಂಡಳಿಗಳಲ್ಲಿ ಸಮಬಲದ ಪರಿಸ್ಥಿತಿ ಉಂಟಾಯಿತು. ದಿನ್‌ಹಟಾ ಪುರಸಭೆಯಲ್ಲಿ ಸಮಾಜವಾದಿ ಫಾರ್ವರ್ಡ್ ಬ್ಲಾಕ್ ಗೆಲವು ಸಾಧಿಸಿತು. ಎಡರಂಗ ಶೇ. 53 ಮತಗಳನ್ನು ಗಳಿಸಿತು. ಹುಡಾ ಬಾರಾನಗರ ಮತ್ತು ಗೋಪಾಲ ಪಖಿರ ವಿಧಾನಸಭೆ ಕ್ಷೇತ್ರಗಳ ಉಪಚುನಾವಣೆಯಲ್ಲಿ ನಾವು ಗೆದ್ದೆವು. ಆದರೆ ಮುನಿಸಿಪಲ್ ಪ್ರದೇಶಗಳಲ್ಲಿ ವಾಸಿಸುರುವ ಜನರನ್ನು ನಾವು ತಲುಪಬೇಕಾದ ರೀತಿಯಲ್ಲಿ ತಲುಪಲಿಲ್ಲ ಎನ್ನುವುದು ವಾಸ್ತವ ಸಂಗತಿ.

(ಮುಂದುವರಿಯುವುದು)

**ಮೇ ದಿನಾಚರಣೆ ಸಂಚಿಕೆ**

ಮೇ ದಿನದ ಮಹತ್ವ, ಅದರ ಸಂದೇಶಗಳು, ಜರ್ಮನಿಯ ಹಿಟ್ಲರನ ಫ್ಯಾಸಿಸ್ಟ್ POGROM ನೆನಪಿಸುವ ಗುಜರಾತ್‌ನ ಭೀಕರ ಮಾರಣಹೋಮದ ವಿವರಗಳು. ಕಥೆ, ಕವನ, ವಿಶ್ಲೇಷಣೆ ಒಳಗೊಂಡ ವಿಶೇಷ ಲೇಖನಗಳ ಮೇ ದಿನದ ಸಂಚಿಕೆ ಸಿದ್ಧವಾಗುತ್ತಿದೆ. ಹೆಚ್ಚಿನ ಪ್ರತಿಗಳನ್ನು ಬೇಕಾದಲ್ಲಿ ಮುಂದಾಗಿ ತಿಳಿಸುವುದು. ಅಲ್ಲದೇ ನಿಮ್ಮ ಪ್ರದೇಶಗಳಲ್ಲಿ ವಿಶಿಷ್ಟವಾಗಿ ಆಚರಿಸಿದ ಮೇ ದಿನದ ಹಳೆಯ ನೆನಪುಗಳು, ಫೋಟೋಗಳನ್ನು ಕಳುಹಿಸಿ...

- ಸಂ.

# ಕೇಂದ್ರ ಸರ್ಕಾರದ ದೇಶದ್ರೋಹಿ ನೀತಿಗಳೆದುರು ಕಾರ್ಮಿಕ ವರ್ಗದ ಪ್ರತಿಭಟನೆ

**ಏಪ್ರಿಲ್ 16 ಸಾರ್ವಜನಿಕ ಕ್ಷೇತ್ರ ಹಾಗೂ ಹಣಕಾಸು ರಂಗದ ನೌಕರರಿಂದ ರಾಷ್ಟ್ರವ್ಯಾಪಿ ಮುಷ್ಕರ**

ವಿಶ್ವಬ್ಯಾಂಕ್, ಐ.ಎಂ.ಎಫ್. ಹಾಗೂ ವಿಶ್ವವ್ಯಾಪಾರ ಸಂಸ್ಥೆಗಳ ನಿರ್ದೇಶನದಲ್ಲಿ ಕೇಂದ್ರ ರಾಜ್ಯ ಸರಕಾರಗಳು ತೀವ್ರವಾದ ಜನವಿರೋಧಿ ಹಾಗೂ ಕಾರ್ಮಿಕ ವಿರೋಧಿ ನೀತಿಗಳನ್ನು ಅನುಸರಿಸುತ್ತಿರುವುದನ್ನು ವಿರೋಧಿಸಿ ಏಪ್ರಿಲ್ 16 ರಂದು ಸಾರ್ವಜನಿಕ ಕ್ಷೇತ್ರ ಹಾಗೂ ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಿ ನೌಕರರು ಹಾಗೂ ಹಣಕಾಸುರಂಗದ ನೌಕರರು ರಾಷ್ಟ್ರವ್ಯಾಪಿ ಮುಷ್ಕರ ನಡೆಸಲು ನಿರ್ಣಯಿಸಿದ್ದಾರೆ. ಕೇಂದ್ರ, ರಾಜ್ಯ ಸರಕಾರಗಳು ವಿವೇಚನಾ ರಹಿತವಾಗಿ ಹುಚ್ಚಾಪಟ್ಟೆಯಾಗಿ ಸಾರ್ವಜನಿಕ ರಂಗದ ಕೈಗಾರಿಕೆಗಳನ್ನು ಅತ್ಯಂತ ಅಗ್ಗವಾಗಿ ದೇಶೀಯ ಹಾಗೂ ಬಹುರಾಷ್ಟ್ರೀಯ ಬಂಡವಾಳಗಾರರಿಗೆ ಧಾರೆ ಎರೆದು ಕೊಡಲಾಗುತ್ತಿದೆ. ಅತ್ಯಂತ ನಾಚಿಕೆಗೇಡಿನ ರೀತಿಯಲ್ಲಿ ಬಂಡವಾಳ ವಾಪಸಾತಿಗಾಗಿ ಮಂತ್ರಿಯನ್ನೇ ಕೇಂದ್ರಸರಕಾರ ಹೊಂದಿದೆ. ಕೇಂದ್ರ ಸರಕಾರವು ವೆಚ್ಚ ಸುದಾರಣಾ ಸಮಿತಿ ನೇಮಕ ಮಾಡಿ ಲಕ್ಷಾಂತರ ನೌಕರರನ್ನು ಕಡಿತಮಾಡುವ ಕ್ರಮಗಳನ್ನು ಅಂತರರಾಷ್ಟ್ರೀಯ ಮೂಲಿಕರಗೆ ಸಲಾಂ ಹಾಕಿಕೊಂಡಿದ್ದಾರೆ. ಗೀತಾಕೃಷ್ಣನ್ ನೇತೃತ್ವದ ವೆಚ್ಚಸುಧಾರಣಾ ಸಮಿತಿಯು ಜನರಿಗೆ ಸರಕಾರ ನೀಡುವ ಸೇವೆಗಳನ್ನು ಖಾಸಗೀಕರಿಸುವ ಶಿಫಾರಸ್ಸು ಮಾಡಿದೆ ಅದರ ಮುಂದುವರೆದ ಭಾಗವಾಗಿಯೇ ಕರ್ನಾಟಕ ರಾಜ್ಯದಲ್ಲೂ. ಹಾರ್ನಳ್ಳಿ ರಾಮಸ್ವಾಮಿ ನೇತೃತ್ವದ ಆಡಳಿತಸುಧಾರಣಾ ಸಮಿತಿ ನೇಮಕವಾಗಿ ಕೇಂದ್ರ ಸರಕಾರದಂತೆಯೇ ಸ್ವಯಂ ನಿವೃತ್ತಿ ಯೋಜನೆ ಹಾಗೂ ಹಲವು ಇಲಾಖೆಗಳನ್ನು ಖಾಸಗೀಕರಣಗೊಳಿಸಲು ನಿರ್ಣಯಿಸಿದೆ. ಕಡ್ಡಾಯ ನಿವೃತ್ತಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ತೆರಿಗೆ ವಿಧಾನದಲ್ಲಿ ತೆರಿಗೆ ಜಾಲ ವಿಸ್ತರಿಸುವ ಹೆಸರಲ್ಲಿ ಭಾರಿ ಬಂಡವಾಳಗಾರರಿಗೆ, ವಿದೇಶಿ ಬಂಡವಾಳದಾರರಿಗೆ ಹಲವು ರೀಯಾಯಿತಿಗಳನ್ನು ನೀಡಿ ನೌಕರ ವರ್ಗದವರು ಅವರ ಕಛೇರಿ ಅಥವಾ ಸಂಸ್ಥೆಯ ಕೆಲಸದ ಪ್ರಯುಕ್ತವಾಗಿಯೇ ಪಡೆಯುವ ಭತ್ಯೆಗಳನ್ನು (perquisiter) ತೆರಿಗೆ ವ್ಯಾಪ್ತಿಗೆ ಒಳಪಡಿಸಿ ತೆರಿಗೆ ಹೊರೆಯನ್ನು ಹೇರಲಾಗುತ್ತಿದೆ. ಬಿಜೆಪಿ ಸರಕಾರ ಅಧಿಕಾರಕ್ಕೆ ಬರುವ ಮೊದಲು ಮಧ್ಯಮವರ್ಗ ಈ ಜನರು ಬಹಳ ತೆರಿಗೆ ವಿಚಾರದಲ್ಲೂ ನಿರೀಕ್ಷೆ ಹೊಂದಿದ್ದರು. ಎಲ್ಲ ನೀರೀಕ್ಷೆಗಳು ಹುಸಿ ಆಗಿರುವುದಲ್ಲದೇ ತೆರಿಗೆ ಹೊರೆ ಹೆಚ್ಚಾಗುತ್ತಿದೆ. ಬಿಜೆಪಿಯ ರಾಷ್ಟ್ರೀಯ ಉಪಾಧ್ಯಕ್ಷರಾದ ಸಾಹಿಬ್‌ಸಿಂಗ್ ವರ್ಮ ಅವರೇ ಬಹಿರಂಗ ಹೇಳಿಕೆನಿಡಿ ಬಿಜೆಪಿಯ ಹೀನಾಯ ಸೋಲುಗಳಿಗೆ ಇಂತಹ ತೆರಿಗೆ ನೀತಿ ಹಾಗೂ ಆರ್ಥಿಕ ನೀತಿಗಳು ಕಾರಣವಾಗಿದ್ದೂ ಪುನಃ ಪರಿಶೀಲನೆ ಮಾಡಲು ಕೇಳಿದ್ದಾರೆ. ಆರ್ಥಿಕ ಮಂತ್ರಿ ಯಶವಂತ ಸಿನ್ಹಾ ಈ ಬೇಡಿಕೆಯನ್ನು ಸಾರಾಸಗಟಾಗಿ ನಿರಾಕರಿಸಿ "ಜನಪ್ರಿಯತೆ ಹಾಗೂ ಆರ್ಥಿಕ ಮಂತ್ರಿ ಒಂದೆಡೆ" ಇರಲು ಸಾದ್ಯವಿಲ್ಲವೆಂಬ ಬೇಜವಬ್ದಾರಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ರೈಲ್ವೇ ಸುಧಾರಣೆಗಾಗಿ ನೇಮಕವಾಗಿರುವ ರಾಕೇಶ್ ಮೋಹನ್ ಸಮಿತಿಯೂ ಖಾಸಗೀಕರಣವೇ ಪರಮ ಔಷದವೆಂದು ಸಿಫಾರಸ್ಸು ಮಾಡುತ್ತಾ ರೈಲ್ವೆಯ ಹಲವು ಸೇವೆಗಳನ್ನು ಹಂತಹಂತವಾಗಿ ಖಾಸಗೀಕರಿಸಲು ನಿರ್ಣಯಿಸಿದ್ದಾರೆ.

ಮೌಂಟೆಕ್‌ಸಿಂಗ್ ಅಹ್ಲುವಾಲಿಯಾ ನೇತೃತ್ವದ ಯೋಜನಾ ಆಯೋಗದ ಉದ್ಯೋಗ ಸೃಷ್ಟಿಯ ಕಾರ್ಯಪಡೆ"ಯು ದೇಶದಲ್ಲಿ ಉದ್ಯೋಗ ಸೃಷ್ಟಿಗೆ ಇರುವ ಭಾರಿ ಅಡ್ಡಿ ಏನೆಂಬುದರ ಬಗ್ಗೆ ಸಂಶೋದನೆಮಾಡಿ ಸಾದಿಸಿದ್ದೇನೆಂದೇ ಕಾರ್ಮಿಕರಿಗೆ ನೌಕರರಿಗೆ ಸಂಬಂಧಿಸಿದಂತೆ ಇರುವ ಕಾನೂನುಗಳು ಕಾರ್ಮಿಕರಿಗೆ ಹಲವು ರಕ್ಷಣೆ ನೀಡುತ್ತಿರುವ ಕಾರಣ ಉದ್ಯೋಗ ಸೃಷ್ಟಿಗೆ ಅಡ್ಡಿಯಾಗಿದೆ ಎಂದು ನಾಚಿಕೆಯಿಲ್ಲದೆ ಹೇಳಿದ್ದಾರೆ ಆದಕ್ಕಾಗಿ ಕಾರ್ಮಿಕ ಕಾನೂನುಗಳು ಮಾಲೀಕರ ಪರ ತಿದ್ದುಪಡಿ ಮಾಡಲು ಬೊಬ್ಬೆ ಹಾಕುತ್ತಿದ್ದಾರೆ.

ಈ ಪರಿಸ್ಥಿತಿಗಳಲ್ಲಿ ದೇಶವ್ಯಾಪಿಯಾಗಿ CITU, AITUC, BMS, TUCC, UTAUC (LS) UTUC ಹಾಗೂ ಹಣಕಾಸುರಂಗದ (ಬ್ಯಾಂಕ್ ಇನ್ಸೂರೆನ್ಸ್) ನೌಕರರ ಫೆಡರೇಷನ್, ಕೇಂದ್ರ ರಾಜ್ಯ ಸರಕಾರಿ ನೌಕರರ ಮತ್ತಿತರ ಸಂಘಗಳು ರಾಷ್ಟ್ರ ಮಟ್ಟದ ಮುಷ್ಕರ ಏಪ್ರಿಲ್ 16 ರಂದು ನಡೆಸಲು ನಿರ್ಣಯಿಸಿವೆ. ಈ ಮುಷ್ಕರಕ್ಕೆ ಬೆಂಬಲಿಸಿ ಸೌಹಾರ್ದವಾಗಿ ಸಾರ್ವತ್ರಿಕ ಮುಷ್ಕರವನ್ನು ಪಶ್ಚಿಮಬಂಗಾಳ, ಕೇರಳ, ಆಂಧ್ರಪ್ರದೇಶ, ತಮಿಳುನಾಡು ಮುಂತಾದ ಕಡೆ ನಡೆಸಲಾಗುತ್ತಿದೆ. ದೇಶ ಮಟ್ಟದಲ್ಲೇ ಸಾರ್ವತ್ರಿಕ ಮುಷ್ಕರ ನಡೆಸಲು CITU ಮಾಡಿದ ಪ್ರಯತ್ನಕ್ಕೆ ಕೆಲವು ಸಂಘಟನೆಗಳು ಸಾಕಷ್ಟು ಸಹಕಾರ ನೀಡದ ಕಾರಣದಿಂದಾಗಿ ಆಯಾ ಪ್ರದೇಶಗಳಲ್ಲಿ 16ರ ಮುಷ್ಕರಕ್ಕೆ ಸೌಹಾರ್ದ ಬೆಂಬಲ ಎಲ್ಲ ಜನವಿಭಾಗಗಳು ನೀಡಬೇಕು. ಸಿಐಟಿಯುನ ಸತತ ಪ್ರಯತ್ನದಿಂದಾಗಿ ಐಎನ್‌ಟಿಯುಸಿ ರಾಷ್ಟ್ರ ಮಟ್ಟದಲ್ಲಿ ಭಾಗವಹಿಸದಿದ್ದರೂ ಅದರ ಸಂಯೋಜಿತ ಸಂಘಗಳು ಹಲವುಕಡೆ ಭಾಗವಹಿಸುತ್ತಿವೆ. ಹೆಚ್.ಎಂ.ಟಿ. ಯಲ್ಲಿ ಐ.ಎನ್.ಟಿ.ಯು.ಸಿ. ಸಂಯೋಜಿತ ಸಂಘ ಕರ್ನಾಟಕದಲ್ಲೂ ಮುಷ್ಕರದಲ್ಲಿ ಭಾಗವಹಿಸುತ್ತಿದೆ. ಈ ಮುಷ್ಕರ ಯಶಸ್ವಗೊಳಿಸಬೇಕಿದೆ.

- ಎಸ್. ಪ್ರಸನ್ನಕುಮಾರ್.



# ವಿಜಾಪುರ: ಹದಗೆಟ್ಟ ಆರೋಗ್ಯದ ಆಸ್ಪತ್ರೆ

**ಜಾಗತೀಕರಣದ ಬಿರುಗಾಳಿಯಲ್ಲಿ ತರಗೆಲೆಯಂತಾಗಿ ಆರೋಗ್ಯ ಹದಗೆಡಿಸಿಕೊಂಡ ವಿಜಾಪುರದ ಸರ್ಕಾರಿ ಆಸ್ಪತ್ರೆ ಸುತ್ತ-ಮುತ್ತ**

ಜಾಗತೀಕರಣ ಭರದಿಂದ ಮುನ್ನುಗ್ಗುತ್ತಿರುವ ಹಿನ್ನಲೆಯಲ್ಲಿ ಆರೋಗ್ಯಕ್ಷೇತ್ರದಲ್ಲಿನ ತೀವ್ರ ಬದಲಾವಣೆ ಎಲ್ಲರಿಗೂ ಬಿಸಿ ತಟ್ಟಿಸಿದೆ. ಇದಕ್ಕೆ ಇಂದು ವಿಜಾಪುರ ನಗರವೂ ಕೂಡ ಹೊರತಾಗಿಲ್ಲ.

ವಿಜಾಪುರದ ಮಧ್ಯಭಾಗದಲ್ಲಿರುವ ಅತ್ಯಂತ ಹಳೆಯ ಹಾಗೂ ಸುಸಜ್ಜಿತವಾದ ನಗರಸಭೆಯವರು ಕಟ್ಟಿಸಿದ ಆಸ್ಪತ್ರೆ, ಅತ್ಯಂತ ವಿಶಾಲವಾದ ಆಸ್ಪತ್ರೆ ಕಟ್ಟಡ, ಎಕ್ಸ್‌ರೇ ಯಂತ್ರ, ಹಾಸಿಗೆ ಹಾಗೂ ಇನ್ನಿತರ ವ್ಯವಸ್ಥೆಗಳನ್ನು ಹೊಂದಿದ್ದು, ಇಂದು ವೈದ್ಯರಿಲ್ಲದೇ, ಔಷಧಗಳಿಲ್ಲದೇ ಹಾಳು-ಕೊಂಪೆಯಾಗಿದೆ. ದಿನನಿತ್ಯ ಸಾವಿರಾರು ಜನಸಾಮಾನ್ಯರು ಈ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು. ಔಷಧೋಪಚಾರ, ಹೆರಿಗೆ ವ್ಯವಸ್ಥೆ ಸುಲಭವಾಗಿ ದೊರೆಯುತ್ತಿತ್ತು. ಇಂದು ನಗರಸಭೆ ಆಡಳಿತ ವರ್ಗ ಈ ಆಸ್ಪತ್ರೆಯನ್ನು ಖಾಸಗೀಯವರಿಗೆ ಹಸ್ತಾಂತರಿಸುವ ಹುನ್ನಾರದಲ್ಲಿದೆ. ನಗರಸಭೆಯವರ ಈ ನಿರ್ಧಾರದಿಂದ ಇಂದು ಜನಸಾಮಾನ್ಯರು ಚಿಕಿತ್ಸೆಗಾಗಿ ಪರದಾಡುವಂತಾಗಿದೆ. ಒಂದು ಸಾಮಾನ್ಯ ಹೆರಿಗೆಗೆ ಖಾಸಗಿಯವರಿಗೆ ರೂ. 600 ರಿಂದ 800 (ಒಂದು ದಿನಕ್ಕೆ) ಖರ್ಚು ಮಾಡಬೇಕಾಗುತ್ತದೆ. ತುರ್ತುಚಿಕಿತ್ಸೆಗಾಗಿ ಪರದಾಡಿ ಸೌಲಭ್ಯ ಸಿಗದೇ ಹಲವು ಸಮಯ ಪ್ರಾಣ ಕಳೆದುಕೊಳ್ಳುವಂತಾಗಿದೆ. ಇಂದು ಖಾಸಗಿ ಆಸ್ಪತ್ರೆಗಳು ಬಡಜನರ ರಕ್ತಹೀರುವ ಕೇಂದ್ರಗಳಾಗಿವೆ.

ಇದೊಂದೇ ಅಲ್ಲದೇ ನಗರ ಮಧ್ಯಭಾಗದಲ್ಲಿರುವ ಹಳೆಯ ಸರಕಾರಿ ಹೆರಿಗೆ ಆಸ್ಪತ್ರೆಯನ್ನು ಆಧುನೀಕರಣ ನೆಪದಲ್ಲಿ, ನಗರದಿಂದ 4 ಕಿ.ಮಿ. ದೂರದಲ್ಲಿರುವ ಹೊಸ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು. ಹಳೆಯ ಹೆರಿಗೆ ಆಸ್ಪತ್ರೆ ನಗರ ಮಧ್ಯದಲ್ಲಿದ್ದು ಚಿಕಿತ್ಸಾ ಸೌಲಭ್ಯಗಳು ಸುಲಭವಾಗಿ ದೊರೆಯುತ್ತಿತ್ತು. ಲಕ್ಷಾಂತರ ರೂಪಾಯಿ ಖರ್ಚುಮಾಡಿ ಹೊಸ ಆಸ್ಪತ್ರೆ ಇಷ್ಟು ದೂರ ಕಟ್ಟಿದುದರ ವಾಸ್ತವಿಕತೆ ಏನು? ಹಳೆಯ ಹೆರಿಗೆ ಆಸ್ಪತ್ರೆಯಲ್ಲಿ ಯಾವುದೇ ತೊಂದರೆ ಇಲ್ಲದಿದ್ದರೂ ಕೂಡ, ಹೊಸ ಆಸ್ಪತ್ರೆಗೆ ಸ್ಥಳಾಂತರ ಮಾಡುವ ಉದ್ದೇಶ ಏನು? ರೋಗಿಗಳಿಗೆ ಹಾಗೂ ವೈದ್ಯರುಗಳಿಗೆ ಬೇಡವಾದ ಈ ಹೊಸ ಆಸ್ಪತ್ರೆ ಯಾರಿಗಾಗಿ ಸ್ಥಳಾಂತರಿಸಲಾಯಿತು? ಇವೆಲ್ಲ ಪ್ರಶ್ನೆಗಳಿಗೆ ಉತ್ತರ ಹುಡುಕುತ್ತಾ ಹೊದಲ್ಲಿ ಬಹುಶಃ ಹಲವಾರು ಸತ್ಯಸಂಗತಿಗಳು ಹೊರಬರಬಹುದು. ಇದೊಂದು ಸಮಸ್ಯೆಗಳ ಆಗರವಾಗಿದೆ.

ಈಗ ಸ್ಥಳಾಂತರ ಮಾಡಿರುವ ಹೊಸ ಆಸ್ಪತ್ರೆಗೆ ಸಾರಿಗೆ ವ್ಯವಸ್ಥೆ ಸರಳವಾಗಿಲ್ಲ, ಹಲವಾರು ಬಾರಿ ಅನೇಕ ಮಹಿಳೆಯರು ಹೆರಿಗೆ ನೋವು ಸಹಿಸಲಾರದೇ, ಸರಿಯಾದ ಸಮಯದಲ್ಲಿ ಆಸ್ಪತ್ರೆ ಮುಟ್ಟದೇ, ಮಾರ್ಗಮಧ್ಯದಲ್ಲಿಯೇ ಪ್ರಾಣಕಳೆದುಕೊಂಡಿದ್ದಾರೆ. ಹಲವಾರು ಮಹಿಳೆಯರು ಬದಲಿ ವ್ಯವಸ್ಥೆಗಾಗಿ ನಗರದಲ್ಲಿರುವ ಖಾಸಗಿ ಆಸ್ಪತ್ರೆಗಳಿಗೆ ಸಾಲ ಸೋಲ ಮಾಡಿ ಹಣ ಕೂಡಿಸಿ ಹೆರಿಗೆಗೆ ಖರ್ಚು ಮಾಡುತ್ತಿದ್ದಾರೆ.

ನಗರದ ಜಿಲ್ಲಾ ಆಸ್ಪತ್ರೆಯ ಅವ್ಯವಸ್ಥೆ, ಔಷಧಗಳ ವಿತರಣೆ, ಸ್ವಚ್ಛತೆ, ವೈದ್ಯರುಗಳ ಸೇವೆ ಮುಂತಾದವುಗಳ ಕುರಿತು ಇತ್ತೀಚಿಗೆ ವಿಜಾಪುರಕ್ಕೆ ಭೇಟಿ ನೀಡಿದ ಕರ್ನಾಟಕ ಸರಕಾರ ಆರೋಗ್ಯ ಕಾರ್ಯಪಡೆ ಮುಖ್ಯಸ್ಥ ಡಾ। ಸುದರ್ಶನ್ ಹಾಗೂ ಕರ್ನಾಟಕ ಲೋಕಾಯುಕ್ತ ನ್ಯಾ.ಎನ್. ವೆಂಕಟಾಚಲ ಕೂಡ ತುಂಬಾ ಕಳವಳ ವ್ಯಕ್ತಪಡಿಸಿದ್ದಾರೆ. ಹಲವಾರು ಅವ್ಯವಸ್ಥೆಗಳ ಕುರಿತು ಆರೋಗ್ಯ ಇಲಾಖೆಗೆ, ವೈದ್ಯರುಗಳಿಗೆ ಹಾಗೂ ಜಿಲ್ಲಾಡಳಿತಕ್ಕೆ ಸುಧಾರಣಾ ಅಂಶಗಳನ್ನು ತಿಳಿಸಿದ್ದಾರೆ.

ಈ ಎರಡು ಘಟನೆಗಳನ್ನು ವಿರೋಧಿಸಿ ವಿಜಾಪುರ ಜಿಲ್ಲೆಯ ಜನವಾದಿ ಮಹಿಳಾ ಸಂಘದ ನೂರಾರು ಸದಸ್ಯರು ಬೀದಿಗಿಳಿದು ಬೃಹತ್ ಪ್ರತಿಭಟನಾ ಮೆರವಣಿಗೆ ಹಮ್ಮಿಕೊಂಡಿದ್ದರು. ನಗರಸಭೆ ಆಸ್ಪತ್ರೆಯ ಖಾಸಗೀಕರಣ ವಿರೋಧಿಸಿ, ಹಳೆಯ ಸರಕಾರಿ ಹೆರಿಗೆ ಆಸ್ಪತ್ರೆಯ ಸ್ಥಳಾಂತರ ವಿರೋಧಿಸಿ ಘೋಷಣೆಗಳನ್ನು ಕೂಗುತ್ತಾ ನಗರಸಭೆಗೆ ಮುತ್ತಿಗೆ ಹಾಕಲಾಯಿತು. ನಗರಸಭೆ ಆಸ್ಪತ್ರೆಯನ್ನು ಖಾಸಗಿಯವರಿಗೆ ಹಸ್ತಾಂತರಿಸುವ ಕುರಿತು ನಗರಸಭೆ ಕಮೀಷನರ್ ಜೊತೆ ಚರ್ಚೆ ಮಾಡಿದಾಗ, ನಗರಸಭೆ ಲಾಭಗಳಿಸುವ [illegible] ಬೇಡವಾದ ಸಂಗತಿ ಎಂಬುದು ಬೆಳಕಿಗೆ ಬಂತು. ಈ ವಿಷಯದ ಹಿಂದೆ ವಿಜಾಪುರ ನಗರದ ರಾಜಕಾರಣಿಯೊಬ್ಬರ ಹಸ್ತಕ್ಷೇಪವಿರುವುದು ಕೂಡ ಬೆಳಕಿಗೆ ಬಂದಿದೆ. ನಗರಸಭೆ ಆಸ್ಪತ್ರೆಯನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವ ಹುನ್ನಾರ ಬಯಲಾಗಿದೆ. ನಗರಸಭೆ ಮುತ್ತಿಗೆಯ ನಂತರ ಜನವಾದಿ ಮಹಿಳಾ ಸಂಘದ ಸದಸ್ಯರು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಈ ನೀತಿಗಳ ವಿರುದ್ಧ ಘೋಷಣೆ ಕೊಟ್ಟರು. ಜಿಲ್ಲಾಧಿಕಾರಿಗಳಿಗೆ ಸುರೇಖಾ ರಜಪೂತ, ಮನವಿ ಪತ್ರ ಸಲ್ಲಿಸಿ, ಬೇಡಿಕೆಗಳ ಕುರಿತು ಒತ್ತಡ ಹೇರಿದರು. ಜಿಲ್ಲಾಧಿಕಾರಿ ಈ ಕುರಿತು ಸವಿಸ್ತಾರವಾಗಿ ಚರ್ಚೆ ಮಾಡಿ ತಿಳಿಸುವುದಾಗಿ ಉತ್ತರ ನೀಡಿದರು.

ಈ ಘಟನೆಯ ನಂತರ ನಗರಸಭೆ ಹಾಗೂ ಜಿಲ್ಲಾಡಳಿತ ನಗರಸಭೆಯ ಆಸ್ಪತ್ರೆಯನ್ನು ಖಾಸಗೀಯವರಿಗೆ ಹಸ್ತಾಂತರಿಸುವ ವಿಚಾರವನ್ನು ಸದ್ಯದ ಮಟ್ಟಿಗೆ ಕೈಬಿಟ್ಟಿದ್ದಾರೆ. ಇದರಿಂದಾಗಿ ಆ ರಾಜಕಾರಣಿಗಳಿಗೆ ಈ ವಿಷಯದಲ್ಲಿ ಮುಖಭಂಗವಾದಂತಾಗಿದೆ. ಈ ಹೋರಾಟವನ್ನು ಜನವಾದಿ ಮಹಿಳಾ ಸಂಘ ತೀವ್ರಗೊಳಿಸುವುದಾಗಿ ನಗರಸಭೆ ಹಾಗೂ ಜಿಲ್ಲಾಡಳಿತಕ್ಕೆ ಎಚ್ಚರಿಕೆ ನೀಡಿದೆ. ಖಾಸಗೀಕರಣದ ಈ ನೀತಿಯ ವಿರುದ್ಧ ಹೋರಾಟ ನಿರಂತವಾಗಿ ಸಾಗಿದೆ. ಮುಂಬರುವ ದಿನಗಳಲ್ಲಿ ಯಾವ ಪರಿಣಾಮ ಬೀರಲಿದೆಯೆಂಬುವದನ್ನು ಕಾದುನೋಡಬೇಕು.

- ಲಕ್ಷ್ಮಿ ಮೈಲಾರಿ.

**ಕಡ್ಡಾಯ ಪ್ರಾಥಮಿಕ ಶಿಕ್ಷಣದ ಜಾರಿಗೆಂದು ಕರ್ನಾಟಕ ಸರ್ಕಾರ ಮಕ್ಕಳ ಗಣತಿಯನ್ನು ನಡೆಸಿತು. ಅಂತಹ ಸಮೀಕ್ಷೆಯಲ್ಲಿ ಭಾಗಿಯಾದ, ಜನಪರ ಕಾಳಜಿಯುಳ್ಳ ಶಿಕ್ಷಕರಲ್ಲೊಬ್ಬರು ಒಂದು ಗ್ರಾಮದಲ್ಲಿ ಕಂಡ ಮನಮಿಡಿವ ಕ್ರೂರ ವಾಸ್ತವಗಳ ಇಣುಕು ನೋಟ ಇಲ್ಲಿದೆ.**

# ಮಕ್ಕಳ ಗಣತಿಯ ಮನಮಿಡಿಯುವ ಅನುಭವಗಳು

ಹುಲಿಕಟ್ಟೆ ಚನ್ನಬಸಪ್ಪ

ಶಿಕ್ಷಣ ಪಡೆಯುವುದು ಮಕ್ಕಳ ಮೂಲ ಭೂತ ಹಕ್ಕು. ಈ ಹಕ್ಕಿನಿಂದ ಮಕ್ಕಳು ವಂಚಿತರಾಗುವುದನ್ನು ತಡೆಯುವ ಉದ್ದೇಶದಿಂದ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೊಳಿಸಲಾಗಿದೆ. ಆದರಿಂದ ಹದಿನಾಲ್ಕು ವಯೋಮಾನದ ಎಲ್ಲಾ ಮಕ್ಕಳನ್ನು ಶಾಲಾ ಶಿಕ್ಷಣದ ವ್ಯಾಪ್ತಿಗೆ ತರುವ ಉದ್ದೇಶದಿಂದ ಪ್ರತೀ ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ಮಕ್ಕಳ ಗಣತಿ ಕಾರ್ಯವನ್ನು ನಡೆಸಲಾಗುತ್ತಿದೆ. ಈ ಹಿಂದಿನ ಮಕ್ಕಳ ಗಣತಿ ಕಾರ್ಯಗಳಿಗಿಂತ 2000-01ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಸಲಾಗಿರುವ ಮಕ್ಕಳ ಗಣತಿ ಕಾರ್ಯವು ಹೆಚ್ಚು ಮಹತ್ವ ಪಡೆದುಕೊಂಡಿದೆ. ಈ ಮೊದಲು ಶಾಲೆಗೆ ದಾಖಲಾಗಬೇಕಾದ ಮಕ್ಕಳ ಪಟ್ಟಿಯನ್ನು ತಯಾರಿಸುವುದಕ್ಕೆ ಗಣತಿ ಕಾರ್ಯದಲ್ಲಿ ಮುಖ್ಯ ಒತ್ತು ನೀಡಲಾಗುತ್ತಿತ್ತು. ಆದರೆ ಪರಿಷ್ಕರಿಸಲಾದ ಮಕ್ಕಳ ಗಣತಿ ಕಾರ್ಯದಲ್ಲಿ 3 ರಿಂದ 14 ವಯೋಮಾನದ ಮಕ್ಕಳ ಸಮೀಕ್ಷೆ ನಡೆಸಲಾಗುವುದು. ಶಾಲಾ ಪೂರ್ವ ಶಿಕ್ಷಣ ಪಡೆಯುತ್ತಿರುವ ಮಕ್ಕಳೆಷ್ಟು? ಪಡೆಯುತ್ತಿಲ್ಲದವರೆಷ್ಟು? ಅದಕ್ಕೆ ಕಾರಣವೇನು? ಎಂಬ ಮಾಹಿತಿಯನ್ನು ಸಂಗ್ರಹಿಸುವುದರ ಜೊತೆಗೆ, 6 ರಿಂದ 14 ವಯೋಮಾನದ ಮಕ್ಕಳ ಸಮಗ್ರ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಶಾಲೆಗೆ ದಾಖಲಾದ ಮಕ್ಕಳೆಷ್ಟು? ದಾಖಲಾಗದವರೆಷ್ಟು? ಮಧ್ಯದಲ್ಲಿಯೇ ಶಾಲೆ ಬಿಟ್ಟ ಮಕ್ಕಳೆಷ್ಟು? ಇದಕ್ಕೆ ಕಾರಣಗಳೇನು? ಎಂಬ ಮಾಹಿತಿಯನ್ನು ಜಾತಿವಾರು, ಲಿಂಗವಾರು ಪಡೆಯಲಾಗುತ್ತಿದೆ. ವೈದ್ಯಕೀಯ ತಪಾಸಣಾ ವಿಧಾನದಲ್ಲಿ ಸಮೀಕ್ಷೆ ಕಾರ್ಯ ನಡೆಯುತ್ತಿರುವುದು ಅರ್ಥಪೂರ್ಣವೆನಿಸಿದೆ. ವೈದ್ಯರೊಬ್ಬರು ರೋಗದ ಲಕ್ಷಣಗಳನ್ನು ಗುರುತಿಸಿ, ರೋಗವನ್ನು ಪತ್ತೆ ಹಚ್ಚಿ ಔಷದೋಪಚಾರ ಮಾಡುವಂತೆ, ನಮ್ಮ ದೇಶದ ಸಾಮಾಜಿಕ ರೋಗವಾಗಿರುವ ಅನಕ್ಷರತೆಯನ್ನು ತೊಡೆದು ಹಾಕಲು ಈ ವಿನೂತನ ಮಾದರಿಯನ್ನು ಅನುಸರಿಸಿ, ಸಂಪೂರ್ಣ ಸಾಕ್ಷರತಾ ಗುರಿಯನ್ನು ಸಾಧಿಸಲು ದಾಪುಗಾಲು ಹಾಕುವ ಉದ್ದೇಶವನ್ನಂತೂ ಇರಿಸಲಾಗಿದೆ.

**ಹೃದಯಕ್ಕೆ ತಟ್ಟುವ ಅನುಭವ**

ಈ ಮಾದರಿಯಲ್ಲಿ ಒಂದು ತಂಡವಾಗಿ ಮಕ್ಕಳ ಕಾರ್ಯದ ಗಣತಿ ಕಾರ್ಯದ ನಮ್ಮ ಅನುಭವಗಳು ಮನ ಕಲಕುವಂತಿದೆ. ಚಿಕಿತ್ಸಕ ಮನೋಭಾವದಿಂದ ತೊಳೆ ತೊಳೆಯಾಗಿ ಎಳೆ ಎಳೆಯಾಗಿ ಸಮಾಜಕ್ಕೆ ಸವಾಲಾಗಿರುವ ಈ ಸಮಸ್ಯೆಯನ್ನು ಬಿಡಿಸಿ ನೋಡಿದಾಗ ಇದರ ಬಿಸಿ ನೇರವಾಗಿ ಹೃದಯಕ್ಕೆ ತಟ್ಟುವಂತಿದ್ದವು.

**ಬೆಳ್ಳುಳ್ಳಿ ಸರ ಕೊರಳಲ್ಲಿ ಮತ್ತು ಎಪ್ಪತ್ತು ಊರುಗಳ ಹೆಸರು**

ಬಳ್ಳಾರಿ ಜಿಲ್ಲೆಯ ಭತ್ತದ ಖಣಜವೆನಿಸಿರುವ ಸಿರುಗುಪ್ಪ ತಾಲೂಕಿನ ಐತಿಹಾಸಿಕ ಪರಂಪರೆಯಿಂದ ಮೆರೆದ ಗ್ರಾಮ ಕೆಂಚನಗುಡ್ಡ. ನಮ್ಮ ಗಣತಿಯ ಕಾರ್ಯಕ್ಷೇತ್ರ. ರಸ್ತೆಯ ಇಕ್ಕೆಲಗಳಲ್ಲಿರುವ ಸಾಲು ಸಾಲು ತಿಪ್ಪೆಯ ಗುಂಡಿಗಳು ಗ್ರಾಮದ ಪ್ರತಿಯೊಂದು ಓಣಿಯ ಸಂದಿಗೊಂದಿಗಳಲ್ಲಿ ರಾಶಿ ರಾಶಿಯಾಗಿ ಬಿದ್ದಿರುವ ಕಸದ ಕುಪ್ಪೆಗಳು, ರಿಪೇರಿ ಕಾಣದೆ ಸ್ವಚ್ಛ ಮಾಡುವವರಿಲ್ಲದೆ ಗಬ್ಬೆದ್ದು ನಾರುತ್ತಿರುವ ಚರಂಡಿಗಳು, ಝೀ ಎಂದು ಹಾರಾಡುತ್ತಿರುವ ಸೊಳ್ಳೆ ನೊಣಗಳು ಇದು ಈ ಗ್ರಾಮದ ಭೌತಿಕ ದೃಶ್ಯ. ಕೆಂಚನಗುಡ್ಡ ಗ್ರಾಮವು ರೋಗಗಳ ಆಗರವೇ ಸರಿ. ಪ್ರತಿಯೊಂದು ಓಣಿಯಲ್ಲೂ ತಲೆ ನೋವು, ಜ್ವರ, ಇದು ನಾವು ಕಂಡ ಶೋಚನೀಯ ದೃಶ್ಯ.

ಎಲ್ಲಿ ಅನಕ್ಷರತೆ ಇರುತ್ತದೆಯೋ ಅಲ್ಲಿ ಅಜ್ಞಾನ, ಮೂಢನಂಬಿಕೆಗಳು ತಾಂಡವಾಡುತ್ತವೆ. ಇದಕ್ಕೊಂದು ನಿದರ್ಶನ ಇಲ್ಲಿದೆ. ಸಮೀಕ್ಷೆ ಮಾಡುತ್ತಾ ಹೀಗೊಂದು ಮನೆಗೆ ಭೇಟಿ ಕೊಟ್ಟೆವು. ಆ ಮನೆಯ ಮುಂದೆ ನಿಂತಿದ್ದ ಸುಮಾರು ಹತ್ತು ವರ್ಷದ ಹುಡುಗನೊಬ್ಬ ನಮ್ಮ ಗಮನ ಸೆಳೆದ. ಅವನ ಕೊರಳಲ್ಲಿ ತೂಗಾಡುತ್ತಿದ್ದ ಬೆಳ್ಳುಳ್ಳಿ ಸರವೊಂದು ನಮ್ಮ ಕುತೂಹಲವನ್ನು ಕೆರಳಿಸಿತು. ಯಾಕೆ ಈ ಸರ ಹಾಕಿದ್ದೀರೆಂದು ಆ ಮನೆಯ ಯಜಮಾನನನ್ನು ಕೇಳಿದೆವು. ಬಹಳ ದಿನಗಳಿಂದ ಆ ಹುಡುಗನನ್ನು ಬಾಧಿಸುತ್ತಿರುವ ಕೆಮ್ಮು ನಿವಾರಿಸಲು ಬೆಳ್ಳುಳ್ಳಿ ಸರವನ್ನು ಮಾಡಿ ಕೊರಳಲ್ಲಿ ಹಾಕಿದ್ದೇವೆ ಎಂಬುದು ಆತನಿಂದ ಬಂದ ಉತ್ತರ. ಈ ಕೆಮ್ಮು ಬಂದು ಎಪ್ಪತ್ತು ದಿನಗಳಾಗಿರುವುದರಿಂದ ಎಪ್ಪತ್ತು ಊರುಗಳ ಹೆಸರು ಬರೆದು ಆ ಹುಡುಗನ ಕೊರಳಲ್ಲಿ ಕಟ್ಟಿದರೆ ಕೆಮ್ಮು ವಾಸಿಯಾಗುತ್ತದೆ ಎಂಬುದು ಆ ಯಜಮಾನನ ನಂಬಿಕೆ. ಎಪ್ಪತ್ತು ಊರುಗಳ ಹೆಸರು ಬರೆದು ಕೊಡುವಂತೆ ಆ ಯಜಮಾನ ನಮಗೆ ಬೆನ್ನು ಹತ್ತಿದ. ವೈದ್ಯರ ಹತ್ತಿರ ಕರೆದುಕೊಂಡು ಹೋಗಿ ಔಷಧಿ ಕೊಡಿಸು ಎಂದು ಹೇಳಿದೆವು. ರೊಕ್ಕ ಇಲ್ಲ ಹೆಂಗ ಕರದುಕೊಂಡು ಹೋಗಲಿ ಎಂದು ಆತ ಬಿಟ್ಟ ನಿಟ್ಟುಸಿರು ನಮಗೆ ತಗುಲದಿರಲಿಲ್ಲ.



**ದುಡಿಯಾಕ ತ್ರಾಣ ಇಲ್ಲ**

ನಾವು ಭೇಟಿ ನೀಡಿದ ಒಂದೊಂದು ಮನೆಯದೂ ಒಂದೊಂದು ನೋವಿನ ಕಥೆ. ಬಹುತೇಕ ಕೃಷಿ ಕೂಲಿಕಾರರಿಂದಲೇ ತುಂಬಿರುವ ಈ ಗ್ರಾಮ ಜನರ ತಲೆಯ ಮೇಲಿರುವ ಒಂದು ಸೂರು, ಜನನದೊಂದಿಗೆ ಬಂದಿರುವ ದುಡಿಯುವ ಎರಡು ರಟ್ಟೆಗಳು ಮಾತ್ರ. ಯಾಕಮ್ಮ ನಿಮ್ಮ ಮಗನನ್ನು ಶಾಲೆಗೆ ಕಳುಹಿಸುತ್ತಿಲ್ಲ ಎಂದು ಹೆಂಗಸೊಬ್ಬಳನ್ನು ಕೇಳಿದ್ದಕ್ಕೆ 'ಎನ್ ಮಾಡದು ಸಾರೂ ಅವರಪ್ಪ ಟಿ.ಬಿ. ಬಂದು ಸತ್ತ. ನನ್ನ ಮಯ್ಯಾಗ ದುಡಿಯಾಕ ತ್ರಾಣ ಇಲ್ಲ. ಈ ಹುಡುಗ ದುಡೀಬೇಕು ನಾನು ಛಾನ ಕಾಣಬೇಕು. ಅವರಪ್ಪ ಸತ್ತ ಮ್ಯಾಲೆ ಮಗನೂ ಈತನೇ ಮನೆ ಯಜಮಾನನೂ ಈತನೆ' ಎಂದು ಕಣ್ಣೀರು ಸುರಿಸಿದಳು.

**ಕಬಂಧ ಬಾಹುಗಳಲ್ಲಿ ಬಾಲ್ಯ**

ಪಕ್ಕದ ಮನೆಯ ಹೆಂಗಸಿನದು ಮತ್ತೊಂದು ಕಣ್ಣೀರ ಕಥೆ. ಗಂಡನೊಡನೆ ಜಗಳವಾಡಿ ಮೊಮ್ಮಗನನ್ನು ಕರೆದುಕೊಂಡು ತವರು ಮನೆ ಸೇರಿದ ಸೊಸೆ. ದುಡಿಯಲಾರದ ಹೊಣಗೇಡಿ ಮಗ. ಮೊಮ್ಮಗನನ್ನು ಓದಿಸುವ ಹಂಬಲ ಆಕೆಯದು. ಒಡೆದ ಸಂಸಾರದ ಗೋಳು ತೋಡಿಕೊಂಡು ಆ ಹೆಂಗಸು ಬಿಕ್ಕಿ ಬಿಕ್ಕಿ ಅತ್ತಳು. ಮನ ಕಲಕುವ ಇಂತಹ ಹತ್ತಾರು ಕಥೆಗಳು ನಮ್ಮ ಮುಂದೆ ಬಿಚ್ಚಿಕೊಂಡವು. ಶಾಲೆಗೆ ದಾಖಲಾಗಿರುವ ಬಹಳಷ್ಟು ಮಕ್ಕಳು ಬೇರೆ ಬೇರೆ ಪಡೆಗಳಾಗಿ ಹಂಚಿ ಹೋಗಿದ್ದಾರೆ. ಉರಿ ಬಿಸಿಲಲ್ಲಿ ಎಳೆಯ ನಡು ಬಗ್ಗಿಸಿ ಕೆಸರು ಗದ್ದೆಯಲ್ಲಿ ದುಡಿಯುವ ಬಾಲ ಕೃಷಿ ಕಾರ್ಮಿಕ ಪಡೆ ಒಂದಾದರೆ, ದನ ಕಾಯುವ ಹಿಂಡು ಮತ್ತೊಂದು ಹಾಲು ಕುಡಿಯುವ ಹಸುಗೂಸಿನಿಂದ, ಮೂರು ವರ್ಷದವರೆಗಿನ ತಂಗಿ, ತಮ್ಮನನ್ನು ಅಮ್ಮ ಕೂಲಿಯಿಂದ ಹಿಂತಿರುಗಿ ಬರುವವರೆಗೆ ಜೋಪಾನ ಮಾಡುವ ಹೊಣೆ ಮತ್ತೆ ಕೆಲವು ಮಕ್ಕಳದು. ಈ ಎಲ್ಲಾ ಸಮಸ್ಯೆ ಮೂಲ ಕಾರಣ ಒಂದೇ ಅದು ಬಡತನ. ಈ ಬಡತನ ಎಂಬ ಭೂತ ಮಕ್ಕಳ ಅರಳುವ ಪ್ರತಿಭೆಗಳನ್ನು ತನ್ನ ಕಾಲಲ್ಲಿ ಮೆಟ್ಟಿ ಹೊಸಕಿ ಹಾಕಿದೆ. ಮಕ್ಕಳ ಸುಂದರ ಕನಸುಗಳನ್ನು ನುಂಗಿ ಹಾಕಿರುವ ಈ ಭೂತ ತನ್ನ ಕಬಂಧ ಬಾಹುಗಳಲ್ಲಿ ಮಕ್ಕಳ ಹಕ್ಕುಗಳನ್ನು ಬಂಧಿಸಿದೆ. ಬಡತನ ನಿರ್ಮೂಲನೆಯೇ ಶೈಕ್ಷಣಿಕ ಪ್ರಗತಿಯ ಏಕೈಕ ದಾರಿ, ಎಲ್ಲಿ ಬಡತನ ಇರುತ್ತದೆಯೋ ಅಲ್ಲಿ ಅನಕ್ಷರತೆ, ಅಜ್ಞಾನ, ಮೂಢನಂಬಿಕೆ, ಅನಾರೋಗ್ಯ ತುಂಬಿರುತ್ತವೆ. ನಾವು ಗಣತಿ ಮಾಡಿದ ಕೆಂಚನಗುಡ್ಡ ಗ್ರಾಮವೇ ಇದಕ್ಕೆ ಜ್ವಲಂತ ಸಾಕ್ಷಿಯಾಗಿದೆ. ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆಗೆ ನಮ್ಮ ಸರಕಾರ ಹಮ್ಮಿಕೊಳ್ಳುತ್ತಾ ಬಂದಿರುವ ಕಡ್ಡಾಯ ಪ್ರಾಥಮಿಕ ಶಿಕ್ಷಣದ ಯೋಜನೆಗಳು ಈ ಬಡತನದ ಕಾರಣದಿಂದ ನಿರೀಕ್ಷಿತ ಯಶಸ್ಸು ಕಾಣದೆ ಹೋಗಿದೆ. ಇನ್ನು ಮುಂದೆ ಹಾಗಾಗಬಾರದಲ್ಲವೇ? ಹಾಗಾದರೆ ನಾವೇನು ಮಾಡೋಣ?

---

## ....ನೀವು ಧರ್ಮ ನಿರಪೇಕ್ಷತೆಯ ಪರವೋ, ವಿರುದ್ಧವೋ?

ಪುಟ 5 ರಿಂದ

ವಿಚ್ಛಿದ್ರಕಾರಿ ಸೂರೆಗಳ ವಿರುದ್ಧ ಭದ್ರ ಕೋಟೆ ಎಂಬ ಅರಿವು ಅವರಿಗಿದೆ. ಕಳೆದ ಒಂದು ತಿಂಗಳು ಭಾರತೀಯರ ಧರ್ಮನಿರಪೇಕ್ಷತೆಯ ಪರಂಪರೆಗೆ ಸಾಕ್ಷಿ. ಉದಾಹರಣೆ, ಗೋದ್ರಾ ದುರಂತದ ಮರುದಿನವೇ ಕೋಮುಗಲಭೆಗಳು ಆಗಾಗ ನಡೆಯುವ ಅಲೀಗಡ್‌ನಲ್ಲಿ ಇಬ್ಬರು ಮುಸ್ಲಿಮರು ಪ್ರತ್ಯೇಕ ಘಟನೆಗಳಲ್ಲಿ ಕೊಲೆಯಾದರು. ಹರ್ಯಾಣದ ಭವಾನಿ ಜಿಲ್ಲೆಯಲ್ಲಿ ಒಂದು ಮಸೀದಿಗೆ ಬೆಂಕಿ ಹಚ್ಚಲಾಯಿತು. ಚಿತ್ತೂರು, ಜಮ್ಮು ಮತ್ತಿತರ ಕಡೆಗಳಿಂದ ಅಲ್ಲಲ್ಲಿ ಘಟನೆಗಳು ವರದಿಯಾದವು. ವಿನಯ್ ಕಟಿಯಾರ್‌ನಂತವರು ಉದ್ರೇಕವಾಗಿ ಹೇಳಿಕೆಗಳನ್ನು ಕೊಡುತ್ತಲೇ ಇದ್ದರು. ಆದರೂ ಗುಜರಾತ್ ಹಿಂಸಾಕಾಂಡವನ್ನು ಬೇರೆಡೆಗೆ ಹರಡಿಸುವಲ್ಲಿ ಸಂಘಪರಿವಾರ ಸಂಪೂರ್ಣ ವಿಫಲವಾಯಿತು. ನಿಜವಾಗಿಯೂ ಭಾರತೀಯ ಜನಸಾಮಾನ್ಯರು ಹಾರ್ದಿಕ ಶುಭಾಶಯಗಳಿಗೆ ಯೋಗ್ಯರು.

ಅತ್ತ ದಿಲ್ಲಿಯ ಜನತೆ ಬಿಜೆಪಿ ಭಾರೀ ಸೋಲುಣಿಸಿದರು. ಬಿಜೆಪಿ ಸರಕಾರ ಜನ-ವಿರೋಧಿ ನೀತಿಗಳನ್ನು ಜನ ಸಹಿಸುವುದಿಲ್ಲ, ಕೋಮುವಾದೀ ಅಬ್ಬರವನ್ನು ಸಹಿಸುವುದಿಲ್ಲ ಎಂಬುದನ್ನು ಇದು ತೋರಿಸಿಕೊಟ್ಟಿದೆ. ಹಿಂದೆಂದೂ ಒಂದು ಸ್ಥಳೀಯ ಚುನಾವಣೆಗೆ ಈ ರೀತಿ ರಾಷ್ಟ್ರೀಯ ಮಹತ್ವ ಬಂದಿರಲಿಲ್ಲ. ಬಿಜೆಪಿ ತನ್ನ ಅತ್ಯಂತ ಭದ್ರಕೋಟೆಯಲ್ಲಿಯೂ ನೆಲಕಚ್ಚಿತು.

**ಎನ್.ಡಿ.ಎ. ಮಿತ್ರರು ಕಣ್ಣು ತೆರೆಯಲಿ**

ಒಂದೆಡೆ ಜನಗಳ ಈ ಪ್ರತಿಕ್ರಿಯೆ ಮತ್ತು ಇನ್ನೊಂದೆಡೆ ಕೇಂದ್ರ ಸರಕಾರದ ನೇರ, ಪರೋಕ್ಷ ಶಾಮೀಲು ಬಿಜೆಪಿ ಮತ್ತು ಶಿವಸೇನೆ ಬಿಟ್ಟು ಎನ್.ಡಿ.ಎನ ಇತರ ಪಕ್ಷಗಳು, ಮಿತ್ರರ ಕಣ್ಣು ತೆರೆಸಬೇಕು ಇದುವರೆಗೆ ಅಧಿಕಾರಕ್ಕಾಗಿ ಈ ಪಕ್ಷಗಳು ಬಿಜೆಪಿಯೊಡನೆ ತಮ್ಮ ಮೈತ್ರಿಯನ್ನು ಒಂದಿಲ್ಲೊಂದು ನೆವ ಹೇಳಿ ಸಮರ್ಥಿಸಿಕೊಳ್ಳುತ್ತಿದ್ದವು. ಆದರೆ ಗುಜರಾತ್ ಹಿಂಸಾಕಾಂಡ, ವಿಶೇಷವಾಗಿ ಮಾನವ ಹಕ್ಕುಗಳ ಆಯೋಗ ಸಂಘ ಪರವಾರದ ಪಾತ್ರವನ್ನು ಬಯಲಿಗೆಳೆದ ಮೇಲೆ ಅವರ ಬಳಿ ಈಗ ಯಾವುದೇ ನೆವ ಉಳಿಯದಂತೆ ಮಾಡಿದೆ. ಈಗ ವಿಭಾಜನ ರೇಖೆಯನ್ನು ಸ್ಪಷ್ಟವಾಗಿ ಎಳೆದಾಗಿದೆ. ತಾನು ಧರ್ಮನಿರಪೇಕ್ಷತೆಯ ಪರವೋ, ವಿರುದ್ಧವೋ ಎಂದು ಪ್ರತಿಯೊಬ್ಬ ವ್ಯಕ್ತಿ, ಪ್ರತಿಯೊಂದು ಸಂಘಟನೆ, ಪ್ರತಿಯೊಂದು ವೇದಿಕೆ, ಪ್ರತಿಯೊಂದು ಪಕ್ಷ ಹೇಳಬೇಕಾಗಿದೆ. ಶಬ್ದಗಳ ಕಸರತ್ತಿಗೆ ಇನ್ನೂ ಅವಕಾಶವಿಲ್ಲ.

ಹೌದು, ಎನ್.ಡಿ.ಎಯ ಮಿತ್ರರು ನೆವಹೇಳಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಅವರ ಪರೀಕ್ಷೆ ನಡೆದಿದೆ. ಫೆಬ್ರವರಿ 28 ಅಥವಾ ಮಾರ್ಚ್ 1 ರಂದು ಅವರೊಂದು ದೃಢ ನಿಲುವು ತಳೆದಿದ್ದರೆ ಗುಜರಾತಿಗೆ ಸೇನೆ ಕಳಿಸಲಾಗುತ್ತಿತ್ತು, ನೂರಾರು ಮುಗ್ಧ ಜೀವಿಗಳ ಪ್ರಾಣ ಉಳಿಯುತ್ತಿತ್ತು. ಇಲ್ಲ, ಈ ಮಿತ್ರರು ಅಂತದ್ದೇನೂ ಮಾಡಲಿಲ್ಲ. ಒಬ್ಬ ಗಂಭಿರ್ಣಿಯ ಗರ್ಭಸೀಳಿ ಭ್ರೂಣವನ್ನು ಖಡ್ಗಕ್ಕೆ ಆಹುತಿಮಾಡಿದ ಪಾಪದಲ್ಲಿ ಈ ಮಿತ್ರರಿಗೂ ಪಾಲಿಲ್ಲವೇ?

ಈ ಹಿಂಸಾಕಾಂಡ ಹತ್ತು ಹಲವು ರೀತಿಗಳಲ್ಲಿ ಬಲಿ ತೆಗೆದುಕೊಳ್ಳುತ್ತದೆ. ಉದಾಹರಣೆಗೆ ಮಾರ್ಚ್ 30ರ 'ಸ್ಟೇಟ್ಸ್‌ಮನ್' ಪತ್ರಿಕೆಯ ಸುದ್ದಿ ನೋಡಿ ಬರೋಡಾದ ದಂಪತಿಗಳು ಆತ್ಮಹತ್ಯೆಯ ಮಾಡಿಕೊಂಡರಂತೆ. ಏಕೆಂದರೆ ಹಿಂಸಾಕಾಂಡ, ಕರ್ಫ್ಯೂಗಳಿಂದಾಗಿ ಅವರ ದಿನದ ಆದಾಯವೂ ಸಿಗಲಿಲ್ಲ. ಗಮನಿಸಿ, ಅವರು ಮುಸಲ್ಮಾನರಲ್ಲ, ಕ್ರೈಸ್ತರಲ್ಲ, ಹಿಂದೂಗಳು ಹಿಂದುತ್ವ ಗುತ್ತಿಗೆದಾರರು ಕೇವಲ ಅಲ್ಪಸಂಖ್ಯಾತರನ್ನಷ್ಟೇ ಕೊಲ್ಲುತ್ತಿಲ್ಲ. ಎನ್.ಡಿ.ಎ ಪಾಲುಗಾರಿಗೆ ಈ ಆತ್ಮಹತ್ಯೆಯ ಪಾಪದಲ್ಲೂ ಪಾಲಿದೆ.

ಎನ್.ಡಿ.ಎ ಅಂಗಪಕ್ಷಗಳ ಮುಂದಿರುವ ಆಯ್ಕೆಯೀಗ ಒಂದೇ- ನಿರ್ಧರಿಸಿರಿ ಇಲ್ಲವೇ ನಾಶವಾಗಿರಿ. ಇದರಿಂದ ಯಾವ ರೀತಿಯಲ್ಲೂ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಎಡ ಪ್ರಜಾಪ್ರಭುತ್ವವಾದಿ ಮತ್ತು ಧರ್ಮನಿರಪೇಕ್ಷ ಶಕ್ತಿಗಳೂ ಕೂಡ ಒಟ್ಟಾಗಿ ಎದ್ದುನಿಲ್ಲಬೇಕಾದ ಸಮಯವಿದು. ಕೋಮುವಿಭಜನೆಯನ್ನು ಇನ್ನೆಂದೂ ತಲೆಯೆತ್ತದಂತೆ ಹೂತುಬಿಡಬೇಕಾಗಿದೆ. ಅವರು ಸಂಸತ್ತಿನ ಒಳಗೂ, ಹೊರಗೂ ಹೋರಾಡಬೇಕಿದೆ. ಅಗತ್ಯಬಿದ್ದರೆ ಸಂಸತ್ತು ಮತ್ತು ಶಾಸನಸಭೆಗಳು ಕೆಲಸ ಮಾಡದಂತೆಯೂ ಮಾಡಬೇಕು. ಈ ಹೋರಾಟವನ್ನು ಕಾರ್ಖಾನೆಗಳಿಗೆ, ಗದ್ದೆಗಳಿಗೆ, ಕಚೇರಿಗಳಿಗೆ ಮತ್ತು ಶಿಕ್ಷಣ ಸಂಸ್ಥೆಗಳವರೆಗೆ ಒಯ್ಯಬೇಕು. ತಕ್ಷಣ ಮಾಡಬೇಕಾದ ಕೆಲಸವೆಂದರೆ ಮೋದಿ ಮತ್ತು ಅಡ್ವಾಣಿ ರಾಜೀನಾಮೆ ಕೊಡುವಂತೆ ಒತ್ತಡ ತರುವುದು. ಭಾರತ ಒಂದು ಧರ್ಮನಿರಪೇಕ್ಷ ದೇಶವಾಗಿತ್ತು, ಧರ್ಮನಿರಪೇಕ್ಷ ದೇಶವಾಗಿಯೇ ಉಳಿಯುತ್ತದೆ, ನಮ್ಮ ಸಮಿಶ್ರ ಸಂಸ್ಕೃತಿಯನ್ನು ನಾಶಮಾಡಲು ಪ್ರಯತ್ನ ಮಾಡುವ ಕೈಗಳನ್ನು ಮುರಿಯುವ ಶಕ್ತಿ ನಮ್ಮ ಜನತೆಗಿದೆ ಎಂದು ಇಡೀ ಜಗತ್ತಿಗೆ ಹೇಳಬೇಕಾಗಿದೆ.

# ಗುಜರಾತ್: ಸರ್ಕಾರದ ಪಾತಕಗಳು ಮತ್ತು ಎನ್‌ಡಿಎ ಭವಿಷ್ಯ

**ಗುಜರಾತ್‌ನಲ್ಲಿ ಮಾರಣಹೋಮದ ಬಗ್ಗೆ ರಾಷ್ಟ್ರೀಯ ಮಾನವಹಕ್ಕುಗಳ ಆಯೋಗದ ವರದಿಯ ವಿವರಗಳು ಬೆಚ್ಚಿ ಬೀಳಿಸುವಂತಹವು. ಈ ಪಾತಕದಲ್ಲಿ ಮೋದಿ ಸರ್ಕಾರದ ಭಾಗಿತ್ವವನ್ನು ಸ್ಪಷ್ಟವಾಗಿ ಗುರುತಿಸಿರುವ ಆಯೋಗ ಎತ್ತಿರುವ ಪ್ರಶ್ನೆಗಳಿಗೆ ಉತ್ತರ ಹೇಳಲೇಬೇಕಾಗಿದೆ. ಈ ಪಾತಕದಲ್ಲಿ ಪಾಲುದಾರತ್ವವನ್ನು ಎನ್‌ಡಿಎ - ಮೈತ್ರಿಕೂಟದ ಇತರ ಪಕ್ಷಗಳೂ ಈಗಲಾದರೂ ಹೊರಬೇಕು. ಅಲ್ಲಿಂದ ಹೊರ ನಡೆಯಬೇಕು ಎಂದು ಎಚ್ಚರಿಸಿದ್ದಾರೆ.**

**ಹರ್ಕಿಶನ್ ಸಿಂಗ್ ಸುರ್ಜಿತ್**

ಗುಜರಾತಿನಲ್ಲಿ ಆರ್.ಎಸ್.ಎಸ್., ವಿ.ಹೆಚ್.ಪಿಗಳಿಂದ ಹಿಂಸಾಚಾರ ತಟ್ಟಿರುವ ಪ್ರದೇಶಗಳಿಗೆ ಭೇಟಿ ನೀಡಿ ಬಂದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಹೆಚ್‌ಆರ್‌ಸಿ) ಈಗ ಒಂದು ವರದಿ ಪ್ರಕಟಿಸಿದೆ. "ಪ್ರಾರಂಭಿಕ ಟಿಪ್ಪಣಿಗಳು" ಎಂಬ ಈ ವರದಿ ರಾಜ್ಯದಲ್ಲಿನ ಆರ್‌ಎಸ್‌ಎಸ್ ಹತೋಟಿಯ ನರೇಂದ್ರ ಮೋದಿ ಸರಕಾರವನ್ನು ತೀವ್ರವಾಗಿ ಟೀಕಿಸಿದೆ. ಮೂವರು ಸದಸ್ಯರಿದ್ದ ಆಯೋಗದ ಈ ತಂಡದ ಭೇಟಿ ನಡೆಯದಂತೆ ರಾಜ್ಯ ಸರಕಾರ ಮತ್ತು ಸಂಘ ಪರಿವಾರ ಹಲವಾರು ಅಡ್ಡಿ ಆತಂಕಗಳನ್ನು ಒಡ್ಡಿತ್ತು ಎಂಬುದನ್ನು ಇಲ್ಲಿ ಗಮನಿಸಬಹುದು. ಕೆಲವು ಬಾರಿ ಈ ಆಯೋಗದ ತಂಡದ ಸದಸ್ಯರಿಗೆ ಅಗತ್ಯ ಭದ್ರತೆಯನ್ನು ಒದಗಿಸಲಿಲ್ಲ ಎಂದೂ ವರದಿಯಾಗಿದೆ.

ಆಯೋಗದ ವರದಿಯ ಮೊದಲ ಗಮನಾರ್ಹ ಅಂಶ ಎಂದರೆ ಫೆಬ್ರವರಿ 27 ರಂದು ಹಿಂಸಾಚಾರ ಭುಗಿಲೆದ್ದ 72 ಗಂಟೆಗಳೊಳಗೆ ಅದನ್ನು ಹತೋಟಿಗೆ ತರಲಾಯಿತು ಎಂಬ ಗುಜರಾತ್ ಮುಖ್ಯ ಮಂತ್ರಿಯ ಹೇಳಿಕೆಯನ್ನು ಅದು ಸಂಪೂರ್ಣವಾಗಿ ತಿರಸ್ಕರಿಸಿದೆ. "ಈ ಕಲಾಪಗಳನ್ನು ಬರೆಯುವ ವೇಳೆಗೂ ಹಿಂಸಾಚಾರ ಮುಂದುವರೆಯುತ್ತಿದೆ" ಎಂದು ತಂಡ ಗಮನಿಸಿದೆ.

"ಈ ಘಟನೆಗಳು ನಾಗರಿಕರ ಜೀವನ, ಸ್ವಾತಂತ್ರ್ಯ, ಸಮಾನತೆ ಮತ್ತು ಘನತೆಯ ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗಿ" ಪರಿಣಮಿಸಿರುವುದರಿಂದ "ಸಂವಿಧಾನಕ್ಕೆ ವಿಧೇಯತೆಯ ಗಂಭೀರ ಪ್ರಶ್ನೆಗಳೇಳುತ್ತವೆ" ಎಂದು ಆಯೋಗದ ತಂಡ ಹೇಳಿದೆ. ಇದು ನಿಜವಾಗಿಯೂ ಮೋದಿ ಸರಕಾರದ ಬಗ್ಗೆ ಒಂದು ಕಟುವಾದ ತೀರ್ಪು.

ಆಯೋಗ ಮೋದಿ ಸರ್ಕಾರದ ಮುಂದೆ ಈ ಆರೋಪಗಳನ್ನು ಇಟ್ಟಿದೆ. 1. "ಗುಪ್ತಾಚಾರ ಮಾಹಿತಿ ಸಂಗ್ರಹ ಮತ್ತು ಕಾರ್ಯಚರಣೆಯಲ್ಲಿ ಗಂಭೀರ ವಿಫಲತೆ, 2. "ಜೀವ ರಕ್ಷಣೆಯಲ್ಲಿ ವಿಫಲತೆ", 3. ನಡೆಯುತ್ತಿರುವ ವಿಚಾರಣೆಗಳಲ್ಲಿ 'ಹೊರಗಿನ ಅಂಶಗಳ ಅಥವಾ ವ್ಯಕ್ತಿಗಳ" ಪ್ರಭಾವ. 4. ಅಲ್ಪಸಂಖ್ಯಾತರ ವಿರುದ್ಧ ಪೋಲಿಸ್ ಮತ್ತು ಆಡಳಿತ ಪೂರ್ವಾಗ್ರಹ. 5. ಲೂಟಿಕೋರ ಜನ ಜಂಗುಳಿಯೊಂದಿಗೆ ಪೋಲೀಸ್ ಮತ್ತು ಆಡಳಿತದ ಶಾಮೀಲು ಮತ್ತು 6. ಪರಿಹಾರ ಮತ್ತು ಮರುವಸತಿ ಕೆಲಸದ ಬಗ್ಗೆ ನಿರ್ಲಕ್ಷ್ಯದ ನಿಲುವು ಈ ಕೊನೆಯ ಅಂಶದ ಬಗ್ಗೆ ಹೇಳುತ್ತಾ ಆಯೋಗದ ತಂಡದ ಭೇಟಿಯವರೆಗೆ ಹಲವು ದೊಡ್ಡ ಪರಿಹಾರ ಕ್ಯಾಂಪುಗಳಿಗೆ ಉನ್ನತಮಟ್ಟದ ರಾಜಕೀಯ ಮತ್ತು ಆಡಳಿತ ಮಂದಿ ಭೇಟಿ ನೀಡಲೇ ಇಲ್ಲ ಎಂದು ವರದಿ ನಿರ್ದಿಷ್ಟವಾಗಿ ಹೇಳಿದೆ. "ಇದು ಪಕ್ಷಪಾತ ದೃಷ್ಟಿಕೋನದಿಂದ ಮೂಡಿಬಂದ ಕಾಯಿಲೆಗಳ ಸ್ವರೂಪವನ್ನು ಸೂಚಿಸುತ್ತದೆ ಎಂದು ಈ ಕ್ಯಾಂಪುಗಳಲ್ಲಿನವವರು ಬಗೆದಿದ್ದಾರೆ" ಎನ್ನುತ್ತದೆ ವರದಿ. ಪೊಲೀಸ್ ಪಡೆ ಗಲಭೆಕೋರ ಶಕ್ತಿಯಾಗಿ ಆರ್.ಎಸ್.ಎಸ್. ವಿಹೆಚ್‌ಪಿ ಗಲಭೆಕೋರರೊಂದಿಗೆ ಶಾಮೀಲಾಗಿದೆ ಎಂಬ ವರದಗಳನ್ನು ವರದಿಯಲ್ಲಿ ಬಳಸದಿದ್ದರೂ ಹಲವೆಡೆ ಹೀಗಾಗಿರುವುದು ಸ್ಪಷ್ಟ.


**ಭಯದ ಭಾವನೆಗೆ ದನಿ**

ರಾಜ್ಯ ಸರಕಾರ ಈ ಆರೋಪಗಳಿಗೆ ಮನದಟ್ಟಾಗುವಂತೆ ಉತ್ತರ ಕೊಡದಿದ್ದರೆ ಅದರಿಂದ ಪ್ರತಿಕೂಲ ಅರ್ಥ ಹೊರಡುತ್ತದೆ, ಇದಕ್ಕೆ ರಾಜ್ಯ ಸರಕಾರವೇ ಜವಾಬುದಾರವಾಗಬೇಕಾಗುತ್ತದೆ ಎಂದು ಆಯೋಗ ಎಚ್ಚರಿಸಿದೆ.

ಏನು ಮಾಡಬೇಕೆಂಬ ಬಗ್ಗೆ ರಾಷ್ಟ್ರೀಯ ... ಸೂಚಿಸಿದೆ. 1. ನಿರ್ದಿಷ್ಟ ಗಂಭೀರ ಕೇಸುಗಳನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು. 2. ಪ್ರತಿದಿನವೂ ಕೇಸುಗಳ ವಿಚಾರಣೆಯಾಗುವಂತೆ ವಿಶೇಷ ನ್ಯಾಯಾಲಯಗಳನ್ನು ರಚಿಸಬೇಕು, ಇವಕ್ಕೆ ನ್ಯಾಯಾಧೀಶರನ್ನು ಗುಜರಾತಿನ ಮುಖ್ಯ ನ್ಯಾಯಾಧೀಶರು ಆರಿಸಬೇಕು. 3. ಹಿಂಸಾಚಾರವನ್ನು ಹತೋಟಿಗೆ ತರುವಲ್ಲಿ ವಿಫಲರಾದ ಅಥವಾ ಅದು ಹರಡಲು ಬಿಟ್ಟ ಎಲ್ಲಾ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಹಾಗೂ ತಮ್ಮ ಕರ್ತವ್ಯವನ್ನು ಚೆನ್ನಾಗಿ ನೆರವೇರಿಸಿದವರನ್ನು ಪ್ರಶಂಸಿಸಬೇಕು. 4. ನಿರ್ಗತಿಕ ಮಹಿಳೆಯರು, ಅನಾಥರು ಮತ್ತು ಅತ್ಯಾಚಾರಕ್ಕೆ ಒಳಗಾದವರನ್ನು ಗುರುತಿಸಬೇಕು ಮತ್ತು ಅವರಿಗೆ ಮಾನಸಿಕ ಚಿಕಿತ್ಸೆ ಮತ್ತು ಸಲಹಾ ಸೇವೆಗಳನ್ನು ಒದಗಿಸಬೇಕು.

"ಕ್ಯಾಪುಗಳಲ್ಲಿ ಇರುವವರಿಗೆ ಸೂಕ್ತ ಪರಿಹಾರ ಮತ್ತು ಮರು ವಸತಿ ವ್ಯವಸ್ಥೆಗಳಾಗುವವರೆಗೆ, ಭದ್ರತೆಯ ಭರವಸೆ ಅವರಿಗೆ ಬರುವವರೆಗೆ ಅವರನ್ನು ಕ್ಯಾಂಪುಗಳನ್ನು ಬಿಡುವಂತೆ ಹೇಳಬಾರದು" ಎಂಬ ಸಲಹೆ ರಾಜ್ಯ ಸರಕಾರದ ಮುಖಕ್ಕೆ ರಾಚುವಂತಹ ಹೇಳಿಕೆ. ಹೀಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಹಿಂಸಾಚಾರದಲ್ಲಿ ಬದುಕುಳಿದವರನ್ನು ಕಾಡುತ್ತಿರುವ ಆಳವಾದ ಭಯದ ಭಾವನೆಗೆ ದನಿ ನೀಡಿದೆ. ಆದರೆ ಆಯೋಗದ ಈ ಸಲಹೆಯನ್ನು ನಿರರ್ಥಕಗೊಳಿಸುವಂತೆ ಕಾಣುತ್ತಿದೆ. ಭಯದಿಂದ ಮನೆಬಿಟ್ಟು ಹೋದವರ ಮನೆಗಳನ್ನು ಸುಡುವುದರಲ್ಲಿ ಈಗಲೂ ಕೋಮುವಾದಿ ಗೂಂಡಾಗಳು ನಿರತರಾಗಿದ್ದಾರೆ ಎಂದು ಏಪ್ರಿಲ್ 2 ರ 'ಇಂಡಿಯನ್ ಎಕ್ಸ್‌ಪ್ರೆಸ್' ವರದಿ ಮಾಡಿದೆ. ಹಿಂಸಾಕಾಂಡದಿಂದ ಪೀಡಿತರಾದವರು ಮರಳಲು ಮನೆಯೇ ಇಲ್ಲದಂತೆ ಮಾಡುವ ಪ್ರಯತ್ನವಿದು ಎಂಬುದು ಸ್ಪಷ್ಟ.

ಆಯೋಗ ಈ ವಿಷಯದಲ್ಲಿ ಮುಂದುವರೆಯುವ ಮೊದಲು ಮೋದಿ ಸರ್ಕಾರಕ್ಕೆ ಮತ್ತು ಕೇಂದ್ರ ಗೃಹ ಇಲಾಖೆಗೆ ಎರಡು ವಾರಗಳ ಅವಧಿ




**ಜಗತ್ತನ್ನು ಅಥವಾ ಭಾರತೀಯರನ್ನು ಹೇಗೆ ಎದುರಿಸುವುದು ಎಂಬ ಚಿಂತೆ ನಿಜವಾಗಿಯೂ ವಾಜಪೇಯಿಯವರಿಗಿದ್ದರೆ ಉತ್ತರ ಇಲ್ಲಿದೆ. ಮೊಸಳೆ ಕಣ್ಣೀರು ನಿಲ್ಲಿಸಿ, ಮೋದಿಯನ್ನು ಅಧಿಕಾರದಿಂದ ತೊಲಗಿಸಿ**

- 'ದಿ ಎಕಾನಾಮಿಕ್ಸ್ ಟೈಂಸ್' ಸಂಪಾಕೀಯ

ನೀಡಿದೆ. ವರದಿಯ ಒಂದು ಪ್ರತಿಯನ್ನು ಏಪ್ರಿಲ್ 1ರ ಸಂಜೆ ಪ್ರಧಾನ ಮಂತ್ರಿಗಳಿಗೆ ಕಳಿಸಲಾಗಿದೆ.

**ಬಟ್ಟಬಯಲಾಗಿರುವ ಸುಳ್ಳುಗಳು.**

ಹೀಗೆ ಆಯೋಗದ ವರದಿ ಕಳೆದ ಸುಮಾರು ಒಂದು ತಿಂಗಳಿಂದ ಗುಜರಾತಿನ ಮುಖ್ಯಮಂತ್ರಿ, ಕೇಂದ್ರ ಗೃಹ ಮಂತ್ರಿ ಮತ್ತು ಆರ್.ಎಸ್.ಎಸ್. ಚಿಂದಿ-ಚಿಂದಿ ಮಾಡಿದೆ. ಸಿಪಿಐ(ಎಂ), ಲೋಕ ಮೋರ್ಚಾ, ಕಾಂಗ್ರೆಸ್ ಮತ್ತಿತರ ರಾಜಕೀಯೇತರ ಸಂಘಟನೆಗಳು ಕಳಿಸಿದ ತಂಡಗಳು ಈ ಹಿಂದೆ ಹೇಳಿದ್ದನ್ನು ಆಯೋಗದ ವರದಿ ಸಾಬೀತು ಮಾಡಿದೆ. ಈ ವಿವಿಧ ತಂಡಗಳು ಭೇಟಿ ನೀಡದಂತೆ, ಹಿಂಸಾಕಾಂಡಕ್ಕೆ ಒಳಗಾದವರನ್ನು ಕಾಣದಂತೆ ರಾಜ್ಯ ಸರಕಾರ ಹಲವು ತಂತ್ರಗಳನ್ನು ಹೂಡಿತ್ತು. ಆದರೆ ಅವು ಎಲ್ಲ ಯಶಸ್ವಿಯಾಗಲಿಲ್ಲ. ಗುಜರಾತಿನ ಭೀಕರ ಚಿತ್ರವನ್ನು ದೇಶಕ್ಕೆ, ಜಗತ್ತಿಗೆ ತಿಳಿಸಲು ಈ ತಂಡಗಳಿಗೆ ಸಾಧ್ಯವಾಯಿತು.

ಗುಜರಾತಿನ ಈ ಎಲ್ಲಾ ಘಟನೆಗಳು ಆರ್.ಎಸ್.ಎಸ್. ನೇತೃತ್ವದ ಸಂಘಟನೆಗಳು ತಮ್ಮ ರಾಷ್ಟ್ರ ವಿರೋಧಿ ತಂತ್ರಗಳನ್ನು ಈಡೇರಿಸಿಕೊಳ್ಳಲು ಎಂತಹ ರಾಕ್ಷಸೀ ಕೃತ್ಯಗಳಿಗೆ ಇಳಿಯಬಲ್ಲವು ಎಂಬುದನ್ನು ತೋರಿಸಿಕೊಟ್ಟಿದೆ. ಉತ್ತರ ಪ್ರದೇಶ ಮತ್ತು ಮೂರು ರಾಜ್ಯಗಳಲ್ಲಿ ಬಿಜೆಪಿ ಸೋಲುಂಡ ತಕ್ಷಣವೇ ಈ ಪಡೆಗಳು ತಡ ಮಾಡದೆ ಗುಜರಾತಿಗೆ ಬೆಂಕಿಯಿಟ್ಟವು. ಈ ಹಿಂಸಾಕಾಂಡಕ್ಕೆ ಬಹಳ ದಿನಗಳಿಂದ ತಯಾರಿ ನಡೆದಿರುವಂತೆ ಸ್ಪಷ್ಟವಾಗಿ ಕಾಣುತ್ತದೆ. ಸಬರಮತಿ ಎಕ್ಸ್‌ಪ್ರೆಸ್ ಮೇಲೆ ಗೋದ್ರಾದ ಬಳಿ ನಡೆದ ಕ್ರೂರ ಮತ್ತು ಖಂಡನೀಯ ಧಾಳಿ ಈ ಕೋಮುವಾದಿ ಗೂಂಡಾಗಳಿಗೆ ತಮ್ಮ ರಾಕ್ಷಸೀ ಸಾಮರ್ಥ್ಯವನ್ನು ಪ್ರದರ್ಶಿಸಲು ಅವಕಾಶಕೊಟ್ಟಿದೆಯೋ ಎಂದೆನಿಸುತ್ತದೆ. ಅಲ್ಲದೆ ಅದು ಇಡೀ ದೇಶಕ್ಕೆ ನೀಡಿದ ಒಂದು ಬೆದರಿಕೆಯೂ ಆಗಿತ್ತು. "ಅಯೋಧ್ಯಾ ಬೇಡಿಕೆಯನ್ನು ಒಪ್ಪಿಕೊಳ್ಳಿ, ಇಲ್ಲವಾದರೆ................" ಎಂಬ ಬೆದರಿಕೆ ಅದು.

ಈ ಘಟನೆಗಳಲ್ಲಿನ ಹಲವು ನಿಜಸಂಗತಿಗಳು ಇದರಲ್ಲಿ ಸಂಘ ಪರಿವಾರದ ಪಾತ್ರ ಏನೆಂಬುದನ್ನು ಸ್ಪಷ್ಟವಾಗಿ ತಿಳಿಸಿವೆ. ಮುಸ್ಲಿಮರು ಭಾರತದಲ್ಲಿ ಹಿಂದುಗಳ ಕೃಪೆಯಿಂದ ಮಾತ್ರ ಇರಲು ಸಾಧ್ಯ ಎಂಬ ಆರ್.ಎಸ್.ಎಸ್.ನ ಬೆದರಿಕೆಯನ್ನು ನೋಡಿ. ಇವೆಲ್ಲಾ ನಮ್ಮ ಹೆಮ್ಮೆಯ ಭಾರತದ ಪರಿಕಲ್ಪನೆಗೇ ಒಂದು ಅತ್ಯಂತ ಗಂಭೀರ ಬೆದರಿಕೆ.

**ಜನರ ಪ್ರತಿಕ್ರಿಯೆ**

ಗುಜರಾತ್ ಹಿಂಸಾಕಾಂಡ ಇಡೀ ದೇಶದ ಎಲ್ಲಾ ಪ್ರಜಾಪ್ರಭುತ್ವವಾದೀ ವ್ಯಕ್ತಿಗಳ, ಸಂಘಟನೆಗಳ ಕಣ್ಣು ತೆರೆಸಿದೆ. ಈ ಹಿಂದೆಯೂ ದೇಶ ಕೋಮುಗಲಭೆಗಳನ್ನು ಕಂಡಿದೆ. ಆದರೆ ಸ್ವಾತಂತ್ರ್ಯದ ನಂತರ ಹಿಂದೆಂದೂ ನಮ್ಮ ರಾಷ್ಟ್ರೀಯ ಐಕ್ಯತೆಗೆ ಇಷ್ಟು ಗಂಭೀರವಾದ ಬೆದರಿಕೆ ಬಂದಿರಲಿಲ್ಲ.

ಈಗಿನ ಪರಿಸ್ಥಿತಿಯ ಅತ್ಯಂತ ಭಯಾನಕ ಅಂಶ ಎಂದರೆ ಈಗಲೂ ಕೋಮುವಾದದ ರಾಕ್ಷಸರ ರಕ್ತಪಾತತೆ ಇನ್ನೂ ಅಡಗಿಲ್ಲ. ಈಗಲೂ ಆರ್.ಎಸ್.ಎಸ್. ವಿಹೆಚ್‌ಪಿ ಗುಜರಾತಿನಲ್ಲಿ ತಾವು ಮಾಡಿದ್ದನ್ನು ಅತ್ಯಂತ ಆಕ್ರಮಣ ರೀತಿಯಲ್ಲಿ ಸಮರ್ಥಿಸಿಕೊಳ್ಳುತ್ತಿವೆ. ಅಲ್ಲದೆ ವಿಹೆಚ್‌ಪಿಯಂತೂ ಬಿಜೆಪಿ ತನ್ನ ಮುಂದಿನ (ಕೋಮುವಾದಿ) ಘೋಷಣೆಯನ್ನು ಕೈಬಿಟ್ಟದ್ದರಿಂದಲೇ ಎಲ್ಲೆಡೆ ಸೋಲುತ್ತಿದೆ ಎಂಬ ರಾಗವನ್ನು ಯಾರೂ ಕೇಳದಿದ್ದರೂ ಹಾಡುತ್ತಲೇ ಇದೆ.

ನಿಜ ಸಂಗತಿಯೆಂದರೆ ಕೋಮುವಾದಿ ಶಕ್ತಿಗಳಿಗೆ ಒಂದು ಹಿನ್ನಡೆಯಾಗಿದೆ. ಆಯೋಧ್ಯೆಯಲ್ಲಿನ ಅವರ ಆಟ ನಡೆಯಲಿಲ್ಲ. ಈ ಹತಾಶೆಯೇ ಅವರನ್ನು ಆಕ್ರಮಕಗೊಳಿಸಿದೆ ಆದ್ದರಿಂದ ಮುಂಬರುವ ತಿಂಗಳುಗಳು ದೇಶಕ್ಕೆ ನಿರ್ಣಾಯಕ.

ಈ ದೇಶದ ಜನತೆ ಅತ್ಯಂತ ಧರ್ಮನಿರಪೇಕ್ಷರು, ರಾಷ್ಟ್ರೀಯ ಐಕ್ಯತೆ ಬಯಸುವವರು ಎಂಬುದರಲ್ಲಿ ಸಂದೇಹವಿಲ್ಲ. ಕೆಲವು ತಾತ್ಕಾಲಿಕ ಸಂದರ್ಭಗಳನ್ನು ಬಿಟ್ಟು ಬೇರೆ ಸಮಯಗಳಲ್ಲಿ ಭಾರತದ ಜನತೆ ತನ್ನ ಸಮ್ಮಿಶ್ರ ಸಂಸ್ಕೃತಿಯನ್ನು ಜೋಪಾನವಾಗಿ ಕಾದುಕೊಂಡು ಬಂದಿದ್ದಾರೆ. ಈ ಸಮ್ಮಿಶ್ರ ಸಂಸ್ಕೃತಿಯೇ

ಪುಟ 4 ಕ್ಕೆ

## ಮೊಸಳೆ ಕಣ್ಣೀರು ಸುರಿಸಿದ ಮುತ್ಸದ್ದಿ

ನಮ್ಮ ಮುತ್ಸದ್ದಿ ಪ್ರಧಾನಿ ಯವರ ಮುಖವಾಡ ಮತ್ತೊಮ್ಮೆ ಕಳಚಿ ಬಿದ್ದಿದೆ. ಕಳೆದ ಏಪ್ರಿಲ್ 4 ರಂದು ವಾಜಪೇಯಿ ಯವರು ಗಲಭೆ ಪೀಡಿತ ಗುಜರಾತ್‌ಗೆ ಭೇಟಿ ನೀಡಿದ್ದಾರೆ. ಗೋದ್ರಾ ಘಟನೆಯನ್ನು ಖುದ್ದು ವೀಕ್ಷಿಸಿದ ನಂತರ ದಿಗ್ಭ್ರಮೆ ವ್ಯಕ್ತಪಡಿಸಿದ್ದಾರೆ. ನಂತರ ಹಲ್ಲೆಗೊಳಗಾದ ನಿರಾಶ್ರೀತರ ಶಿಬಿರವಾದ ಷಾ ಆಲಂಗೆ ಭೇಟಿ ನೀಡಿದ್ದಾರೆ. ಪ್ರಧಾನಿಯ ಆಗಮನದ ಸುದ್ದಿ ತಿಳಿದ ತಕ್ಷಣವೇ ರಾಜ್ಯ ಸರ್ಕಾರ ಪ್ರಧಾನಿ ಯವರು ಭೇಟಿ ನೀಡುವ ಸ್ಥಳಗಳಿಗೆ ರಸ್ತೆ ದುರಸ್ತಿ ಕಾರ್ಯ ನಡೆಸಿದೆ. ನಿರಾಶ್ರಿತರಿಗೆ ಕೆಲವೊಂದು ತಾತ್ಕಾಲಿಕ ಟೆಂಟುಗಳನ್ನು ಹಾಕಲಾಗಿದೆ. (ಇವರ ಪೈಶಾಚಿಕ ಕೃತ್ಯಗಳನ್ನು ಮರೆಮಾಚುವ ವ್ಯರ್ಥ ಪ್ರಯತ್ನ) ನಮ್ಮ ಮುತ್ಸದ್ದಿ ಪ್ರಧಾನಿಗಳು (ಹಾಗೆಂದು ಕರೆದುಕೊಳ್ಳುವ) ಆಲಂಗೆ ಭೇಟಿ ನೀಡಿದ ವೇಳೆಯಲ್ಲಿ ಅಲ್ಪ ಸಂಖ್ಯಾತರ ಮೇಲೆ ಧಾರಾಕಾರವಾಗಿ ಮೊಸಳೆ ಕಣ್ಣೀರು ಸುರಿಸಿ ತಮ್ಮ ಎಂದಿನ ಶೈಲಿಯಲ್ಲಿ ಸುದೀರ್ಘ ಭಾಷಣ ಬಿಗಿದಿದ್ದಾರೆ. ಗೋದ್ರಾ ಘಟನೆಯನ್ನು ಕಂಡು ದಿಗ್ಭ್ರಮೆ ವ್ಯಕ್ತಪಡಿಸಿದ ಪ್ರಧಾನಿಗಳು, ನಿರಾಶ್ರಿತರಿಗೆ ಕನಿಷ್ಠ ಸಾಂತ್ವನ ಹೇಳುವ ಸೌಜನ್ಯವನ್ನು ತೋರದಿರುವುದು ನಾಚಿಕೆಗೇಡಿನ ಸಂಗತಿ. ಪಾಪ ಸುಟ್ಟು ಕರಕಲಾದ ... ಬೀರಿರಬೇಕು. ಈ ಘಟನೆಯನ್ನು ಹೊತ್ತು ನಾವು ಹೇಗೆ ವಿದೇಶಕ್ಕೆ ತೆರಳಲಿ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಸದಾ ವಿದೇಶಿ ಗುಂಗಿನಲ್ಲಿರುವ ಪ್ರಧಾನಿಗಳಿಗೆ ಈ ಅಂಜಿಕೆ ಕಾಡಿರಲೇಬೇಕು. ದೇಶದ ಜನತೆಗೆ ಹೇಗೋ ಯಾಮಾರಿಸಬಹುದೆಂದು ಅರ್ಥವೇ? ಗುಜರಾತ್‌ನಲ್ಲಿ ಕೋಮುದಳ್ಳುರಿ ಹತ್ತಿ ಉರಿಯುವಾಗ ಅದನ್ನು ತಡೆಯಲು ಕನಿಷ್ಠ ಪ್ರಮಾಣದ ಪ್ರಯತ್ನ ಮಾಡಲಿಲ್ಲವೇಕೆ? ಈ ಘಟನೆ ನಡೆದು ಒಂದು ತಿಂಗಳ ನಂತರ ಭೇಟಿ ನೀಡುತ್ತಿರುವುದರ ಹಿಂದಿನ ಉದ್ದೇಶ ಯಾರಿಗಾದರೂ ಅರ್ಥವಾಗುವಂತಹುದೇ. ಪ್ರಧಾನಿಯವರಿಗೆ ನೈತಿಕತೆ ಇದ್ದಿದ್ದರೆ ನರೇಂದ್ರ ಮೋದಿ ಎಂಬ ಚಿಡ್ಡಿ ವೀರನಿಂದ ರಾಜೀನಾಮೆ ಪಡೆಯಬಹುದಾಗಿತ್ತು. ಭಾರತದ ಸಂವಿಧಾನ ಅನುಸರಿಸು ಎಂದು ನಿರ್ದೇಶಿಸದೆ ಬದಲಿಗೆ 'ರಾಜಧರ್ಮ'ವನ್ನು ಪಾಲಿಸುವಂತೆ ಉಪದೇಶಿಸಿದ್ದಾರೆ. ರಾಜಧರ್ಮವೆಂದರೆ ದುರ್ಬಲರ ಮೇಲೆ ದಬ್ಬಾಳಿಕೆ ನಡೆಸಿ ಪ್ರಭುತ್ವ ಸ್ಥಾಪಿಸುವುದಲ್ಲವೆ. ಅದನ್ನೇ ಮೋದಿಗೂ ಉಪದೇಶಿಸಿದ್ದಾರೆ. ನಿರಾಶ್ರಿತರ ಮನವಿಯನ್ನು ಕೇಳುವ ವೇಳೆ, so called ಸನ್ಯಾಸಿನಿ ಸಚಿವೆ ಉಮಾಭಾರತಿ ಮುಂದೆ ಕುಳಿತು ಮುಸ್ಲಿಮರನ್ನು ಕೆಂಗಣ್ಣಿನಿಂದ ನೋಡುತ್ತಿದ್ದರೆ ಅವರು ತಮ್ಮ ಅಳಲನ್ನು ಹೇಗೆ ತೋಡಿಕೊಂಡಾರು. ಮುತ್ಸದ್ದಿಯ ಮುಖವಾಡ ಕಳಚಿ ಬಿದ್ದಿದೆ.. ತಾವು ನಿಷ್ಠಾವಂತ ಚಡ್ಡಿ ಚತುರ ಎಂಬುವನ್ನು ಸಾಬೀತು ಪಡಿಸಿದ್ದಾರೆ. ಇಂತಹ ನರಭಕ್ಷಕರನ್ನು ಇನ್ನೂ ಅಧಿಕಾರದಲ್ಲಿ ಮುಂದುವರಿಸಬೇಕೆ ಎಂಬುದು ಜನರ ಮುಂದಿರುವ

# ಪ್ಯಾಲೆಸ್ಟೇನ್ ನಿರ್ನಾಮ

**ಪ್ಯಾಲೆಸ್ಟೈನ್ ಪುನಃ ಹತ್ತಿ ಉರಿಯುತ್ತಿದೆ. ಅಮೇರಿಕದ 'ಭಯೋತ್ಪಾದನೆಯ ವಿರುದ್ಧ ಎಲ್ಲೆಲ್ಲೂ ಎಂದೆಂದೂ ಸಾಗುವ ಯುದ್ಧದ' ಘೋಷಣೆಯ ದುರ್ಲಾಭ ಪಡೆದು, ಪ್ಯಾಲೆಸ್ಟೈನ್ ಪಡೆದ ಅಲ್ಪ ಸ್ವಲ್ಪ ಸ್ವಾತಂತ್ರ್ಯ ಸ್ವಯಮಾಡಳಿತವನ್ನು ಇಸ್ರೇಲ್ ಪೂರ್ಣ ಪ್ರಮಾಣದ ಯುದ್ಧದ ಮೂಲಕ ನಿರ್ನಾಮ ಮಾಡಲು ಹೊರಟಿದೆ. ಪ್ಯಾಲೆಸ್ಟೈನ್‌ನಲ್ಲಿ ಈಗ ಏನಾಗುತ್ತಿದೆ? ಯಾಕೀ ಹಿಂಸಾಚಾರದ ಚಕ್ರ? ಪ್ಯಾಲೆಸ್ಟೈನ್ ಇಸ್ರೇಲ್ ವಿವಾದದ ಮೂಲ ಏನು? ಇದಕ್ಕೆ ಪರಿಹಾರ ಏನು? ಶಾಂತಿ ಒಪ್ಪಂದಗಳ ಗತಿ ಏನಾಯಿತು? ವಿಶ್ವಸಂಸ್ಥೆ ಮತ್ತು ಅಂತರ್ರಾಷ್ಟ್ರೀಯ ಸಮುದಾಯ ಏಕೆ ಕೈಕಟ್ಟಿ ಕುಳಿತಿದೆ? ಈ ಎಲ್ಲಾ ಪ್ಯಾಲೆಸ್ಟೈನ್ ಬಗೆಗಿನ ಅಗಣಿತ ಪ್ರಶ್ನೆಗಳಿಗೆ ಉತ್ತರಿಸುವ ಪ್ರಯತ್ನ ಇಲ್ಲಿದೆ.**

- ಶರತ್‌ಚಂದ್ರ

## ಪ್ಯಾಲೆಸ್ಟೈನ್‌ನಲ್ಲಿ ಈಗ ಏನಾಗುತ್ತಿದೆ?

ಪ್ಯಾಲೆಸ್ಟೈನ್‌ನಲ್ಲಿ ಕಳೆದ ಕೆಲ ದಿನ ಮತ್ತು ವಾರಗಳಿಂದ ನಡೆಯುತ್ತಿರುವುದು ಪ್ಯಾಲೆಸ್ಟೈನ್ ಆಡಳಿತಕ್ಕೆ ಒಳಪಟ್ಟ ಪ್ರದೇಶಗಳ ಮೇಲೆ ಬರ್ಬರ ಆಕ್ರಮಣ ಮತ್ತು ವಶಪಡಿಸಿಕೊಳ್ಳುವುದು. ಇದಕ್ಕಾಗಿ ಎಲ್ಲಾ ಅಂತರ್ರಾಷ್ಟ್ರೀಯ ಕಾನೂನುಗಳನ್ನು ಗಾಳಿಗೆ ತೂರಲಾಗಿದೆ. ಪ್ಯಾಲೆಸ್ಟೈನ್‌ನ ಪಟ್ಟಣಗಳಲ್ಲಿ ಒಂದಾದ ನಂತರ ಒಂದು ಪಟ್ಟಣಕ್ಕೆ ಇಸ್ರೇಲಿ ಪಡೆಗಳು ನುಗ್ಗಿ, ಭಯೋತ್ಪಾದಕ'ರನ್ನು ಹಿಡಿಯುವ ನೆಪದಲ್ಲಿ ನಾಗರಿಕರ ಮೇಲೆ ಹಲ್ಲೆ, ಕೊಲೆ ನಡೆಸುತ್ತಿದೆ. ಹಲವು ಪ್ಯಾಲೆಸ್ಟೈನ್ ಸಂಘಟನೆಗಳ ನಾಯಕರನ್ನು ಪ್ಯಾಲೆಸ್ಟೈನ್ ಪ್ರದೇಶದಲ್ಲೇ ಹಾಡುಹಗಲಲ್ಲೆ ಹಲ್ಲೆ ಮಾಡಿ ಹಾಡು ಹಗಲಲ್ಲೇ ಕೊಲೆ ಮಾಡಲಾಗಿದೆ. ಹಲವು ನಿರಾಶ್ರಿತರ ಕ್ಯಾಂಪುಗಳಲ್ಲಿ, ಇತರೆಡೆ ಮನೆಗಳನ್ನು ನೆಲಸಮ ಮಾಡಲಾಗಿದೆ. ಪ್ಯಾಲೆಸ್ಟೈನ್ ಪೋಲೀಸು ಮತ್ತು ಭದ್ರತಾ ಪಡೆಗಳ ಕಚೇರಿಗಳ ಮೇಲೆ ಹೆಲಿಕಾಪ್ಟರ್, ವಿಮಾನದಾಳಿಗಳನ್ನು ಮಾಡಿ ನಾಶಮಾಡಲಾಗಿದೆ. ಇಸ್ರೇಲಿ ಟ್ಯಾಂಕ್‌ಗಳನ್ನು ಅಧ್ಯಕ್ಷ ಯಾಸೆರ್ ಅರಾಫತ್‌ರ ಕೇಂದ್ರ ಕಚೇರಿಯ ನೂರು ಅಡಿಗಳ ಹತ್ತಿರ ತಂದು ನಿಲ್ಲಿಸಲಾಗಿದೆ. ಜನವರಿ 3ನೇ ವಾರದಿಂದಲೇ ಇತ್ತೀಚಿನ ದಿನಗಳಲ್ಲಿ ಅಧ್ಯಕ್ಷಿಯ ಪ್ರಧಾನ ಕಚೇರಿಯನ್ನು ನಿರ್ನಾಮ ಮಾಡಲಾಗಿದೆ. ಅಧ್ಯಕ್ಷ ಅರಾಫತ್ ಆ ಕಚೇರಿಯ ನೆಲಮಾಳಿಗೆಯಲ್ಲಿ ವಾಸಿಸುತ್ತಿದ್ದಾರೆ. ಅಮೇರಿಕದ ಅಧ್ಯಕ್ಷ ಬುಶ್ ಮನವಿ ಮಾಡಿದರೂ, ಅದನ್ನು ತಿರಸ್ಕರಿಸಿ ಅರಾಫತ್‌ಗೆ ದಿಗ್ಬಂಧನಹಾಕಲಾಗಿದೆ. ಮಾರ್ಚ್‌ನಲ್ಲಿ ಕೌಲಾಲಂಪುರನಲ್ಲಿ ನಡೆದ ಅರಬ್ ನಾಯಕರ ಶೃಂಗ ಸಭೆಗೆ ಹೋಗಲು ಅವಮಾನಕಾರಿ ಷರತ್ತುಗಳನ್ನು ಹಾಕಲಾಯಿತು. ಒಂದು ಬಾರಿ ಹೋಗಲು ಬಿಡಬಹುದು. ಆದರೆ ಒಂದು ಬಾರಿ ಹೋದರೆ ವಾಪಸು ಬರುವ ಹಾಗಿಲ್ಲ. ಇದು ಇಸ್ರೇಲ್ ಹಾಕಿದ ಶರತ್ತು, ಈ ಶರತ್ತನ್ನು ಸ್ವಾಭಾವಿಕವಾಗಿಯೇ ಅರಾಫತ್ ತಿರಸ್ಕರಿಸಿದ್ದು ನಾನು ಸತ್ತರೂ ಸರಿಯೇ, ತನ್ನ ಪ್ರಧಾನ ಕಛೇರಿ ಬಿಟ್ಟು ಕದಲುವುದಿಲ್ಲ ಎಂದು ಪಣ ತೊಟ್ಟಿದ್ದಾರೆ.

ಕಳೆದ ಮೂರು ತಿಂಗಳಲ್ಲಿ ತುಲ್ಕಾರ್ಮ್, ರಮಲ್ಲಾ, ಬೆತ್ಲೆಹೆಮ್, ಸಾಲ್‌ಷಿಟ್, ಜೆನಿನ್ ಮುಂತಾದ ಪ್ಯಾಲೆಸ್ಟೈನ್ ಪಟ್ಟಣಗಳಲ್ಲಿ ಇಸ್ರೇಲ್ ಸೈನ್ಯ ನುಗ್ಗಿ ಅವನ್ನು ವಶಪಡಿಸಿಕೊಂಡಿದೆ. ಕೆಲವು ಮುಸ್ಲಿಂ ಮೂಲಭೂತವಾದಿ ಗುಂಪುಗಳು (ಮುಖ್ಯವಾಗಿ 'ಹಾಮಾಸ್' ಮತ್ತು 'ಇಸ್ಲಾಮಿಕ್ ಜಿಹಾದ್') ಇಸ್ರೇಲಿ ಪ್ರದೇಶಗಳಲ್ಲಿ ನಡೆಸಿದ ಹಿಂಸಾಚಾರದ ಬಗ್ಗೆ ಎದೆ ಬಡಿದುಕೊಂಡು ಅಂತರ್ರಾಷ್ಟ್ರೀಯ ಪ್ರಚಾರ ನಡೆಸಿದೆ. ಆದರೆ ಕಳೆದ ಸುಮಾರು ಒಂದುವರೆ ವರ್ಷಗಳ ಹಿಂಸಾಚಾರದಲ್ಲಿ ಸತ್ತವರಲ್ಲಿ ಹೆಚ್ಚಿನವರು ಪ್ಯಾಲೆಸ್ಟೈನ್ನರು ಎಂಬುದು, ಯಾರು ಆಕ್ರಮಣಕಾರರು ಯಾರು ಬಲಿಪಶುಗಳು ಎಂಬುದನ್ನು ಸಾಬೀತುಪಡಿಸುತ್ತದೆ.

'ಹಾಮಾಸ್' ಮತ್ತು 'ಇಸ್ಲಾಮಿಕ್ ಜಿಹಾದ್' ಮುಂತಾದ ಗುಂಪುಗಳು ನಡೆಸುತ್ತಿರುವ ಹಿಂಸಾಚಾರ ನಿಜವಾಗಿಯೂ ನಡೆಯುತ್ತಿರುವ ಇಸ್ರೇಲಿನ 'ಸರ್ಕಾರಿ ಭಯೋತ್ಪಾದನೆಗೆ' ಪ್ರತೀಕಾರ ಎಂಬುದನ್ನು ಹಲವು ಸ್ವತಂತ್ರ ವೀಕ್ಷಕರು ಹೇಳಿದ್ದಾರೆ.

**ಯಾಕೀ ಹಿಂಸಾಚಾರದ ಚಕ್ರ?**

ಅರಬ್ ಜ್ಯೂಗಳ ನಡುವಿನ ವಿವಾದ ಹಲವು ದಶಕಗಳಷ್ಟು ಹಳೆಯದಾದರೂ ಈಗಿನ ಹಿಂಸಾಚಾರದ ಚಕ್ರ ಸುಮಾರ ಒಂದುವರೆ ವರ್ಷ ಹಳೆಯದು. ಸೆಪ್ಟೆಂಬರ್ 2000ದಲ್ಲಿ ಆರಂಭವಾಗಿದ್ದು. 1993ರಲ್ಲಿ ಮಾಡಲಾದ ಒಸ್ಲೋ ಒಪ್ಪಂದ ಪ್ಯಾಲೆಸ್ಟೈನ್‌ನ ಬಹುಸಂಖ್ಯಾತರಿಗೆ ಪೂರ್ತಿ ಸಮಧಾನಕಾರವಾಗಿಲ್ಲದಿದ್ದರೂ ಶಾಂತಿಯ, ಸ್ವಾತಂತ್ರ್ಯದ ಭರವಸೆ ಹುಟ್ಟಿಸಿತ್ತು. ಏಳು ವರ್ಷಗಳ ನಂತರವೂ ಇದೆರಡರಲ್ಲಿ ತೀರಾ ಮಂದಗತಿಯ ಪ್ರಗತಿ ಪ್ಯಾಲೆಸ್ಟೈನ್ನರನ್ನು ರೊಚ್ಚಿಗೆಬ್ಬಿಸಿತ್ತು. ಜುಲೈ 2000ದಲ್ಲಿ ಅಮೆರಿಕಾದ ಅಧ್ಯಕ್ಷ ಕ್ಲಿಂಟನ್‌ರ ಮಧ್ಯಸ್ತಿಕೆಯಲ್ಲಿ ಅಮರಿಕಾದ ಕ್ಯಾಂಪ್ ಡೇಏಡ್‌ನಲ್ಲಿ ನಡೆದ ಶಾಂತಿ ಮಾತುಕತೆಯ ವೈಫಲ್ಯ ಎಲ್ಲರನ್ನೂ ರೊಚ್ಚಿಗೆಬ್ಬಿಸಿತ್ತು. ಬೆಂಕಿಗೆ ತುಪ್ಪ ಹಾಕುವಂತೆ ಈಗಿನ ಪ್ರಧಾನಿ (ಆಗ ಆತ ವಿರೋಧ ಪಕ್ಷದ ನಾಯಕ) ಆರಿಯಲ್ ಶರೋನ್ ವಿವಾದಿತ ಪ್ರದೇಶದಲ್ಲಿರುವ ಮುಸ್ಲಿಮ್-ಜ್ಯೂಗಳಿಬ್ಬರದ್ದೂ ಪವಿತ್ರ ತೀರ್ಥ ಸ್ಥಳವೊಂದಕ್ಕೆ (ಮುಸ್ಲಿಮರು ಹರಮ್-ಅಲ್-ಶರೀಫ್ ಎನ್ನುತ್ತಾರೆ) ಭೇಟಿ ನೀಡಿದ್ದೇ ಈ ಕೋಪ ಭುಗಿಲೇಳುವುದಕ್ಕೆ ಕಾರಣವಾಗಿತ್ತು. ಭೇಟಿಯಲ್ಲಿ ಶರೋನ್ ಪ್ರಚೋದನೆ ಬೇಕೆಂತಲೆ ಮಾಡಿದ್ದ ಎನ್ನಲಾಗಿದೆ. ಈ ಘಟನೆ ಆ ಮಸೀದಿಯಲ್ಲ ಮಾತ್ರವಲ್ಲ ಆಕ್ರಮಿತ ಪ್ಯಾಲೆಸ್ಟೈನ್‌ನಲ್ಲೆಲ್ಲಾ ಭಾರಿ ದಂಗೆಗೆ ಕಾರಣವಾಗಿತ್ತು. ಅಂದಿನಿಂದ ಎರಡನೇ 'ಇಂತಿಫದಾ' (ಪ್ಯಾಲೆಸ್ಟೈನ್‌ನ ಆಕ್ರಮಿಕ ಪ್ರದೇಶಗಳಲ್ಲಿ ನಾಗರಿಕರ ದಂಗೆ) ಆರಂಭವಾಗಿದೆ ಎನ್ನಲಾಗಿದೆ. ಮೊದಲನೆ ಇಂತಿಫದಾ 1987 ರಿಂದ 1993ರವರೆಗೆ ನಡೆದಿತ್ತು.




ನಾನು ಸತ್ತರೂ ಸರಿಯೇ ತಾಯ್ನಾಡು ಬಿಟ್ಟು ಕದಲಾರ
- ಅರಾಫತ್

ಅಂದಿನಿಂದ ಪ್ಯಾಲೆಸ್ಟೈನ್ನರು ಶಾಂತಿಯುತ ವಿವಾದ ಇತ್ಯರ್ಥದಲ್ಲಿ ನಂಬಿಕೆ ಕಳೆದುಕೊಂಡಿದ್ದು, ಇಸ್ಲಾಂ ಮುಲಭೂತವಾದಿ ಗುಂಪುಗಳಾದ 'ಹಾಮಾಸ್' ಮತ್ತು ಇಸ್ಲಾಮಿಕ್ ಜಿಹಾದ್' ಗುಂಪುಗಳಿಗೆ ಕುಮ್ಮಕ್ಕು ಸಿಕ್ಕಿದೆ. ಇದಕ್ಕಿಂತ ಹೆಚ್ಚಿಗೆ ನಿಶ್ಶಸ್ತ್ರ ಪ್ಯಾಲೆಸ್ಟೈನ್ ಜನರ ದಂಗೆ ಹತ್ತಿಕ್ಕಲು ಇಸ್ರೇಲಿ ಪಡೆಗಳು ಅತ್ಯಂತ ಬರ್ಬರ ಹಿಂಸಾಚಾರ ಬಳಸುತ್ತಿದ್ದಾರೆ. ಹಲವು ಸ್ವತಂತ್ರ ಪಾಶ್ಚಿಮಾತ್ಯ ವೀಕ್ಷಕರೂ ಇದನ್ನು ಸರ್ಕಾರಿ ಭಯೋತ್ಪಾದನೆ ಅಲ್ಲದೆ ಬೇರೆಯಲ್ಲ ಎಂದು ಕರೆದಿದ್ದಾರೆ. 2001 ಒಂದು ವರ್ಷದಲ್ಲೇ ಸುಮಾರು ಸಾವಿರಕ್ಕೂ ಹೆಚ್ಚು ಜನ ಹಿಂಸಾಚಾರದ ಚಕ್ರದಲ್ಲಿ ಸತ್ತಿದ್ದು ಇದರಲ್ಲಿ ಬಹುಸಖ್ಯಾತರು ಪ್ಯಾಲೆಸ್ಟೈನ್ನರು ಎಂಬ ಅಂಶ ಯಾರೂ ಆಕ್ರಾಮಕರು, ಯಾರು ಬಲಿಪಶುಗಳು ಎಂಬುದನ್ನು ಸಾಬೀತು ಪಡಿಸುತ್ತದೆ. ಅಮೇರಿಕಾದ ಹೊಸ ಅಧ್ಯಕ್ಷ ಬುಶ್ ಅಧಿಕಾರ ವಹಿಸಿಕೊಂಡ ಮೇಲೆ ಕೆಲ ಕಾಲ ಶಾಂತಿ ಸಂಧಾನ ಮುಂದುವರೆದರೂ, ಸೆಪ್ಟೆಂಬರ್ - 11ರ ನಂತರದ ಅವಧಿಯಲ್ಲಿ ಇಸ್ರೇಲಿಗೆ ಪ್ಯಾಲೆಸ್ಟೈನ್ನರನ್ನು ಹತ್ತಿಕ್ಕಲು ಪೂರ್ಣ ಬೆಂಬಲ ಕೊಡಹತ್ತಿದೆ. ಇದನ್ನು ಇಸ್ರೇಲ್ ಪ್ರಧಾನಿ 'ಶರೋನ್' ಫ್ಯಾಲೆಸ್ಟೈನ್ ನಿರ್ನಾಮ ಮಾಡಲು 'ಗ್ರೀನ್ ಸಿಗ್ನಲ್' ಎಂದು ತೆಗೆದುಕೊಂಡು ಪೂರ್ಣ ಪ್ರಮಾಣದ ಆಕ್ರಮಣ ಆರಂಭಿಸಿದ್ದಾನೆ. ಅದಲ್ಲದೆ ಶರೋನ್‌ನ ರಕ್ತಸಿಕ್ತ ರೆಕಾರ್ಡ್ ಪ್ಯಾಲೆಸ್ಟೈನ್ನರಿಗೆ ಭರವಸೆ ಹುಟ್ಟಿಸುವಂತಹದಲ್ಲ. 1982ರಲ್ಲಿ ಲೆಬನಾನ್‌ನಲ್ಲಿ ಆತ ನಡೆಸಿದ ನರಮೇಧ ಪ್ಯಾಲೆಸ್ಟೈನ್ನರ ಮನಸ್ಸಲ್ಲಿ ರಕ್ತಸಿಕ್ತ ಕಲೆಗಳನ್ನು ಉಳಿಸಿದೆ.

ಸಾಲದ್ದಕ್ಕೆ ಇನ್ನಷ್ಟು ಪ್ರಚೋದನಕಾರಿ ಕೆಲಸಗಳನ್ನು ಸರೋನ್ ಸರ್ಕಾರ ನಡೆಸಿತು. ಒಂದು ಜನವರಿಯಲ್ಲಿ ಪ್ಯಾಲೆಸ್ಟೈನ್ ಸರ್ಕಾರಕ್ಕೆ ಬರುತ್ತಿದ್ದ ಒಂದು ಹಡಗು ತುಂಬಾ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂಬ ಸುಳ್ಳು ಸುದ್ಧಿ ಹರಡಿಸಿದ್ದು ಇದನ್ನು ಅರಾಫತ್ ಖಂಡಿಸಿದ್ದು ಈ ಬಗ್ಗೆ ಸ್ವತಂತ್ರ ಅಂತರ್ರಾಷ್ಟ್ರೀಯ ತನಿಖೆ ಆಗಲಿ ಎಂದು ಒತ್ತಾಯಿಸಿದ್ದಕ್ಕೆ ಇಸ್ರೇಲ್ ಮೌನವಾಗಿದೆ. ಇನ್ನೊಂದು ಎರಡು ಪ್ರಮುಖ ಗೆರಿಲ್ಲಾ ನಾಯಕರನ್ನು ಕೊಲ್ಲಿಸಿದ್ದು ಅರಾಫತ್ ಬಹು ಪ್ರಯತ್ನದ ನಂತರ 'ಇಸ್ಲಾಮಿಕ್ ಜಿಹಾದ್' ಮತ್ತು 'ಹಾಮಾನ್' ನಾಯಕರನ್ನು ಕದನ ವಿರಾಮಕ್ಕೆ ಒಪ್ಪಿಸಿದ್ದು ಕ್ರಿಸ್‌ಮಸ್ ನಂತರ ಮೂರು ವಾರಗಳವರೆಗೆ ಯಾವುದೇ ಹಿಂಸಾಚಾರ ಪ್ಯಾಲೆಸ್ಟೈನ್ನರ ಕಡೆಯಿಂದ ಆಗಿರಲಿಲ್ಲ, ಆದರೆ ಇಸ್ರೇಲ್ ಸೈನ್ಯ ತನ್ನ ಹಿಂಸಾಚಾರ ಅವ್ಯಾಹತವಾಗಿ ಮುಂದುವರೆಸಿತ್ತು. ಇದು ಸಾಲದೆಂಬಂತೆ ಅಲೂಫಕಾಶ್ ಎಂಬ ಗುಂಪಿನ ನಾಯಕನ ಹತ್ಯೆಯಿಂದ ಹಿಂಸಾಚಾರಕ್ಕೆ ನೇರ ಪ್ರಚೋದನೆ ನೀಡಿತು. ಹಾಮಾನ್ ನಾಯಕನೊಬ್ಬನನ್ನೂ ಹೆಲಿಕಾಪ್ಟರ್‌ನಿಂದ ಹೊಡೆದು ಕೊಲ್ಲಲಾಯಿತು. ಇದು ಪುನಃ ಹಿಂಸಾಚಕ್ರವನ್ನು ಆರಂಭಿಸಿತು.

**ಇದಕ್ಕೆ ಏನು ಪರಿಹಾರ?**

ಪ್ಯಾಲೆಸ್ಟೈನ್ ಸಮಸ್ಯೆಗೆ ಮಿಲಿಟರಿ ಪರಿಹಾರ ಮನವರಿಕೆ ಮಾಡಿಕೊಳ್ಳಬೇಕು. ಪ್ಯಾಲೆಸ್ಟೈನ್ ಗೆರಿಲ್ಲಾ ಪಡೆಗಳನ್ನು ನಿರ್ನಾಮ ಮಾಡಿದರೂ, ಈ ಹಿಂಸಾಚಾರದ ಚಕ್ರ ಕೊನೆಗೊಳ್ಳುವುದಿಲ್ಲ. ಪ್ಯಾಲೆಸ್ಟೈನ್ ನಿರಾಶ್ರಿತರ ಕ್ಯಾಂಪ್‌ಗಳಲ್ಲಿ ಹಿಂಸಾಚಾರ, ನಿರಂತರ ಹಿಂಸಾಚಕ್ರಕ್ಕೆ ಆಹ್ವಾನ. ಮೊದಲನೆಯ ಮತ್ತು ಎರಡನೇ ಇಂತಿಫದಾ ಸಣ್ಣ ಮಕ್ಕಳಿಂದ ಹಿಡಿದು ಯುವಕರವರೆಗೆ ನಿಶ್ಶಸ್ತ್ರ ಸಾಮಾನ್ಯರು ಭಾಗವಹಿಸಿದ ದಂಗೆ. ಇದು ಸಂಘಟಿತವಲ್ಲ, ಸ್ವಯಂಪೂರ್ವ ದಂಗೆ, 1967ರ ಯುದ್ಧದ ನಂತರ ಇಸ್ರೇಲ್ ಆಕ್ರಮಿಸಿಕೊಂಡ ಪ್ರದೇಶಗಳಲ್ಲಿ ಇಸ್ರೇಲ್‌ಗೆ ದಮನದಿಂದ ಶಾಂತಿ ತರಲು ಸಾಧ್ಯವಾಗಿಲ್ಲ. ಇನ್ನೂ ಮುಂದೆಯೂ ಸಾಧ್ಯವಾಗುವುದಿಲ್ಲ. ಈಗ ಇಸ್ರೇಲ್ ಮತ್ತು ಪ್ಯಾಲೆಸ್ಟೈನ್ ಇರುವ ಪ್ರದೇಶದಲ್ಲಿ ಮೂಲನಿವಾಸಗಳಾಗಿದ್ದ ಪ್ಯಾಲೆಸ್ಟೈನ್ ಅರಬರನ್ನು ಓಡಿಸಿ ನಿರಾಶ್ರಿತರನ್ನಾಗಿ ಮಾಡಿ, ಅವರ ತಾಯ್ನಾಡು ಸ್ವಾತಂತ್ರ್ಯ - ಸ್ವಾಭಿಮಾನದ ಹಕ್ಕು ವಾಪಸು ಸಿಗುವ ವರೆಗೆ ಈ ಸಮಸ್ಯೆಗೆ ಪರಿಹಾರವಿಲ್ಲ. ಪ್ಯಾಲೆಸ್ಟೈನ್ ಸ್ವಾತಂತ್ರ್ಯ ಸ್ವಯಮಾಡಳಿತಕ್ಕೆ ದಾರಿ ಮಾಡಿಕೊಡುವ ಶಾಂತಿ



### ಪ್ಯಾಲೆಸ್ತಾನ್ ಅಪಹರಿಸಲ್ಪಟ್ಟಿದೆ

ಯಾಂಕೀ ಜಾತಿಯ
ಭ್ರೂಣಗಳು ಬೆಳೆದಂತೆಲ್ಲ
ಪೃಥ್ವಿಯ ತುಂಬ ಕ್ರೂರ ಗೆರೆಗಳನ್ನು
ಕೊರೆಯಲಾಯಿತು

ಅವಕ್ಕೆ ದೇಶಗಳ ದಂಡೆಗಳೆಂದು
ಕರೆಯಲಾಯಿತು.

ಮುಂದೆ :
ಭೂಪಟದ ತುಂಬ
ಬಣ್ಣ ಬಣ್ಣದ ತುಕಡಿಗಳು
ಕಿಕ್ಕಿರಿದು ತುಂಬಿದವು.

ಈಗ ಕೇಳುತ್ತೇನೆ
ಎಲ್ಲಿ ಆ ಪ್ಯಾಲೆಸ್ತಾನ್ ತುಕಡಿ?

ಹೇಳಿ ಅಮೇರಿಕನ್ನರೇ!
ನಿಮ್ಮೆಲ್ಲ ಗ್ಲೋಬುಗಳನ್ನು
ತಿರುವಿ ನೋಡಿದೆ.
ಈ ಚಿನ್ನದ ತುಕಡಿಯಿಲ್ಲ,
ಆ ಶಾಂತಿಯ ಬಣ್ಣವಿಲ್ಲ.

ಹೇಳಿ ಜ್ಯೂಗಳೊಡನೆಯರೇ ಹೇಳಿ!
ಎಲ್ಲಿ ಮಾಯವಾಯಿತದು?
ನಿಮ್ಮ ಚಿಕ್ಕ ಚುಕ್ಕೆಗಳೂ ಕಾಣುತ್ತಿರುವಾಗ
ಆ ತುಕಡಿ ಎಲ್ಲಿ?

ಹೇಳಿ! ಹೇಳಿ!
ಹೇಳದಿದ್ದರೆ ಇಡೀ ಪೃಥ್ವಿಗೇ
ಪ್ಯಾಲೆಸ್ತಾನ್ ಎಂದು ಕರೆಯುವೆ!!

- ರಂಜಾನ್ ದರ್ಗಾ

('ಕಾವ್ಯ ಬಂತು ಬೀದಿಗೆ' ಸಂಕಲನದಿಂದ)

ಜ್ಯೂಗಳೊಡೆಯರೇ ಹೇಳಿ, ಹೇಳದಿದ್ದರೆ ಇಡೀ ಪೃಥ್ವಿಗೇ ಪ್ಯಾಲೆಸ್ತಾನ್ ಎಂದು ಕರೆಯುವೆ!!

# ಇಸ್ರೇಲ್ ಆಕ್ರಮಣ



ಇಸ್ರೇಲ್ ದುರಾಕ್ರಮಣ ಖಂಡಿಸಿ, ಪ್ಯಾಲೆಸ್ತೀನ್ ಹೋರಾಟಕ್ಕೆ ಬೆಂಬಲಿಸಿ ದೆಹಲಿಯಲ್ಲಿ ಪ್ರತಿಭಟನೆ

...ರ್ಷಂದ, 1967ರಲ್ಲಿ ಇಸ್ರೇಲ್ ಕಸಿದುಕೊಂಡ ...ಜಾ ಪಟ್ಟಿ' ಮತ್ತು 'ಪಶ್ಚಿಮ ದಂಡೆ'ಯು ...ದೇಶಗಳನ್ನು ಸೇರಿ ಪ್ಯಾಲೆಸ್ಟೈನ್‌ಗೆ ಸ್ವತಂತ್ರ ...ಶವಾಗಿ ಮಾನ್ಯತೆ ಕೊಡುವುದು ಮಾತ್ರ ...ವಾದ ಪರಿಹಾರ. ಜೆರೊಸಲೆಮನ್ ಒಂದು ...ಗವನ್ನಾದರೂ ಪ್ಯಾಲೆಸ್ಟೈನ್‌ಗೆ ಬಿಟ್ಟುಕೊಡುವುದು ...ಂತಿ ಒಪ್ಪಂದದ ಭಾಗವಾಗಬೇಕು. ಪ್ಯಾಲೆಸ್ಟೈನ್ ...ತೆಗಳ, ಪೋಲೀಸ್, ಸರ್ಕಾರದ ಎಲ್ಲಾ ...ಕರಗಳನ್ನು ರಾಜಕೀಯ ಅಧಿಕಾರವನ್ನು ...ರ್ನಾಮ ಮಾಡಿ ಅರಾಫತ್ ಎಲ್ಲಾ ...ಸಾಚಾರವನ್ನು ನಿಲ್ಲಿಸಬೇಕು. ನಿಯಂತ್ರಿಸಬೇಕು ...ದು ಒತ್ತಾಯಿಸುವುದರಲ್ಲಿ ಅರ್ಥವಿಲ್ಲ. ಒಬ್ಬ ...ರೋಪಿಯನ್ ಪತ್ರಕರ್ತ ಹೇಳಿದ ಹಾಗೆ ...ತ್ತಿನ ಅತ್ಯಂತ ಆಧುನಿಕ ಸುಸಜ್ಜಿತ ಪ್ರಬಲ ...ಸ್ತ್ರ ಇರುವ ಇಸ್ರೇಲ್ ಸೈನ್ಯ ಕಳೆದ 35 ...ರ್ಷಗಳಲ್ಲಿ ದಮನ ಮಾಡಲಾಗದ ...ಸಾಚಾರವನ್ನು ಯಾವುದೇ ಅಧಿಕಾರ, ಶಸ್ತ್ರಾಸ್ತ್ರ ...ಲ್ಲದ ಅರಾಫತ್ ಸರ್ಕಾರ ಮಾಡಬೇಕೆಂದು ...ಯುಸುವುದು ಗೋಸುಂಬೆತನ, ಪ್ಯಾಲೆಸ್ಟೈನ್ ...ರ್ಕಾರವನ್ನು ನಿರ್ನಾಮ ಮಾಡಲು ಒಂದು ...ನೆಪವಷ್ಟೆ. ಅಂತರ್‍ರಾಷ್ಟ್ರೀಯ ಸಮುದಾಯ ಏನು ...ಡಬಹುದು.?

ಅಂತರ್‍ರಾಷ್ಟ್ರೀಯ ಸಮುದಾಯ ಇಸ್ರೇಲ್‌ನ ...ಕ್ರಮಣವನ್ನು ಖಂಡಿಸಿ ವಿಶ್ವಸಂಸ್ಥೆ ಮೂಲಕ ಈ ...ಯುದ್ಧವನ್ನು ನಿಲ್ಲಿಸಬೇಕು. ಇಸ್ರೇಲ್ 1967ರ ...ಯುದ್ಧದಲ್ಲಿ ಕಸಿದುಕೊಂಡ ಆಕ್ರಮಿತ ಪ್ರದೇಶಗಳನ್ನು ...ತೆರವು ಮಾಡಬೇಕು ಎಂದು ವಿಶ್ವಸಂಸ್ಥೆ 1968ರಲ್ಲಿ ...ಕೈಗೊಂಡ ಪ್ರಸಿದ್ಧ (ನಿರ್ಣಯ 242) ನಿರ್ಣಯವನ್ನು ...ಜಾರಿ ಮಾಡಬೇಕು. ಈಗಿನ ಆಕ್ರಮಣದ ...ನಂತರವೂ ವಿಶ್ವಸಂಸ್ಥೆ ಕೈಗೊಂಡ ನಿರ್ಣಯವನ್ನು ...ಜಾರಿಮಾಡಬೇಕು. ಈ ನಿರ್ಣಯವನ್ನು ...ಬೆಂಬಲಿಸುವ ಅಮೇರಿಕ ಮನಸ್ಸು ಮಾಡಿದರೆ ಸುಲಭದ ಕೆಲಸ ಅಮೇರಿಕದ ಆರ್ಥಿಕ ಮಿಲಿಟರಿ ಬೆಂಬಲ ಕುಮ್ಮಕ್ಕಿನ ಮೇಲೆ ನಿಂತ ಇಸ್ರೇಲ್, ಅಮೇರಿಕದ ಒಂದು ಮಾತಿಗೆ ಬಗ್ಗಬಹುದು. ಆದರೆ ಅಫಘಾನಿಸ್ತಾನದ ಮೇಲೆ ಬೋಲಿವಿಯಾದ ಮೇಲೆ ಇತ್ತೀಚಿಗೆ ಇದೇ ರೀತಿ ಕ್ಷುಲ್ಲಕ ಕಾರಣಗಳ ಮೇಲೆ 'ಭಯೋತ್ಪಾದನೆ ವಿರುದ್ಧ' ದ ಹೆಸರಲ್ಲಿ ಯುದ್ಧ ಹೂಡಿ (ಮುಂದೆಯೂ ಇರಾಕ್, ಉತ್ತರ ಕೋರಿಯಾ) ವಿರುದ್ಧ ಹೂಂಕಾರ ಹಾಕುತ್ತಿರುವ ಅಮೇರಿಕಾಕ್ಕೆ ಈ ಬಗ್ಗೆ ಮಾತನಾಡಲು ನೈತಿಕ ಹಕ್ಕಿದೆಯೇ? ಜಗತ್ತಿನ ಎಲ್ಲಾ ಸಮಸ್ಯೆಗಳನ್ನು ಅಮೇರಿಕ 'ಏಕಪಕ್ಷೀಯವಾಗಿ' ಪರಿಹರಿಸಬಹುದು ಎಂಬ ಭ್ರಮೆಯಲ್ಲಿರುವ ಅಮೆರಿಕ ಇಂತಹುದೇ ಭ್ರಮೆಯಲ್ಲಿರುವ ಇಸ್ರೇಲಿನ ಬುದ್ಧಿ ಹೇಳಬಲ್ಲುದೆ. ಅಮೇರಿಕ ಏನೇ ಹೇಳಲಿ ಇಡೀ ಜಗತ್ತು ಒಕ್ಕೊರಲಿನಲ್ಲಿ ಇಸ್ರೇಲ್ ನಡೆಸುತ್ತಿರುವುದು 'ಸರ್ಕಾರಿ ಭಯೋತ್ಪಾದನೆ' ಎಂದು ಹೇಳುತ್ತಿದೆ. ಇಸ್ರೇಲ್ ಜತೆ ಸಂಬಂಧ ಇರುವ ಎರಡೇ ಅರಬ್

ದೇಶಗಳು ಈಜಿಪ್ಟ್ ಮತ್ತು ಜೋರ್ಡಾನ ಅದನ್ನು ಕಡಿದುಕೊಳ್ಳಲು ಮುಂದಾಗಿವೆ. ಫ್ರೆಂಚ್ ಅಧ್ಯಕ್ಷ ಚಿರಾಕ್ ಮತ್ತು ಈಗಿನ ಯುರೋಪಿಯನ್ ಒಕ್ಕೂಟದ ಅಧ್ಯಕ್ಷ ಸ್ಪೈನಿನ ಮರಿಯಾ ಅಝುನಾರ್ 'ಅರಾಫತ್'ನ್ನು ನಿರ್ನಾಮ ಮಾಡುವ ಶರೋನ್ ಯೋಜನೆ ಇಡೀ ಪ್ರದೇಶಕ್ಕೆ ಭಾರಿ ಆತಂಕಕಾರಿ ಎಂದು ಖಂಡಿಸಿದ್ದಾರೆ. ಅರಬ್ ಶೃಂಗಸಭೆಯಲ್ಲಿ ಇರಾಕ್‌ನ್ನು ಪೂರ್ಣವಾಗಿ ವಾಪಸ್ಸು ಬರುವಂತೆ ಸ್ವಾಗತಿಸಿದ್ದು, ಇರಾಕ್ ಮೇಲೆ ಯಾವುದೇ ಆಕ್ರಮಣಕ್ಕೆ ಯಾವುದೇ ಅರಬ್ ದೇಶ ಅವಕಾಶ ಕೊಡುವುದಿಲ್ಲ ಎಂದು ಹೇಳಿದ್ದು, ಇಸ್ರೇಲಿಗೆ ಇದೇ ರೀತಿ ಕುಮ್ಮಕ್ಕು ಕೊಡುತ್ತಾ ಹೋದರೆ ಅರಬರು ತಮ್ಮ ಅಮೇರಿಕದಲ್ಲಿನ ಎಲ್ಲಾ ಬಂಡವಾಳ ಹೂಡಿಕೆ (ಸುಮಾರು ಸಾವಿರ ಶತಕೋಟಿ ಡಾಲರುಗಳಷ್ಟು) ವಾಪಸ್ಸು ತೆಗೆಯಬೇಕಾಗುತ್ತದೆ ಎಂಬ ಬೆದರಿಕೆ ಅಧ್ಯಕ್ಷ ಬುಶ್ ಕಣ್ಣು ತೆರೆಸಿತೆ?

**ಶಾರೋನ್ ರಕ್ತಸಿಕ್ತ ರೆಕಾರ್ಡ್**


ಇಸ್ರೇಲಿನ ಪ್ರಧಾನಿ ಶರೋನ್ ಕೈಗಳಲ್ಲಿನ ಪ್ಯಾಲೆಸ್ಟೈನ್‌ರ ಮಕ್ಕಳ ರಕ್ತದ ಕಲೆಗಳು ಇನ್ನೂ

ಪುಟ 11 ಕ್ಕೆ

## ಪ್ಯಾಲೆಸ್ಟೈನ್ ಇಸ್ರೇಲ್ ವಿವಾದದ ಚರಿತ್ರೆ

**ಝಿಯೋನಿಸ್ಟ್ ಚಳುವಳಿ (1881-1920)**

ಈಗ ಇಸ್ರೇಲ್ ಮತ್ತು ಪ್ಯಾಲೆಸ್ಟೈನ್ ಎಂದು ಕರೆಯಲಾಗುವ ಪ್ರದೇಶದಲ್ಲಿ ಪ್ಯಾಲೆಸ್ಟೈನ್ ಅರಬ್ಬರು ಮೂಲ ನಿವಾಸಿಗಳು 1881ರ ಹೊತ್ತಿಗೆ ಮೊದಲ ಜ್ಯೂ ವಲಸೆಗಾರರು ತಮ್ಮ 'ತಾಯ್ನಾಡು' ರಶ್ಯಾ ಮತ್ತು ಯೆಮೆನಗಳಿಂದ ಬರಲಾರಂಭಿಸಿದರು. ಕ್ರಿಸ್ತಪೂರ್ವದಲ್ಲಿ ಈ ಪ್ರದೇಶದಲ್ಲಿ ಯಹೂದಿ ಧರ್ಮ ಹುಟ್ಟಿತ್ತು ಎಂದು ಬಿಟ್ಟರೆ ಎಲ್ಲಾ ಜ್ಯೂಗಳ 'ತಾಯ್ನಾಡು' ಎಂಬುದಕ್ಕೆ ಬೇರೆ ಏನು ಆಧಾರವಿರಲಿಲ್ಲ. ಆದರೂ ಜ್ಯೂ ತಾಯ್ನಾಡಿನ ಈ ಪರಿಕಲ್ಪನೆ ಮುಂದಿನ ದಶಕಗಳಲ್ಲಿ ಪ್ರಬಲವಾಗಿ ಜ್ಯೂ-ಅರಬ್ ವಿವಾದಕ್ಕೂ ನಾಂದಿಹಾಡಿತು. 1896ರಲ್ಲಿ ಜ್ಯೂ ಪ್ರಭುತ್ವ' ಎಂಬ ಪುಸ್ತಕ ಬರೆದು ಥಿಯೋಡೊರ್ ಹರ್ಜಿ ಎಂಬಾತ ಝಿಯೋನಿಸ್ಟ್ ಚಳುವಳಿಗೆ ಬುನಾದಿ ಹಾಕಿದ. ಮೊದಲ ಮಹಾ ಯುದ್ಧದಲ್ಲಿ ಗೆದ್ದ ಬ್ರಿಟಿಷ್ ಫ್ರೆಂಚ್‌ತಾವು ಗೆದ್ದುಕೊಂಡ ಪ್ರದೇಶಗಳನ್ನು ಹಂಚಿ ಕೊಳ್ಳುವುದರ ಭಾಗವಾಗಿ ಈಗಿನ ಪ್ಯಾಲೆಸ್ಟೈನ್ - ಇಸ್ರೇಲ್ ಬ್ರಿಟನ್ ಆಡಳಿತಕ್ಕೆ ಸೇರಿತು. ಬ್ರಿಟಿಷರ ಮಾಮೂಲಿ ಒಡೆದು ಆಳುವ ನೀತಿಯ ಭಾಗವಾಗಿಯೇ ಏನೋ ಬ್ರಿಟಿಷ್ ವಿದೇಶಿ ಮಂತ್ರಿ 1917ರಲ್ಲಿ 'ವಿಶ್ವ ಝಿಯೋನಿಸ್ಟ್ ಕಾಂಗ್ರೆಸ್' ಗೆ ಪತ್ರ ಬರೆದು ಜ್ಯೂಗಳು ಈ ಪ್ರದೇಶಕ್ಕೆ ವಲಸೆ ಬರಲು ಉತ್ತೇಜನ ಕೊಟ್ಟು ಅದೇ ಸಮಯದಲ್ಲಿ ಪ್ಯಾಲೆಸ್ಟೈನ್ನರಿಗೆ ಅವರ 'ತಾಯ್ನಾಡು' ಕೊಡಿಸುವ ವಾದ ಮಾಡಿದ.




**ಬ್ರಿಟಿಷ್ ಆಡಳಿತ ಪ್ಯಾಲೆಸ್ಟೈನ್ (1929-1948)**

ಬ್ರಿಟಿಷ್ ಆಡಳಿತದ ಪ್ಯಾಲೆಸ್ಟೈನ್‌ಗೆ ಜ್ಯೂ ವಲಸೆ ಹೆಚ್ಚಿ ಅರಬ್ ಜ್ಯೂ ವಿವಾದ ಅರಂಭವಾಗುತ್ತದೆ. 1920ರಲ್ಲಿ ಜ್ಯೂಗಳ 'ಸ್ವ-ರಕ್ಷಣಾ' ಸಶಸ್ತ್ರ ದಳ ತೀವ್ರಗೊಳ್ಳುತ್ತದೆ. 1929ರಲ್ಲಿ ಪ್ಯಾಲೆಸ್ಟೈನ್ ಜ್ಯೂ ವಿವಾದ ದಂಗೆಗೆ ದಾರಿಮಾಡಿಕೊಡುತ್ತದೆ. ಎರಡೂ ಕಡೆಯ ಸಶಸ್ತ್ರ ಗುಂಪುಗಳ ಹೋರಾಟ ನಡೆಸುತ್ತವೆ. ಬ್ರಿಟಿಷ್ ಸೈನ್ಯಾಧಿಕಾರಿ ಒಬ್ಬನ ಬೆಂಬಲದಿಂದ ಜ್ಯೂ ಪಡೆ ಗೆಲ್ಲುತ್ತದೆ. 1937ರಲ್ಲಿ ಪ್ಯಾಲೆಸ್ಟೈನ್ ಅರಬರು ಜ್ಯೂ ಆಕ್ರಮಣದ ವಿರುದ್ಧ ಇನ್ನೊಮ್ಮೆ ದಂಗೆ ಏಳುತ್ತಾರೆ. ಹಿಟ್ಲರ್‌ನ ಜರ್ಮನಿಯಲ್ಲಿ ಜ್ಯೂಗಳ ಮೇಲೆ ನಾಜಿ ಅತ್ಯಾಚಾರದ ವಿರುದ್ಧ ಜ್ಯೂಗಳ ಉಗ್ರಗಾಮಿ ಪಡೆಗಳು ಸಂಘಟಿತವಾಗುತ್ತವೆ. 1944ರಲ್ಲಿ (ಆಮೇಲೆ ಇಸ್ರೇಲಿನ ಪ್ರಧಾನಿಯಾದ) ಮೆನಾಚಿಮ ಬೆಗಿನ್ ನೇತೃತ್ವ ಬ್ರಿಟಿಷರ ವಿರುದ್ಧ 'ಸ್ವಾತಂತ್ರ್ಯಕ್ಕೆ ಗೆರಿಲ್ಲಾ ಹೋರಾಟ ಆರಂಭಿಸುತ್ತಾರೆ. 1946ರಲ್ಲಿ ಜೋರ್ಡ್‌ನ್ ನದಿಯ ಪೂರ್ವಕ್ಕೆ ಜೋರ್ಡಾನ್ ಎಂದು ಕರೆದು ಸ್ವಾತಂತ್ರ್ಯ ಕೊಟ್ಟ ಪಶ್ಚಿಮದ ಪ್ರದೇಶ (ಈಗಿನ ಇಸ್ರೇಲ್ ಪ್ಯಾಲೆಸ್ಟೈನ್)ದಲ್ಲಿ ಬ್ರಿಟಿಷ್ ಆಡಳಿತ ಮುಂದುವರೆಯುತ್ತದೆ. 1947ರಲ್ಲಿ ವಿಶ್ವಸಂಸ್ಥೆ ಪ್ಯಾಲೆಸ್ಟೈನ್‌ನ್ನು ಅರಬ್ ಮತ್ತು ಜ್ಯೂ-ನಿಯಂತ್ರಿತ ಭಾಗವಾಗಿ ಒಡೆಯುವ 'ನಿರ್ಧಾರ ಕೈಗೊಳ್ಳುತ್ತದೆ. ಇದನ್ನು ಅರಬರು ವಿರೋಧಿಸುತ್ತಾರೆ. ಇದನ್ನು ವಿರೋಧಿಸಿದ ನೆರೆಯ ಅರಬ್ ದೇಶಗಳು ಸೈನ್ಯ ಜಮಾವಣೆ ಮಾಡುತ್ತಿದ್ದ ಹಾಗೆ ಬೆನ್‌ಗುರಿನ್ ನಾಯಕತ್ವದಲ್ಲಿ 'ಇಸ್ರೇಲ್' ತನ್ನ ಸ್ವಾತಂತ್ರ್ಯ ಘೋಷಿಸಿತು.

**ಪ್ಯಾಲೆಸ್ಟೈನ್ ತಾಯ್ನಾಡಿಗೆ ಹೋರಾಟ (1948)**

1949ರಲ್ಲಿ ಅರಬ್-ಇಸ್ರೇಲಿ ಯುದ್ಧದಲ್ಲಿ ಅರಬರು ಸೋತು ಸುಮಾರು 7 ಲಕ್ಷ ಪ್ಯಾಲೆಸ್ಟೈನ್ನರು ನಿರಾಶ್ರಿತರಾಗುತ್ತಾರೆ. ವಿವಾದ ಮುಂದುವರೆದು 1967ರಲ್ಲಿ ಅರಬ್ ಸೈನ್ಯ ಇಸ್ರೇಲ್‌ವಿರುದ್ಧ ಸೈನ್ಯ ಜಮಾವಣೆ ಮಾಡುತ್ತದೆ. ಆದರೆ ಅವರು ಯುದ್ಧ ಹೂಡುವ ಮೊದಲೇ ಇಸ್ರೇಲ್ ಯುದ್ಧ ಆರಂಭದ ಕೇವಲ ಆರು ದಿನಗಳಲ್ಲಿ ಅರಬ್ ಸೈನ್ಯವನ್ನು ಹಿಮ್ಮೆಟ್ಟಿಸುತ್ತಾರೆ. ಸಿನಾಯ, ಗೋಲನ್, ದಿಬ್ಬ, ಗಾಜಾ ಪಟ್ಟಿ ಮತ್ತು ಪಶ್ಚಿಮ ಬ್ಯಾಂಕ್‌ನ್ನು ಇಸ್ರೇಲ್ ಆಕ್ರಮಿಸಿಕೊಳ್ಳುವ ವಿಶ್ವಸಂಸ್ಥೆ ನಿರ್ಣಯ 242 ಪಾಸುಮಾಡಿ ಇಸ್ರೇಲ್ ಆಕ್ರಮಿತ ಪ್ರದೇಶಗಳನ್ನು ತೆರವು ಮಾಡ ಬೇಕೆಂದು ಹೇಳುತ್ತದೆ. ಆದರೆ ಆ ನಿರ್ಣಯ ಈ ವರೆಗೂ ಜಾರಿಯಾಗಿಲ್ಲ. 1968ರಲ್ಲಿ ಪ್ಯಾಲೆಸ್ಟೈನ್ 'ತಾಯ್ನಾಡಿನ' ಹಂಬಲದ ದಮನದ ವಿರುದ್ಧ ಹೋರಾಡಲು ಪ್ಯಾಲೆಸ್ಟೈನ್ ವಿಮುಕ್ತಿ ಸಂಘಟನೆ (PLO) 'ಯಾಸರ್ ಅರಾಫತ್ ಅಧ್ಯಕ್ಷತೆಯಲ್ಲಿ ಆರಂಭವಾಗುತ್ತದೆ. PLO ಇಸ್ರೇಲ್ ವಿರುದ್ಧ ಗೆರಿಲ್ಲಾ ಸ್ವಾತಂತ್ರ ಹೋರಾಟ ಆರಂಭಿಸುತ್ತದೆ. ಗುಂಪುಗಳ ಹೋರಾಟದ ಭಾಗವಾಗಿ ವಿಮಾನ ಅಪಹರಣ ಇತ್ಯಾದಿ ಕೃತ್ಯಗಳು ಇಳಿಯುತ್ತವೆ. 1973ರಲ್ಲಿ ಇನ್ನೊಂದು ಅರಬ್ ಇಸ್ರೇಲಿ ಯುದ್ಧದಲ್ಲಿ ಪನಃ ಅವರಿಗೆ ಸೋಲಾಗುತ್ತದೆ. ಪ್ಯಾಲೆಸ್ಟೈನ್ನರು ತಮ್ಮ ನಾಡಿನಲ್ಲೇ ಪರತಂತ್ರನಾಗೇ ಉಳಿಯುತ್ತಾರೆ. 1978ರಲ್ಲಿ ಈಜಿಪ್ಟ್ ಇಸ್ರೇಲ್ ಜತೆ ಒಪ್ಪಂದ ಮಾಡಿ ರಾಜಿಯಾದರೂ, ಇತರ ಅರಬ್ ದೇಶಗಳು ಇಸ್ರೇಲ್ ಜತೆ ಸಂಬಂಧ ಕೋರುವು ದಿಲ್ಲ. 1987ರಲ್ಲಿ ಇಸ್ರೇಲಿನ ಆಕ್ರಮಿತ ಪ್ರದೇಶಗಳಲ್ಲಿ 'ಇಂತಿಫದಾ' ಎಂಬ ಸಾಮಾನ್ಯರ ದಂಗೆ ಆರಂಭವಾಗುತ್ತದೆ. ಆರು ವರ್ಷಗಳ ಕಾಲ ಕೇವಲ ಕವಡೆಕಲ್ಲಿನ ಆಯುಧದಿಂದ ಪ್ಯಾಲೆಸ್ಟೈನ್ನರು ಪ್ರಬಲ ಇಸ್ರೇಲಿ ಸೈನ್ಯವನ್ನು ಸತಾಯಿಸುತ್ತಾರೆ. ಇದರಿಂದ ಸೋತ ಇಸ್ರೇಲ್ ಗುಪ್ತವಾಗಿ ಒಸ್ಲೋ (ಯುರೋಪಿನ ನಾರ್ವೆ ರಾಜಧಾನಿ)ಯಲ್ಲಿ ಅರಾಫತ್ ಜತೆ ಶಾಂತಿ ಮಾತುಕತೆ ಆರಂಭಿಸುತ್ತಾರೆ. 1993ರಲ್ಲಿ ಒಸ್ಲೋ ಒಪ್ಪಂದ ಆಗುತ್ತದೆ. ಅದು ಉತ್ತಮ ಒಪ್ಪಂದ ವಲ್ಲದಿದ್ದರೂ ಅದರ ಜಾರಿ ಆಗದಿರುವುದೇ ಈಗಿನ ಹಿಂಸಾಚಾರದ ಮೂಲ. ○



ಹೈದರಾಬಾದ್ ನಗರದಲ್ಲಿ ಯಶಸ್ವಿಯಾಗಿ ಜರುಗಿದ ಸಿಪಿಐ(ಎಂ) 17ನೇ ಮಹಾಧಿವೇಶನದ ಹಿನ್ನೆಲೆಯಲ್ಲಿನ ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರಾದ ಕಾಂ। ಪ್ರಕಾಶ್ ಕಾರಟ್ ಅವರು ಫ್ರಂಟ್ ಲೈನ್' ನ ವಿ. ಶ್ರೀಧರ ಅವರಿಗೆ ನೀಡಿದ ಸಂದರ್ಶನದಲ್ಲಿ ಪಕ್ಷದ ಮುಖ್ಯ ಸಂಘಟನಾ ಸಮಸ್ಯೆಗಳ ಬಗ್ಗೆ 1998ರಲ್ಲಿ ಕಲ್ಕತ್ತಾದಲ್ಲಿ ಜರುಗಿದ ಪಕ್ಷದ 16ನೇ ಅಧಿವೇಶನದ ನಂತರದ ಸಾಧನೆಗಳನ್ನು ಕುರಿತು ಚರ್ಚಿಸಿದ್ದಾರೆ. ಸಂದರ್ಶನದ ಕನ್ನಡ ಅನುವಾದ ಈ ಕೆಳಗಿನಂತಿದೆ. ರಾಜಕೀಯ ಅಂಶಗಳ ಕುರಿತ ಇನ್ನೊಂದು ಸಂದರ್ಶನ ಸೀತಾರಾಂರೊಂದಿಗೆ....

# ಪಕ್ಷ ವಿಸ್ತರಣೆಗೆ ಪ್ರಮುಖ ಆಧ್ಯತೆ

***ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ಸೈದ್ಧಾಂತಿಕವಾಗಿ ಸಾಕಷ್ಟು ತಯಾರಾಗದಿರುವ ಬಗ್ಗೆ ನೀವು ಅಧಿವೇಶನದ ಸಂದರ್ಭದಲ್ಲಿ ಬೇರೊಂದು ಕಡೆ ಹೇಳಿದಂತಿತ್ತಲ್ಲವೇ? ಕಳೆದ ಅಧಿವೇಶನದ ನಂತರ ಸಂಘಟನೆ ಹೇಗೆ ಬೆಳೆದಿದೆ?***

ಕಲ್ಕತ್ತಾ ಅಧಿವೇಶನದ ನಂತರ ಮೂರು ವರ್ಷಗಳ ಅವಧಿಯಲ್ಲಿ ಪಕ್ಷದ ಸದಸ್ಯತ್ವ ಶೇಕಡಾ 11 ರಷ್ಟು ಹೆಚ್ಚಾಗಿದೆಯಾದರೂ ಈ ಹೆಚ್ಚಳ ತೃಪ್ತಿಕರವಾಗಿಲ್ಲ ಎಂದು 17ನೇ ಅಧಿವೇಶನದಲ್ಲಿ ಮಂಡಿಸಲಾದ ಸಂಘಟನಾ ವರದಿಯಲ್ಲಿ ಗುರುತಿಸಲಾಗಿದೆ. ಯಾಕೆಂದರೆ ಈ ಹೆಚ್ಚಳವು ನಾವು ಈಗಾಗಲೇ ಬಲಿಷ್ಠವಾಗಿರುವ ಪಶ್ಚಿಮ ಬಂಗಾಳ, ತ್ರಿಪುರ ಮತ್ತು ಕೇರಳ ರಾಜ್ಯಗಳಲ್ಲಿ ಮುಖ್ಯವಾಗಿ ಮತ್ತು ಸ್ವಲ್ಪ ಮಟ್ಟಿಗೆ ತಮಿಳು ನಾಡಿನಲ್ಲಿ ಕೇಂದ್ರೀಕೃತವಾಗಿದೆ. ಈ ರಾಜ್ಯಗಳನ್ನು ಹೊರತುಪಡಿಸಿ ಉಳಿದ ಕಡೆ ಬೆಳವಣಿಗೆ ಸಮಾಧಾನಕರವಾಗಿಲ್ಲ. ಆದ್ದರಿಂದ, ದೇಶದ ಎಲ್ಲಾ ಕಡೆಗಳಲ್ಲಿಯೂ ಪಕ್ಷವನ್ನು ತುರ್ತಾಗಿ ವಿಸ್ತರಿಸುವುದು ಅಗತ್ಯವಾಗಿದೆ ಎಂದು ಅಧಿವೇಶನದ ವರದಿಯಲ್ಲಿ ಒತ್ತಿ ಹೇಳಲಾಗಿದೆ. ಇದು ವರದಿಯ ಪ್ರಮುಖ ಆಶಯವಾಗಿದೆ. ಈ ವರದಿಯು ಬೇರೆ ಬೇರೆ ರಾಜ್ಯಗಳಲ್ಲಿನ ನಮ್ಮ ಬಲವನ್ನು ಪರಿಶೀಲಿಸುತ್ತಾ ಸಂಘಟನೆಯನ್ನು ಕ್ರಮಬದ್ಧಗೊಳಿಸಲು ಮತ್ತು ವಿಸ್ತರಿಸಲು ಅಗತ್ಯವಾದ ಕ್ರಮಗಳನ್ನು ಸೂಚಿಸುತ್ತದೆ.

***ಪಕ್ಷದ ಕಾರ್ಯಕರ್ತರು ಸೈದ್ಧಾಂತಿಕವಾಗಿ ಸಾಕಷ್ಟು ತಯಾರಾಗದಿರುವ ಬಗ್ಗೆ ನೀವು ಅಧಿವೇಶನ ಸಂದರ್ಭದಲ್ಲಿ ಎಲ್ಲೋ ಹೇಳಿದ್ದಿರಲ್ಲವೆ...?***

ನಾವು ಹೇಳಿದ್ದು ಪಕ್ಷದ ಸದಸ್ಯರ ರಾಜಕೀಯ ಸೈದ್ಧಾಂತಿಕ ಮಟ್ಟವನ್ನು ಹೆಚ್ಚಿಸುವ ಅಗತ್ಯವಿದೆ ಎಂದು. ಅದೊಂದು ಎರಡು ಹಂತದ ಕರ್ತವ್ಯ. ಮೊದಲನೆಯದು ಮಾರ್ಕ್ಸ್‌ವಾದದ ಬಗ್ಗೆ, ಪ್ರಸ್ತುತ ಪರಿಸ್ಥಿತಿಗೆ ಪಕ್ಷದ ಕಾರ್ಯಕ್ರಮವನ್ನು ಹೇಗೆ ಅನ್ವಯಿಸುವುದು ಇತ್ಯಾದಿ ವಿಷಯಗಳ ಬಗ್ಗೆ ಪಕ್ಷದ ಸದಸ್ಯರಿಗೆ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದು. ಎರಡನೆಯ ಕರ್ತವ್ಯ ಪಕ್ಷದ ಸದಸ್ಯರ ಕೆಲಸವನ್ನು ವಿಮರ್ಶೆಗೆ ಒಳಪಡಿಸುವುದು ಇದು ಪಕ್ಷದ ಘಟಕಗಳ ಮತ್ತು ಸಮಿತಿಗಳ ಸಂಘಟನಾ ಕೆಲಸದ ಭಾಗವಾಗಿದೆ. ಪಕ್ಷಕ್ಕೆ ಸದಸ್ಯರನ್ನು ಸೇರಿಸಿದ ನಂತರ ಅವರ ಶಿಕ್ಷಣ ಮತ್ತು ತರಬೇತಿಯನ್ನು ಖಚಿತಪಡಿಸುವುದು ಇದರ ಉದ್ದೇಶವಾಗಿದೆ. ಅವರು ಹೇಗೆ ಬೆಳೆಯುತ್ತಿದ್ದಾರೆ ಎಂಬುದನ್ನು ನೋಡಿಕೊಳ್ಳಲು ಒಂದು ಮಾರ್ಗದರ್ಶಿ ಪ್ರಕ್ರಿಯೆಯೂ ಸಹ ಅಸ್ಥಿತ್ವದಲ್ಲಿದೆ.

***ಇದನ್ನು ಮಾಡಲು ಯಾವ ರೀತಿಯ ಸಂರಚನೆಗಳು ಬೇಕಾಗುತ್ತವೆ?***

ನಿರಂತರ ಶಾಲೆಗಳ ಮೂಲಕ ಪಕ್ಷದ ಶೈಕ್ಷಣಿಕ ಸಲಕರಣೆಗಳನ್ನು ಬಲಿಷ್ಟಗೊಳಿಸಲು ನಾವು ಯೋಚಿಸುತ್ತಿದ್ದೇವೆ. ಕೆಲವು ದೊಡ್ಡ ರಾಜ್ಯಗಳಲ್ಲಿ ಪಕ್ಷದ ಕಾರ್ಯಕರ್ತರಿಗೆ ಶಾಶ್ವತ ಶಾಲೆಗಳನ್ನು ನಡೆಸಲು ಯೋಜಿಸುತ್ತಿದ್ದೇವೆ. ಅದಕ್ಕೆ ನಿರ್ಧಿಷ್ಟವಾದ ಪ್ರಸ್ತಾವನೆಗಳಿವೆ. ಆದರೆ ಸೌಲಭ್ಯಗಳನ್ನು ಒದಗಿಸಿಕೊಡಲಾರದ ತಪ್ಪು ನಮ್ಮ ಮೇಲೆಯೇ ಇದೆ. ಸೌಲಭ್ಯ ಮತ್ತು ಅವಕಾಶಗಳನ್ನು ಒದಗಿಸಿದರೆ ಪಕ್ಷದ ಸದಸ್ಯರು ಬಳಸಿಕೊಳ್ಳುತ್ತಾರೆ ಎಂಬ ಬಗ್ಗೆ ನನಗೆ ವಿಶ್ವಾಸವಿದೆ.

**ಎರಡನೆಯದಾಗಿ,** ಸೈದ್ಧಾಂತಿಕ ಕ್ಷೇತ್ರಕ್ಕೆ ಸಂಬಂದಿಸಿದ್ದು, ಸೋವಿಯತ್ ಒಕ್ಕೂಟವನ್ನು ಕೆಡವಿದ ಮತ್ತು ಪೂರ್ವಯೂರೋಪಿನ ದೇಶಗಳಲ್ಲಿ ಆದಂತಹ ಹಿನ್ನಡೆಗಳ ನಂತರ 1992ರಲ್ಲಿ ಚೆನ್ನೈನಲ್ಲಿ ಒಂದು ನಿರ್ಣಯವನ್ನು ಅಂಗೀಕರಿಸಿದೆವು. ಆ ನಿರ್ಣಯವು ಜಗತ್ತಿನ ಹೊಸ ಸನ್ನಿವೇಶವನ್ನು ಸೂಕ್ಷ್ಮವಾಗಿ ಪರಿಶೀಲಿಸಿತ್ತು ಮತ್ತು ಜಗತ್ತಿನಾದ್ಯಂತ ಮಾರ್ಕ್ಸ್‌ವಾದಿಗಳಿಗಿರುವ ಸವಾಲುಗಳನ್ನು ಪರಿಶೀಲಿಸಿತ್ತು. 17ನೇ ಮಹಾಧಿವೇಶನದಲ್ಲೂ ಪಕ್ಷವು, 1992 ರಿಂದ ಒಂದು ದಶಕದ ಅನುಭವಗಳ ಬೆಳಕಿನಲ್ಲಿ ಆ ನಿರ್ಣಯವನ್ನು ಸಮಕಾಲಿಕಗೊಳಿಸಲು ತೀರ್ಮಾನಿಸಿತು. ಈ ಚರ್ಚೆಯು ಎಲ್ಲಾ ಹಂತಗಳಲ್ಲಿ ಪಕ್ಷದ ಸದಸ್ಯರ ಸೈದ್ಧಾಂತಿಕ ತಿಳುವಳಿಕೆಯನ್ನು ಉತ್ತಮಪಡಿಸುತ್ತದೆ. ಈ ಚರ್ಚೆಯನ್ನು ಕೇವಲ ಕೇಂದ್ರ ಸಮಿತಿಗೆ ಸೀಮಿತಗೊಳಿಸುವುದಿಲ್ಲ. ಪಕ್ಷದಲ್ಲಿ ಚರ್ಚಿಸಲು ಕರಡನ್ನು ಬಿಡುಗಡೆ ಮಾಡಲಾಗುವುದು. ಹೊಸ ಕೇಂದ್ರ ಸಮಿತಿಯು ನಿರ್ವಹಿಸಬೇಕಾಗಿರುವ ಜವಾಬ್ದಾರಿಗಳಲ್ಲಿ ಇದೂ ಒಂದು.

**ಮೂರನೆಯದು,** ಪಕ್ಷದ ಸಾಮಾಜಿಕ ಸಂಯೋಜನೆಯ ಮೇಲೆ ನಮ್ಮ ಅವಲೋಕನಕ್ಕೆ ಸಂಬಂಧಿಸಿದ್ದು ಪಕ್ಷಕ್ಕೆ ಹೆಚ್ಚಿನ ದಲಿತರು ಪ್ರವೇಶಮಾಡುತ್ತಿದ್ದಾರೆ. ಮಹಿಳೆಯರ ಪ್ರಾತಿನಿಧ್ಯವೂ ಉತ್ತಮಗೊಂಡಿದೆ. ಅಲ್ಪಸಂಖ್ಯಾತರನ್ನು ಸೆಳೆಯಲು ನಾವು ಬಹಳಷ್ಟು ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಆದಿವಾಸಿ ಮತ್ತು ಬುಡಕಟ್ಟು ಜನರ ಸಮಸ್ಯೆಗಳಿಗೆ ಸಂಬಂದಿಸಿಯೂ ಒಂದು ದಸ್ತಾವೆಜನ್ನು ಅಂಗೀಕರಿಸಿದ್ದೇವೆ. ಅಧಿವೇಶನದ ನಂತರ ಇದರ ಮೇಲೆ ಸಮಾವೇಶವೊಂದನ್ನು ಸಂಘಟಿಸುತ್ತಿದ್ದೇವೆ. ಸಮಾಜಿಕ ವಿಷಯಗಳನ್ನು ಕೂಡ ಕೈಗೆತ್ತಿಕೊಳ್ಳಲು ಒತ್ತು ನೀಡಿದ್ದೇವೆ.

ಆಂದ್ರಪ್ರದೇಶ ಮತ್ತು ತಮಿಳುನಾಡುಗಳಂತಹ ರಾಜ್ಯಗಳಲ್ಲಿ ಅಶ್ಪ್ರಶ್ಯತೆ ಮತ್ತು ಜಾತಿದಬ್ಬಾಳಿಕೆಯಂತಹ ವಿಷಯಗಳ ಮೇಲೆ ಕೇಂದ್ರೀಕರಿಸಿದ್ದೇವೆ.


***ಈ ಮಹಾಧಿವೇಶನವು ಚುನಾವಣಾ ರಾಜಕೀಯಕ್ಕೆ ಹೋಲಿಸಿದರೆ ಸಂಘಟನಾ ರಾಜಕೀಯಕ್ಕೆ ಹೆಚ್ಚು ಒತ್ತು ನೀಡಿದೆಯೇ?***

ರಾಜಕೀಯ ಸಂಘಟನಾ ವರದಿಯ ಒಂದು ವಿಭಾಗದಲ್ಲಿ ಸಂಯುಕ್ತ ರಂಗದ ಚಟುವಟಿಕೆಗಳನ್ನು ವಿಮರ್ಶಿಸಿದ್ದೇವೆ. ಈ ವಿಮರ್ಶೆಯಲ್ಲಿ ಸಂಯುಕ್ತ ರಂಗದ ತಂತ್ರಗಳನ್ನು ಕೇವಲ ಚುನಾವಣಾ ಹೊಂದಾಣಿಕೆಗಳಿಗೆ ಮಾತ್ರ ಸೀಮೀತಗೊಳಿಸುವ ಪ್ರವೃತ್ತಿಯಿದೆ ಎಂದು ಗುರುತಿಸಲಾಗಿದೆ. 'ಸಂಯುಕ್ತ ರಂಗ'ಗಳನ್ನು ವಿವಿಧ ವಿಭಾಗಗಳ ದುಡಿಯುವ ಜನಗಳ ಹೋರಾಟ ಮತ್ತು ಚಳುವಳಿಗಳನ್ನು ಬೆಳೆಸಲು ಜನರನ್ನು ಸಂಘಟಿಸಬೇಕೆಂಬ ಅಗತ್ಯದ ಬಗ್ಗೆ ಈ ವಿಮರ್ಷೆ ಒತ್ತು ನೀಡಿದೆ. ಈ ಒತ್ತನ್ನು 'ಪೀಪಲ್ಸ್ ಫ್ರಂಟ್‌ನ್ನು' ಬೆಳೆಸುವ ಜವಾಬ್ದಾರಿಯ ಜೊತೆ ಎಣೆಯಲಾಗಿದೆಯೆ?


ಒಂದು ರೀತಿಯಲ್ಲಿ ಹೌದು ಆದರೆ ಇವೆಲ್ಲವನ್ನೂ 'ಪೀಪಲ್ಸ್ ಫ್ರಂಟ್‌ನ' ಅಗತ್ಯಕ್ಕಾಗಿ ಮಾತ್ರವೇ ಮಾಡಲಾಗುವುದಿಲ್ಲ. ಆದರೆ ನಾವು ತಳಮಟ್ಟದ ತತ್‌ಕ್ಷಣದ ವಿಷಯಗಳ ಹೋರಾಟದ ಮೇಲೆಯೂ ಒತ್ತು ನೀಡಿದ್ದೇವೆ. ಈ ವಿಷಯಗಳ ಮೇಲೆ ಹೋರಾಡುವ ಎಲ್ಲರೊಡನೆಯೂ ಸಂಯುಕ್ತ ರಂಗ ಕಟ್ಟಲು ನಾವು ಬಯಸುತ್ತೇವೆ.

***ಸಂಘಟನೆಯನ್ನು ಬೆಳೆಸುವಲ್ಲಿ ಪಕ್ಷದ ಆಂದ್ರ ಪ್ರದೇಶ ಘಟಕದ ಅನುಭವದಿಂದ ಏನಾದರೂ ಗಮನಾರ್ಹವಾದುದಾಗಿದೆಯೇ?***

ನಮ್ಮ ವರದಿಯಲ್ಲಿ ಸಾಮ್ರಾಜ್ಯಶಾಹಿ ಪ್ರೇರಿತ ಜಾಗತೀಕರಣ ಮತ್ತು ಉದಾರೀಕರಣದ ಪರಿಣಾಮಗಳ ವಿರುದ್ದದ ಹೋರಾಟಗಳ ಅಗತ್ಯವನ್ನು ಎತ್ತಿ ತೋರಿಸಿದ್ದೇವೆ ಅಂತಹ ಒಂದು ಹೋರಾಟ ಮೂರು ತಿಂಗಳ ದೀರ್ಘ ಕಾಲ ಆಂಧ್ರದಲ್ಲಿ ನಡೆದ ವಿದ್ಯುತ್ ಬೆಲೆ ಏರಿಕೆ ವಿರುದ್ಧದ ಹೋರಾಟ. ಇದೊಂದು ದೃಢವಾದ ಹೋರಾಟಕ್ಕೆ ಉದಾಹರಣೆ. ಈ ರೀತಿಯ ಹೋರಾಟಗಳನ್ನು ಬೆಳೆಸಬೇಕೆಂದು ಗುರುತಿಸಿದ್ದೇವೆ. ಎಡಪಕ್ಷಗಳನ್ನು ಒಳಗೊಂಡು ರಚಿಸಿದ ವೇದಿಕೆ ಆಂದ್ರದಲ್ಲಿದೆ. ಅದು ಚಂದ್ರಬಾಬು ನಾಯ್ಡು ಸರ್ಕಾರದಿಂದ ಜಾರಿಗೊಳ್ಳುತ್ತಿರುವ ವಿಶ್ವಬ್ಯಾಂಕಿನ ಸಂರಚನಾ ಹೊಂದಾಣಿಕೆಯ ಎಲ್ಲಾ ವಿಷಯಗಳನ್ನು ತೆಗೆದುಕೊಂಡಿದೆ. ಅದೇ ರೀತಿ ಜಾತಿ ಬೇದದ ವಿರುದ್ಧದ ಹೋರಾಟವನ್ನೂ ತೆಗೆದುಕೊಂಡಿದೆ. ಇದೇ ರೀತಿಯ ಹೋರಾಟಗಳು ದೇಶದ ಇತರ ಭಾಗಗಳಲ್ಲಿಯೂ ಬರಬೇಕು. ನಮ್ಮ ಹೋರಾಟವನ್ನು ಅನುಸರಿಸಿ ಆಂದ್ರ ಪ್ರದೇಶ ಸರ್ಕಾರವು ಜಾತಿ ದಬ್ಬಾಳಿಕೆಯ ಸ್ವರೂಪವನ್ನು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಿದೆ.



ಪ್ರಕಾಶ್ ಕಾರಟ್




## ಕಾಮ್ರೇಡ್ ಸುರ್ಜಿತ್ ಪುನರಾಯ್ಕೆ

ಪಕ್ಷದ ಕಾರ್ಯದರ್ಶಿಯಾಗಿ ಸ್ವಾತಂತ್ರ್ಯ ಹೋರಾಟಗಾರ 86 ವರ್ಷದ ಕ್ರಾಂತಿಕಾರಿ ಕಾಂ. ಹರಿಕಿಷನ್ ಸಿಂಗ್ ಸುರ್ಜಿತ್ ಸರ್ವಾನುಮತದಿಂದ ಪುನರಾಯ್ಕೆಗೊಂಡಿದ್ದಾರೆ. 1992ರ 14ನೇ ಮಹಾಧಿವೇಶನದಿಂದ ಸತತವಾಗಿ 4ನೇ ಬಾರಿಗೆ ಸುರ್ಜಿತ್ ಆಯ್ಕೆಯಾಗಿದ್ದಾರೆ. ಎರಡು ಸ್ಥಾನ ಖಾಲಿ ಇರುವ 79 ಸದಸ್ಯರಿರುವ ಕೇಂದ್ರ ಸಮಿತಿಯಲ್ಲಿ ಎಂಟು ಮಹಿಳಾ ಸದಸ್ಯರಿದ್ದಾರೆ. ಆಂಧ್ರಪ್ರದೇಶದ ಮುಖಂಡ ಕೊರಾಟಲ ಸತ್ಯನಾರಾಯಣ ಪಾಲಿಟ್‌ಬ್ಯೂರೋಗೆ ಹೊಸದಾಗಿ ಆಯ್ಕೆಯಾಗಿದ್ದು 17 ಸದಸ್ಯರ ಪಟ್ಟಿ ಇಂತಿದೆ.

1. ಹರ್‌ಕಿಶನ್ ಸಿಂಗ್ ಸುರ್ಜಿತ್
2. ಜ್ಯೋತಿಬಸು
3. ಇ.ಕೆ.ನಾಯನಾರ್
4. ಪ್ರಕಾಶ್ ಕಾರಾಟ್
5. ಸೀತಾರಾಂ ಯೆಚೂರಿ
6. ಇ.ಬಾಲಾನಂದನ್
7. ಪಿ.ರಾಮಚಂದ್ರನ್
8. ಆರ್.ಉಮಾನಾಥ್
9. ವಿ.ಎಸ್.ಅಚ್ಯುತಾನಂದನ್
10. ಎಸ್.ರಾಮಚಂದ್ರಪಿಳ್ಳೆ
11. ಪಿಣರಾಯಿ ವಿಜಯನ್
12. ಮಾಣಿಕ್ ಸರ್ಕಾರ್
13. ಬುದ್ದದೇವ್ ಭಟ್ಟಾಚಾರ್ಯ
14. ಅನಿಲ್ ಬಿಸ್ವಾಸ್
15. ಬಿಮನ್ ಬಸು
16. ಎಂ.ಕೆ.ಪಂಧೆ
17. ಕೊರಾಟಾಲ ಸತ್ಯನಾರಾಯಣ





ರಂಜಿ ಕ್ಲೆಸ್ ಮುನ್ನುಗ್ಗುತ್ತಿದ ಸ್ವಯಂಸೇವಕರ ಮಾರ್ಚ್.....

**ಸಿಪಿಐ(ಎಂ)'ನ 17ನೇ ಮಹಾಧಿವೇಶನದ ನಂತರ, ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ, ಮಹಾಧಿವೇಶನ ಅಂಗೀಕರಿಸಿದ ರಾಜಕೀಯ ಗೊತ್ತುವಳಿಯ, ರಾಜಕೀಯ ನಿಲುಮೆಯನ್ನು ಈ ಸಂದರ್ಶನದಲ್ಲಿ ತಿಳಿಸಿದ್ದಾರೆ. ಪಕ್ಷ ಅಂಗೀಕರಿಸಿರುವ ರಾಜಕೀಯ ನಿಲುಮೆಯ ಹಿನ್ನೆಲೆಯಲ್ಲಿ, ಪಕ್ಷವು ಮುಂದಿನ ವರ್ಷಗಳಲ್ಲಿ ಅನುಸರಿಸಲಿರುವ ತಾಂತ್ರಿಕ ನಿಲುಮೆಗಳನ್ನು ಹೀಗೆ ವಿವರಿಸಿದ್ದಾರೆ-----.**




# ಬಿಜೆಪಿಗೆದುರಾಗಿ ಕಾಂಗ್ರೆಸ್‌ಯೇತರ ಪರ್ಯಾಯಕ್ಕಾಗಿ

**ಪ್ರಶ್ನೆ : ಯಾವ ಹಿನ್ನೆಲೆಯಲ್ಲಿ ಈ ಮಹಾಧಿವೇಶನ ನಡೆಯುತ್ತಿದೆ?**

ಉತ್ತರ: ಪಕ್ಷದ ಸಂವಿಧಾನಕ್ಕೆ ಅನುಸಾರವಾಗಿ ಪ್ರತಿ ಮೂರು ವರ್ಷಕ್ಕೆ ಒಮ್ಮೆ ಮಹಾಧಿವೇಶನ ನಡೆಯುತ್ತದೆ. ಪ್ರಸ್ತುತ ಅಧಿವೇಶನವು ದೇಶಾದ್ಯಂತ ಅನೇಕ ರಾಜ್ಯಗಳಲ್ಲಿ ದೊಡ್ಡ ಪ್ರಮಾಣದ ರಾಜಕೀಯ ಮಥನ ನಡೆಯುವಾಗ ನಡೆಯುತ್ತಿದೆ. ದೊಡ್ಡ ರೀತಿಯ ರಾಜಕೀಯ ಅನಿಶ್ಚಿತತೆ ಪ್ರಸ್ತುತ ಇದೆ. ಗುಜರಾತ್ ಹಾಗೂ ಅಯೋಧ್ಯೆಯಲ್ಲಿ ನಡೆದಿರುವ ಘಟನಾವಳಿಗಳು, ಅವುಗಳ ಪರಿಣಾಮದಿಂದ ಉಂಟಾಗಿರುವ ಪರಿಸ್ಥಿತಿ, ಬಿಜೆಪಿಯು ರಾಷ್ಟ್ರವನ್ನು ಯಾವ ಪರಿಸ್ಥಿತಿಗೆ ಕೊಂಡೊಯ್ಯುತ್ತಿದೆ ಎಂಬುದನ್ನು ತೋರುತ್ತದೆ. 'ಎಲ್ಲಾ ವಲಯಗಳಲ್ಲೂ ಪ್ರಮುಖವಾಗಿ ಆರ್ಥಿಕ ವಲಯದಲ್ಲಿನ ಬೆಳವಣಿಗೆಗಳು ಪರಿಸ್ಥಿತಿಯ ಗಂಭೀರತೆಯ ಸೂಚಕ.

ಈ ಘಟನೆಗಳು ರಾಜಕೀಯ ಮಥನಕ್ಕೆ ಎಡೆಮಾಡಿವೆ. ಕಳೆದ ಕೆಲವು ವಾರಗಳ ಬೆಳವಣಿಗೆಗಳು ಎಷ್ಟು ಗಂಭೀರವಾಗಿವೆ ಎಂದರೆ ರಾಜಕೀಯ ಶಕ್ತಿಗಳು ಹಾಗೂ ಜನತೆ ತಮ್ಮ ರಾಜಕೀಯ ಆಯ್ಕೆಗಳನ್ನು ಮರು ಅಂದಾಜಿಸುತ್ತಿದ್ದಾರೆ. ನಿರ್ದಿಷ್ಟವಾಗಿ ಇತ್ತೀಚಿನ ವಿಧಾನ ಸಭಾ ಚುನಾವಣೆಗಳ ನಂತರ ಈ ಮಥನ ತೀವ್ರಗೊಂಡಿದೆ. ಈ ಕಾಲಘಟ್ಟದಲ್ಲಿ ನಡೆದಿರುವ ರಾಜಕೀಯ ಮಥನದ ಮೂಲಕ ಕಾಂಗ್ರೆಸ್ಸೇತರ ಪರ್ಯಾಯ ರೂಪಿಸುವುದು ನಮ್ಮ ಯತ್ನವಾಗಲಿದೆ.



**ಎಸ್.ಸೂರ್ಯನಾರಾಯಣ ರಾವ್ ಪುನರಾಯ್ಕೆ**

**ಕೇಂದ್ರ ಸಮಿತಿ ಸದಸ್ಯರಾಗಿ ಕರ್ನಾಟಕದಿಂದ ಪಕ್ಷದ ರಾಜ್ಯ ಕಾರ್ಯದರ್ಶಿ ಎಸ್. ಸೂರ್ಯನಾರಾಯಣ ರಾವ್ ಪುನರಾಯ್ಕೆ ಯಾಗಿದ್ದಾರೆ. ರಾಜ್ಯದಿಂದ 9 ಪ್ರತಿನಿಧಿಗಳು ಹಾಗೂ ಇಬ್ಬರು ವೀಕ್ಷಕರು ಭಾಗವಹಿಸಿದ್ದು, ಅಧಿವೇಶನದಲ್ಲಿ ರಾಜ್ಯ ಪ್ರತಿನಿಧಿಗಳ ಪರವಾಗಿ ವಿ.ಜೆ.ಕೆ. ನಾಯರ್, ಜಿ.ಎನ್.ನಾಗರಾಜ್ ಮತ್ತು ಜಿ.ವಿ. ಶ್ರೀರಾಮರೆಡ್ಡಿ ಚರ್ಚೆಯಲ್ಲಿ ಪಾಲ್ಗೊಂಡಿದ್ದರು.**

**ಪ್ರಶ್ನೆ: ಹಿಂದಿನ ಕೋಲ್ಕತ್ತಾ ಮಹಾಧಿವೇಶನಕ್ಕೆ ಹೋಲಿಸಿದಲ್ಲಿ ಮುಂದುವರಿದಿರುವ ಹಾಗೂ ಬದಲಾಗಿರುವ ಅಂಶಗಳು ಯಾವು?**

ಉತ್ತರ: ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸುವ ಯತ್ನ ನಡೆದಿದ್ದಾಗ ಹಿಂದಿನ ಕೋಲ್ಕತ್ತಾ ಮಹಾಧಿವೇಶನ ನಡೆದಿತ್ತು. ಆ ನಿರ್ದಿಷ್ಟ ಹಂತದಲ್ಲಿ ಅದು ವಿಫಲವಾಗಿತ್ತು. ಕೋಲ್ಕತ್ತಾ ಮಹಾಧಿವೇಶನದ ಕೂಡಲೇ ನಾವು ಕಟ್ಟಬೇಕೆಂದಿದ್ದ ತೃತೀಯ ಪರ್ಯಾಯವು ಅಸ್ತವ್ಯಸ್ತವಾಗಿತ್ತು. ಪಕ್ಷಗಳು ಒಂದೊಂದು ವಿಭಿನ್ನ ನಿಲುಮೆಗಳನ್ನು ಪಡೆದು, ಒಂದರಿಂದ ಒಂದು ದೂರ ಸರಿಯುತ್ತಿತ್ತು. ಆದರೆ ಈಗ ನಾವು ಅದಕ್ಕೆ ವಿಭಿನ್ನವಾದ ಪರಿಸ್ಥಿತಿ ನೋಡುತ್ತಿದ್ದೇವೆ. ಈಗಿನ ಪ್ರಮುಖ ಒತ್ತಾಸೆಯೆಂದರೆ ಕಾಂಗ್ರೆಸ್‌ಯೇತರ ಜಾತ್ಯಾತೀತ ಶಕ್ತಿಗಳು ಒಂದು ಕಡೆ ಸೇರುವುದು.

ಉತ್ತರ ಪ್ರದೇಶದಲ್ಲಿನ ಚುನಾವಣೆ ಇದನ್ನು ತೋರಿದೆ. ಬಿಜೆಪಿಗೆ ಪರ್ಯಾಯವಾಗಿ ಕಾಂಗ್ರೆಸೇತರ ಪರ್ಯಾಯವಿದ್ದಲ್ಲಿ ಜನತೆ ಅದನ್ನು ಆಯ್ಕೆಮಾಡಿದ್ದಾರೆ. ಅಂತಹ ಶಕ್ತಿಯಿಲ್ಲದಾಗ ಅದೊಂದು ರೀತಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ರಾಜಕೀಯ ಫುಟ್‌ಬಾಲ್ ಆಗಿದೆ. ಕಳೆದ 3-4 ವರ್ಷಗಳ ವರ್ಷಗಳ ಮಹತ್ತರ ಬೆಳವಣಿಗೆ ಎಂದರೆ, ಆರ್ಥಿಕ ವಿಷಯಗಳ ಮೇಲೆ, 3 ವರ್ಷಗಳ ಹಿಂದೆ ನಮ್ಮ ಹತ್ತಿರವೇ ಬರಲು ಇಚ್ಛಿಸದಿದ್ದ ಶಕ್ತಿಗಳು, ಇಂದು ನಮ್ಮೊಂದಿಗೆ ಆರ್ಥಿಕ ನೀತಿಗಳ ವಿರುದ್ಧ ಒಂದೇ ವೇದಿಕೆಗೆ ಬರುತ್ತಿದ್ದಾರೆ.

**ಪ್ರಶ್ನೆ: 17ನೇ ಮಹಾಧಿವೇಶನದಿಂದ ಮೂಡಿಬಂದಿರುವ ರಾಜಕೀಯ ನಿಲುಮೆಯನ್ನು ವಿವರಿಸುವಿರಾ?**

ಉತ್ತರ: ನಮ್ಮ ಅಂದಾಜಿನಂತೆ, ಕೋಮುವಾದಿ ಶಕ್ತಿಗಳನ್ನು ಅಧಿಕಾರದಿಂದ ದೂರವಿಡುವ ಉದ್ದೇಶ ಮೊದಲ ಪ್ರಾಮುಖ್ಯತೆ ಯಾಗಿರುವಾಗಲೇ, ಭಾರತಕ್ಕೆ ಇಂದು ಕಾಂಗ್ರೆಸೇತರ ಪರ್ಯಾಯದ ಅವಶ್ಯಕತೆ ಇದೆ. ಭಾರತದ ಜಾತ್ಯಾತೀತ ಪ್ರಜಾಪ್ರಭುತ್ವ ಬುನಾದಿಗಳನ್ನು ಅವರು ವ್ಯವಸ್ಥಿತವಾಗಿ ಅಲುಗಾಡಿಸುತ್ತಿದ್ದಾರೆ. ಅವರ ಜಾಗದಲ್ಲಿ ನಾವು ಕಾಂಗ್ರೆಸೇತರ ಪರ್ಯಾಯ ನಿರ್ಮಿಸಬಯಸುತ್ತೇವೆ. ಮಹಾಧಿವೇಶನದಿಂದ ಹೊರಹೊಮ್ಮಿರುವ ರಾಜಕೀಯ ಜವಾಬ್ದಾರಿ ಇದು.

**ಪ್ರಶ್ನೆ: ಮಹಾಧಿವೇಶನದಲ್ಲಿ ರಾಜಕೀಯ ಗೊತ್ತುವಳಿಗೆ ಸೂಚಿಸಲಾದ ತಿದ್ದುಪಡಿಗಳ ಸ್ವರೂಪ ಎಂತಹದ್ದು?**

ಉತ್ತರ: ಪಕ್ಷದ ರಾಜ್ಯ ಮಟ್ಟದ ಅನುಭವಗಳ ಆಧಾರದಲ್ಲಿ ಬಹಳಷ್ಟು ತಿದ್ದುಪಡಿಗಳು ವಿಶ್ಲೇಷಣೆಯನ್ನು ದೃಢೀಕರಿಸಿವೆ. ತಿದ್ದುಪಡಿಗಳ ಮತ್ತೊಂದು ಅಂಶವೆಂದರೆ ನಿರೂಪಣೆಯನ್ನು ವಿಶಧೀಕರಿಸಿವೆ ಹಾಗೂ ಜನತೆಯೆಡೆಗೆ ಸುಲಭ ವಾಗಿ ತೆಗೆದುಕೊಂಡು ಹೋಗಲು ಸಹಕಾರಿಯಾಗು ವಂತೆ ಹೆಚ್ಚು ಸ್ಪಷ್ಟತೆಯನ್ನು ನೀಡಿವೆ. ಉದಾಹರಣೆಗೆ ಕಾಂಗ್ರೆಸ್ ಕುರಿತಂತೆ ನಮ್ಮ ದೃಷ್ಟಿಕೋನವನ್ನು ಹೆಚ್ಚು ಸ್ಪಷ್ಟಪಡಿಸಿವೆ. ಕಾಂಗ್ರೆಸ್‌ನೊಂದಿಗೆ ಹೊಂದಾಣಿಕೆ ಅಥವಾ ಅದರೊಂದಿಗೆ ಸಂಯುಕ್ತ ರಂಗ ಇರುವುದಿಲ್ಲಾ. ಆದರೆ ಬಿಜೆಪಿಯನ್ನು ಅಧಿಕಾರದಿಂದ ದೂರವಿಡುವುದು ನಮ್ಮ ಆದ್ಯತೆಯಾಗಲಿದೆ.

ಕಳೆದ 3 ವರ್ಷಗಳಲ್ಲಿ ದುಡಿಯುವ ಜನರ ಸಂಘಟಿತ ವಲಯದಲ್ಲಿ ಬಹಳ ದೊಡ್ಡ ಹೋರಾಟಗಳನ್ನು ನಾವು ನಡೆಸಿದ್ದೇವೆ. ಕೆಲವು ತಿದ್ದುಪಡಿಗಳು ಈ ವಿಭಾಗಗಳನ್ನು ಸಂಯೋಜಿಸುವ ಹಾಗೂ ಅವುಗಳನ್ನು ಮಹತ್ತರ ಜನತೆಯ ಚಳುವಳಿಗಳೆಡೆ ತರುವ ವಿಷಯಗಳ ಕುರಿತು ಹೆಚ್ಚು ಸ್ಪಷ್ಟತೆಯನ್ನು ನೀಡಿವೆ. ಈ ಎಲ್ಲಾ ಹೋರಾಟಗಳು ಉತ್ತಮವಾಗಿದ್ದವು, ಹೋರಾಟಗಳು ಸಮರಶೀಲವಾಗಿಯೂ- ದೊಡ್ಡದಾಗಿಯು ಇದ್ದವು, ಆದರೆ ಅವುಗಳನ್ನು ರಾಜಕೀಯಗೊಳಿಸದಿದ್ದರೆ, ಇವುಗಳನ್ನು ನಿರ್ಧರಿಸಬೇಕಾದಂತಹ ಜನ ದುಡಿವ ವರ್ಗದ ವಿರೋಧಿಗಳಾಗೆ ಇರುತ್ತಾರೆ. ಇದಕ್ಕೆ ಅರ್ಥವಿಲ್ಲ. ಹೋರಾಟ ರಾಜಕೀಯ ಆಯ್ಕೆಯ ಪ್ರಶ್ನೆ ಎಂಬ ಹೆಚ್ಚು ತಿಳುವಳಿಕೆ ಹಾಗೂ ಅರಿವನ್ನು ಜನತೆಯಲ್ಲಿ ಮೂಡಿಸಬೇಕಿದೆ.

**ಪ್ರಶ್ನೆ: ಈ ಹಿಂದಿನ 90'ರ 'ಸಂಯುಕ್ತ ರಂಗಕ್ಕೂ' ನೀವೀಗ ಕಟ್ಟಬಯಸುತ್ತಿರುವ 'ಪೀಪಲ್ಸ್ ಫ್ರಂಟ್' ಕ್ಕೂ ವ್ಯತ್ಯಾಸವೇನು? 'ಪೀಪಲ್ಸ್ ಫ್ರಂಟ್'ಗೆ ಪಕ್ಷಗಳ ಸೇರ್ಪಡೆಗೆ ಸಂಬಂಧಿಸಿದಂತೆ ಸಿಪಿಐ(ಎಂ) ಎಷ್ಟು ದೃಢವಾಗಿರುತ್ತದೆ?**

ಉತ್ತರ: ಈ ಎರಡರ ನಡುವಿನ ವ್ಯತ್ಯಾಸ ವೆಂದರೆ 'ಸಂಯುಕ್ತ ರಂಗವು' ಚುನಾವಣೆಯ ನಂತರ ಬಿಜೆಪಿಯನ್ನು ಅಧಿಕಾರದಿಂದ ಹೊರಗಿಡಲು ಒಟ್ಟುಗೂಡಿದ ರಂಗ. ಪ್ರಮುಖ ವ್ಯತ್ಯಾಸವೆಂದರೆ ಚುನಾವಣೆ ಪೂರ್ವದಲ್ಲಿ ಜನತಾ ರಂಗಕ್ಕೆ ಸಮಾನ ಕನಿಷ್ಟ ಕಾರ್ಯಕ್ರಮವಿರುವುದು.

**ಪ್ರಶ್ನೆ: ನೀವು ವಿಧಿಸಿರುವ ನಿರ್ಬಂಧಗಳಿಂದಾಗಿ ಜನತಾ ರಂಗದಲ್ಲಿ ಪಕ್ಷಗಳ ಸಂಖ್ಯೆಗಳು ಕಡಿಮೆಯಾಗಿವೆಯೇ ಅಥವಾ ಸಂಯುಕ್ತ ರಂಗದ ಅನುಭವದ ನಂತರ ನೀವು ಹೆಚ್ಚು ಜಾಗರೂಕರಾಗಿದ್ದೀರಿಯೆ?**

ಉತ್ತರ: ಎರಡೂ ನಾವು ಜಾಗರೂಕರಾಗಿದ್ದೇವೆ ಏಕೆಂದರೆ ಬಹಳಷ್ಟು ಪ್ರಾದೇಶಿಕ ಪಕ್ಷಗಳು ತಮ್ಮ ರಾಜ್ಯಗಳ ಒತ್ತಡಗಳಲ್ಲಿಯೇ ಮುಳುಗಿವೆ, ಈ ಒತ್ತಡಗಳು ಇತರೆ ಎಲ್ಲಾ ವಿಷಯಗಳನ್ನು ಹಿಂದೆ ಹಾಕಿವೆ, ರಾಷ್ಟ್ರೀಯ ಐಕ್ಯತೆ-ಸಮಗ್ರತೆ ಮತ್ತು ಇತರೆ ದೊಡ್ಡ ವಿಷಯಗಳನ್ನು ಹಿಂದೆ ಸರಿಸಿವೆ. ಇದು ನಮಗೆ ಒಪ್ಪಿತವಲ್ಲ. ಒಂದು ಅಂಶವೆಂದರೆ ಈ ಪಕ್ಷಗಳು ಆಯ್ಕೆ ಮಾಡಿಕೊಳ್ಳಬೇಕಾದ ಸಮಾನ ಕನಿಷ್ಟ ಅಂಶವೊಂದಿರಬೇಕಾಗುತ್ತದೆ. ಮತ್ತೊಂದೆಂದರೆ ಬಹಳಷ್ಟು ಈ ಪಕ್ಷಗಳು ಪ್ರಮುಖವಾಗಿ ಆರ್ಥಿಕ ವಲಯದಲ್ಲಿನ ಬೆಳವಣಿಗೆಗಳಿಗೆ ಭಾಗಿದಾರರಾಗಿರುವುದು ದೇಶಕ್ಕೆ ಹಾಗೂ ಜನತೆಗೆ ಅಪಾಯಕಾರಿಯಾಗಿರುವ ನೀತಿಗಳನ್ನು ಹೆಚ್ಚು ಉತ್ಸಾಹದಿಂದ ಅವರು ಜಾರಿಗೊಳಿಸುತ್ತಿರುವುದು. ಹಾಗಾಗಿ ವಿವಿಧ ಪಕ್ಷಗಳ ಒಂದುಗೂಡಿಕೆಯಿಂದ ಈ ರಂಗ ನಿರ್ಮಾಣವನ್ನು ನಾವು ಎದುರುನೋಡುತ್ತಿಲ್ಲಾ.

**ಪ್ರಶ್ನೆ: ಹಾಗೆಂದಲ್ಲಿ ಹಿಂದಿನ ಸಂಯುಕ್ತ ರಂಗಕ್ಕಿಂತ ಈಗಿನ ಜನತಾರಂಗಕ್ಕೆ ಸೇರುವ ಪಕ್ಷಗಳು, ಆರ್ಥಿಕ ಉದಾರೀಕರಣ ಕುರಿತಂತೆ ಅವುಗಳ ದೃಷ್ಟಿಕೋನ ಪ್ರಮುಖ ಅಂಶವಾಗಲಿದೆಯೇ?**

ಉತ್ತರ: ಹೌದು, ಕೂಡಾ ಕೋಮುವಾದಿ ವಿರೋಧಿ ನಿಲುಮೆ ಆಧ್ಯತೆಯಾಗಲಿದೆ. ನೆನಪಿಸಬೇಕಾದ ಪ್ರಮುಖ ಅಂಶವೆಂದರೆ, ದೋಹಾ ಸಭೆಯ ಮುನ್ನ ವಿಶ್ವವ್ಯಾಪಾರ ಸಂಘಟನೆಯ(WTO) ವಿರುದ್ಧದ ಪ್ರತಿಭಟನೆಯಲ್ಲಿ, 2001'ರ ನವೆಂಬರ್‌ನಲ್ಲಿ ಸಮಾಜವಾದಿ ಪಕ್ಷ,ಎಡಪಕ್ಷಗಳು, ಮಾಜಿ ಪ್ರಧಾನಿಗಳಾದ ವಿ.ಪಿ.ಸಿಂಗ್, ಹೆಚ್.ಡಿ. ದೇವೇಗೌಡ, ಸ್ವಯಂ ಸೇವಾ ಸಂಘಟನೆಗಳು, ಮೇಧಾ ಪಾಟ್ಕರ್ ಎಲ್ಲರೂ ಒಂದೇ ವೇದಿಕೆಯಡಿ ಬಂದಿದ್ದರು. ಎರಡೂ-ಮೂರು ವರ್ಷಗಳ ಹಿಂದೆ ಇಂತಹದನ್ನು ಕಲ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ. ದೊಡ್ಡ ರೀತಿಯ ರಾಜಕೀಯ ಒತ್ತಡವಿದೆ, ಹಾಗೂ ನಾನು ಮಾತನಾಡುತ್ತಿರುವ ರಾಜಕೀಯ ಮಥನದ ಭಾಗವಿದು, ಈ ಒತ್ತಡವನ್ನು ಜನ ಸಮೂಹ ಅವರವರ ರಾಜಕೀಯ ನಾಯಕರು ಮತ್ತು ಪಕ್ಷಗಳ ಮೇಲೆ ತರುತ್ತಿದೆ. ಈ ವಿಷಯಗಳನ್ನು ಎತ್ತಿಕೊಳ್ಳುವಂತೆ ಜನ ಒತ್ತಾಯಿಸುತ್ತಿದ್ದಾರೆ.

**ಪ್ರಶ್ನೆ: ಆಂಧ್ರ ಪ್ರದೇಶ ಸಿಪಿಐ(ಎಂ) ಘಟಕ 9 ಎಡಪಕ್ಷಗಳ ರಂಗವನ್ನು ರಚಿಸಿದೆ. ಈ ರಂಗ ಕಳೆದ 3 ವರ್ಷದಿಂದ ಇದೆ, ಹಾಗೂ ಅಲ್ಲಿನ ಪ್ರಮುಖ ಪಕ್ಷಗಳಾದ ಕಾಂಗ್ರೆಸ್ ಮತ್ತು ತೆಲುಗು ದೇಶಂ ಎರಡರಿಂದಲೂ ಅದು ದೂರ ಉಳಿದಿದೆ. ಆರ್ಥಿಕ ಸುಧಾರಣೆಗಳ ಹಲವಾರು ಪ್ರಮುಖ ಕ್ರಮಗಳ ವಿರುದ್ಧ ಹೋರಾಟ ನಡೆಸಿದೆ. ಇದರಿಂದ ಜನರನ್ನು ಅಣಿನೇರಿಸುವ ರಾಜಕೀಯಕ್ಕೆ ನಿಮ್ಮ ಪಕ್ಷ ಕಲಿಯಬೇಕಾದ ಪಾಠಗಳೇನಾದರೂ ಇವೆಯೆ?**

ಉತ್ತರ: ಇದೊಂದು ಉತ್ತಮ ಸಕಾರಾತ್ಮಕ ಪಾಠ. ಈ ಕುರಿತು 17ನೇ ಮಹಾಧಿವೇಶನದ

ಪುಟ 11 ಕ್ಕೆ

# ನಮ್ಮ ಸಂಸ್ಕೃತಿ ಬೆಳೆಸಿದ ಮುಸ್ಲಿಮರು

**ಖ್ಯಾತ ಹಿಂದೂಸ್ತಾನಿ ಗಾಯಕ ಪಂಚಾಕ್ಷರಿ ಮತ್ತಿಗಟ್ಟಿಯವರಿಗೆ ಪುಟ್ಟರಾಜ ಗವಾಯಿ ಪ್ರಶಸ್ತಿ ಪ್ರದಾನ ಮಾಡಿದ ಸಂದರ್ಭದಲ್ಲಿ ಗದುಗಿನ ಶ್ರೀ ಸಿದ್ಧಲಿಂಗ ಸ್ವಾಮಿಗಳು ಮಾಡಿದ ಭಾಷಣದ ಸಂಕ್ಷಿಪ್ತ ನಿರೂಪಣೆ ಇಲ್ಲಿದೆ.**

ಶಾಂತಿದೂತನ ಗುಜರಾತಿನಲ್ಲಿ ನಡೆದ ಘಟನೆಗಳು, ಗೋಧ್ರಾ ರೈಲು ಘಟನೆಯಲ್ಲಿ 50 ಜನರನ್ನು ಸುಟ್ಟು ಹಾಕಿದ್ದು, ನಂತರ ಬೇರೆ ಬೇರೆ ಕಡೆ ಬೇಟೆ ನಾಯಿಗಳಂತೆ ಅಡಗಿರುವ ಪ್ರಾಣಿಗಳನ್ನು ಎಳೆಯುವ ಹಾಗೆ ಜನರನ್ನು ಹುಡುಕಿ ಕೊಂದದ್ದನ್ನು ನೋಡಿದರೆ, ಈ ಕಣ್ಣುಗಳಲ್ಲಿ ನೀರಲ್ಲ ರಕ್ತ ಬರುತ್ತದೆ. ಭಾರತದ ನಮ್ಮ ಸಂಸ್ಕೃತಿ ಇಷ್ಟು ವೈವಿಧ್ಯಮಯ, ಅನಂತ ಬಹುಮುಖಿ. ದೇವರು ಇದ್ದಾನೆ ಅವನು ಅಲ್ಲಾಹನೆ ಅಂತ ಹೇಳುವ ಜನರನ್ನು ನಾವು ನಂಬಬಾರದೆ? ನಾವು ದೇವರ ಮಗ, ಭಗವಂತನ ಮಗ ಅನ್ನುವ ಏಸುವಿನ ಧರ್ಮವನ್ನು ನಾವು ನಂಬಬಾರದೆ ? ಇಪ್ಪತ್ತನಾಲ್ಕು ತೀರ್ಥಂಕರರು ದೇವರೇ ಎನ್ನುವ ಜೈನಧರ್ಮವನ್ನು ನಾವು ನಂಬಬಾರದೆ? ಎಲ್ಲ ಧರ್ಮಗಳೂ ಈ ನೆಲದಲ್ಲಿ ಆರುವುದು ನಮಗೆ ಬಹಳ ಸಹಜವಾಗಿದೆ. ಯಾಕೆಂದರೆ ನಮ್ಮ ಸಂಸ್ಕೃತಿ ಎಲಾಸ್ಟಿಕ್ ನಂತಿದೆ. ಜಗ್ಗಿದರೆ ಹಿಗ್ಗುತ್ತದೆ. ಬಿಟ್ಟರೆ ಕುಗ್ಗುತ್ತದೆ. ಇದು ಭಾರತೀಯ ಸಂಸ್ಕೃತಿಯ ಘನತೆ. ನಮ್ಮ ಜೊತೆಗೆ ಸ್ವಾತಂತ್ರ್ಯ ಪಡೆದ ಪಾಕಿಸ್ತಾನ ಒಂದೇ ಜಾತಿ ಒಂದೇ ಮತ ಅಂತ ಹೇಳಿತು. ಆದರೆ 50 ವರ್ಷಕ್ಕೆ ಮುಂಚೆಯೇ ಬಾಂಗ್ಲಾ ದೇಶವನ್ನು ಕಳೆದುಕೊಂಡಿತು. ಒಂದೇ ಧರ್ಮ ಒಂದೇ ನಿಜ ಆಗಿದ್ದರೆ ಹತ್ತು ವರ್ಷಗಳ ಕಾಲ ಇರಾನ್ ಮತ್ತು ಇರಾಕ್ ಯಾಕೆ ಬಡಿದಾಡಿದವು?

ಆದ್ದರಿಂದಲೇ ಭಾರತೀಯ ಸಂಸ್ಕೃತಿ ಶ್ರೇಷ್ಠ ಸಂಸ್ಕೃತಿ. ಇಲ್ಲಿ ಎಲ್ಲರನ್ನು ಗೌರವಿಸುತ್ತೇವೆ. ಎಲ್ಲವನ್ನು ಪ್ರೀತಿಸುತ್ತೇವೆ. ಇಸ್ಲಾಂ ಅಂದರೆ ಪವಿತ್ರ ಮುಸ್ಲಿಂ ಅಂದರೆ ವಿಧೇಯ, ಈ ಭಾರತೀಯ ಸಂಸ್ಕೃತಿ ಬೆಳೆಸಿದ ಮುಸ್ಲಿಂ ಸಂತರು ಒಬ್ಬರೇ ಇಬ್ಬರೇ. ದಿಲ್ಲಿಯಲ್ಲಿ ನಿಜಾಮುದ್ದೀನ್ ಹೆಸರಿನಲ್ಲಿ ಪ್ರತಿವರ್ಷ ಉರುಸ್ ನಡೆಯುತ್ತದೆ. ಅಜ್‌ಮೀರ್‌ನಲ್ಲಿ ಗರೀಬ್ ನವಾಜ್, ಫತೇಪುರ್ ಸಿಕ್ರಿಯಲ್ಲಿ ಸಲೀಂ ಚಿಸ್ತಿ, ಅಕ್ಬರ್ ಚಕ್ರವರ್ತಿ ನಡೆದುಕೊಂಡ ದರ್ಗಾ ಇದು. ಅಕ್ಬರನ ಪತ್ನಿ ಜೋದಾಬಾಯಿ ರಾಜಸ್ತಾನಿ ಹೆಣ್ಣುಮಗಳು. ಮದುವೆಯಾದ ಮೇಲೆ ಆಕೆ ತನ್ನ ಧರ್ಮ ಬದಲಾಯಿಸಿಕೊಳ್ಳಲಿಲ್ಲ. ಕೃಷ್ಣನ ಪೂಜೆ ಬಿಡಲಿಲ್ಲ. ಜೋದಾಬಾಯಿಯ ಅಣ್ಣ ಮಾನಸಿಂಗ್ ಅಕ್ಬರನ ಸೇನೆಯ ದಂಡನಾಯಕ. ಇವರೆಲ್ಲಾ ಎಂಥ ಸಂಸ್ಕೃತಿಯನ್ನು ಕಟ್ಟಿದರು.



ಇಡೀ ಇಂಡಿಯಾದಲ್ಲಿ ಸೂಫಿ ಸಂತರು 10-20 ಸಾವಿರ ಮಂದಿ ಇದ್ದರು. ಅವರು ಬಹಳ ಗಟ್ಟಿ ಜನ. ಅವರಿಗೆ ಇನ್‌ಸಾನಿಯಾತ್, ಮನುಷ್ಯತ್ವ-ಹ್ಯೂಮಾನಿಟಿ ಇತ್ತು. ಬಿಜಾಪುರದ ಖಾಜಾ ಅಮೀನುದ್ದೀನ್‌ನ ದುರ್ಗಾಕ್ಕೆ ಎಲ್ಲಾ ಹಿಂದೂಗಳು ನಡೆದುಕೊಂಡ ಹಾಗೆ ಲಿಂಗಾಯತರೂ ನಡೆದುಕೊಂಡರು. ಮಕ್ಕಳಾಗದವರು ಮಕ್ಕಳಾದರೆ ದರ್ಗಾಕ್ಕೆ ಕೊಡತೀವಿ ಎಂದರು. ನಡೆದುಕೊಂಡವರು ಅಯ್ಯನೋರ ಮಂದಿ ಹುಟ್ಟಿದ ಹುಡುಗನನ್ನು ದರ್ಗಾಕ್ಕೆ ಅರ್ಪಿಸೋದು ತಡ ಆಯ್ತು. ಹುಡುಗನಿಗೆ ತೊಂದರೆ ಕಾಣಿಸಿತು. ದಂಪತಿಗಳು ಖಾಜಾ ಅಮೀನುದ್ದೀನ್‌ಗೆ ಶರಣಾದರು. ಅಮೀನುದ್ದೀನ್ ಹೇಳಿದರು. 'ಹುಡುಗನನ್ನು ಅಲ್ಲೇ ಬಿಡಿರಿ' ಅಂತ. ಹುಡುಗನನ್ನು



ತೋಂಟದಾರ್ಯ ಶ್ರೀ

ಅಲ್ಲೇ ಬಿಟ್ಟರು. ಖಾಜಾ ಈ ಹುಡುಗನ ಮೈಮೇಲೆ ಇದ್ದ ಲಿಂಗ ತೆಗೆಸಲಿಲ್ಲ. ಹುಡುಗನಿಗೆ ಕುರಾನ್ ನಮಾಜ್ ಕಲಿಸಿದರು. ಎಲ್ಲಾ ವಿಧಿಗಳನ್ನು ಕಲಿಸಿದರು ಶರಿಯತ್‌ಗಳನ್ನು ಕಲಿಸಿದರು. ಆ ಹುಡುಗ ಫಕೀರಪ್ಪ ಸ್ವಾಮಿಯಾದ. ಉತ್ತರ ಕರ್ನಾಟಕದಲ್ಲಿ ಫಕೀರಸ್ವಾಮಿ ಸಂಸ್ಥಾಪನೆಯಾಯ್ತು. ಉತ್ತರ ಕರ್ನಾಟಕದಲ್ಲಿ ಮಸೀದಿ ಇಲ್ಲದ ಊರುಗಳಲ್ಲಿ ಹಿಂದೂಗಳೇ ಮೊಹರಂ ಮಾಡುತ್ತಾರೆ. ರಂಜಾನ್ ಹಬ್ಬ ಮಾಡಿ ಸಿರಿಗಂಬ ಕೀರ್ ಮಾಡಿ ಬಂದವರಿಗೆಲ್ಲಾ ಹಂಚುತ್ತಾರೆ. ಮುಸ್ಲಿಂ ಅಂದರೆ ಚಾಳೀಸ್ ಹಾಕ್ಕಂಡು ನೋಡಬೇಡಿ. ಘಜ್ನಿ ಮಹಮದ್ ತೊಘಲಕ್ ಕನ್ನಡಕ ಹಾಕ್ಕೊಂಡು ನೋಡಬೇಡಿ. ಗಾಂಧೀಜಿಯನ್ನು ಕೊಂದ ಗೋಪಾಲ ಗೋಡ್ಸೆ ಹಿಂದೂ ಅಲ್ಲವೆ? ಕಲ್ಯಾಣ ಹಾಳು ಮಾಡಿದ ಕೊಂಡಿ ಮಂಚಣ್ಣ ಹಿಂದೂ ಅಲ್ಲವೆ? ಕಿತ್ತೂರು ಹಾಳು ಮಾಡಿದ ಮಲ್ಲಪ್ಪಶೆಟ್ಟಿ ಹಿಂದೂ ಅಲ್ಲವೆ? ಬರೀ ಇದೊಂದನ್ನೇ ಯಾಕೆ ಹೇಳ್ತಿರಿ ಕಂಬಾಲಪಲ್ಲಿಯ 9 ಜನ ಹರಿಜನರನ್ನು ಸುಟ್ಟು ಹಾಕಿದ್ದು ಹಿಂದೂಗಳಲ್ಲವೆ? ನಾರಾಯಣಪುರ, ಬೆಲ್ಚಿ ಇವತ್ತೂ ನಮ್ಮ ಕೆಲಸಗಳಿಗೆ ಸಾಕ್ಷಿಯಾಗಿ ನಿಂತುಕೊಂಡಿದೆ. ನಮ್ಮ ಚಾತುರ್ವರ್ಣ ವ್ಯವಸ್ಥೆ ಒಂದು ಕಳಂಕ. ಇದರ ಬಗ್ಗೆ ಯೋಚನೆ ಮಾಡದೇ ವರ್ತಿಸೋದು ಸರೀನೆ? ಇವತ್ತು ಮತದ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ ಏನು ನಡೆದಿದೆ, ಅದು ಮುಸಲ್ಮಾನ ಮಾಡಿದರೂ ತಪ್ಪೆ, ಹಿಂದೂ ಮಾಡಿದರೂ ತಪ್ಪೆ, ಎಲ್‌ಟಿಟಿಇ ಮಾಡಿದರೂ ತಪ್ಪೆ, ಖಲಿಸ್ತಾನ ಮಾಡಿದರೂ ತಪ್ಪೆ, [illegible]



ಹಿನ್ನೆಲೆಯಲ್ಲಿ ಇವತ್ತು ನಾವು ಮನುಷ್ಯರನ್ನು ಕೊಲ್ಲುತ್ತಿರುವ ಸೈತಾನರನ್ನು ತಡೆಯಬೇಕಾಗಿದೆ. ಮಸೀದಿಯನ್ನು ಒಡೆದು ನಾವು ಜಗತ್ತಿನ ಎದುರು ಬಹಳ ಸಣ್ಣವರಾದೆವು. ತಲೆ ತಗ್ಗಿಸಿಕೊಂಡೆವು. ಇವತ್ತು ಮನುಷ್ಯರನ್ನು ಸುಡುತ್ತೇವೆ ಅಂದರೆ ಜಗತ್ತಿನೆದುರು ಎಷ್ಟು ಕುಬ್ಜರಾಗುತ್ತೀವಿ. ನಮ್ಮ ಜಾತ್ಯಾತೀತತೆ ಎಂಬುದು ಎಷ್ಟು ತಮಾಷೆಯಾಗುತ್ತದೆ. ಎಷ್ಟು ಹುಡುಗಾಟ ಆಗುತ್ತದೆ. 'ಅಯ್ಯೋ ಮುಸ್ಲಿಮರು ಮಾಡಿದ್ದು ಸರಿಯೇ?' ಅಂತ ಕೆಲವು ಜನ ಕೇಳುತ್ತಾರೆ. ಆದರೆ ಇವರು ಮಾಡಿದ್ದಾರೆ ಅಂತ ಅವರು ಮಾಡುತ್ತಾ ಹೋದರೆ ಇದಕ್ಕೆ ಕೊನೆ ಎಲ್ಲಿ?

15 ಕೋಟಿ ಮಹಮದೀಯರು ಈ ದೇಶದಲ್ಲಿದ್ದಾರೆ. ಈ ದೇಶದ ಧರ್ಮ, ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಬೆಳೆಸಿದ್ದಾರೆ. ಹಾಡುಗಾರ ಮಹಮದ್ ರಫೀ, ನೌಷಾದ್ ಅವರನ್ನು ಆಲಿಸುವಾಗ ನಮಗೆ ಅವರು ಮುಸ್ಲೀಮರು ಲಿಂಗಾಯತರ ನೆನಪಾಗುತ್ತದೆಯೇ? ಇಲ್ಲ ಏನೂ ನೆನಪಾಗುವುದಿಲ್ಲ. ಆಗೋದು ಆನಂದ ಮಾತ್ರ. ಆನಂದಕ್ಕೆ ಜಾತಿ ಇಲ್ಲ. ನೋವಿಗೆ ಇಲ್ಲ ಜಾತಿ. ಹೆರಿಗೆ ಆಗುವಾಗ ಮುಸ್ಲಿಂ ಹೆಣ್ಣುಮಗಳು ಅಲ್ಲಾಗೆ ಅಮ್ಮಗೆ ಅಂತಿರ್ತಾಳೆ. ಹಿಂದೂ ಹೆಣ್ಣುಮಗಳು ಅಯ್ಯೋ ಅಮ್ಮ ಅಂತಿರ್ತಾಳೆ, ಕ್ರಿಶ್ಚಿಯನ್ ಹೆಣ್ಣುಮಗಳು ಓ ಗಾಡ್ ಅಂತಿರ್ತಾಳೆ, ಈ ಎಲ್ಲಾ ಹೆಣ್ಣುಮಕ್ಕಳ ನೋವು ಒಂದೇ. ಮಗುವನ್ನು ಹಡೆದ ಮೇಲೂ ಆ ಕೂಸನ್ನು ಕೈಗೆ ಎತ್ತಿಕೊಂಡು ಪಡೆಯುವ ಆನಂದ ಒಂದೇ, ಅಂದರೆ ಎಲ್ಲ ಮನುಷ್ಯರಿಗೂ ಆನಂದ ಒಂದೇ, ನೋವು ಒಂದೆ, ಈ ಎಲ್ಲರ ರಕ್ತ ಒಂದೇ, ಮಿಡಿವ ಹೃದಯ ಒಂದೇ, ಕುಡಿವ ನೀರು ಒಂದೆ, ವಾಸಿಸುವ ನೆಲ ಒಂದೇ, ನೆಲವೊಂದೇ ಹೊಲಗೇರಿ ಶಿವಾಲಯಕ್ಕೆ ಕುಲವೊಂದೇ ತನ್ನ ತಾನರಿದವನಿಗೆ.

ವಿವೇಕಾನಂದರು ಹೇಳಿದ್ದರು, ನಮ್ಮ ನೂರು ಕೋಟಿ ಜನರೇ ದೇವರು, ದರಿದ್ರ ದೇವೋಭವ ಜನಗಳೇ ದೇವರಾಗಬೇಕು ಎಂದು. ಆದರೆ ನಾವು

**'ವಿಶ್ವಹಿಂದು' ಪರಿಷತ್, ಆರ್‌ಎಸ್‌ಎಸ್‌ಗಳು ಕರ್ನಾಟಕದಲ್ಲಿ ಹಲವಾರು ಸ್ವಾಮಿಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಳ್ಳುತ್ತಿವೆ. ಅವರು ಒಡ್ಡುವ ಸ್ಥಾನ-ಮಾನ ಇತ್ಯಾದಿಗಳಿಗೆ ಕೆಲವರು ಬಲಿಬಿದ್ದಿದ್ದಾರೆ. ವರ್ಣಾಶ್ರಮ ಧರ್ಮದಿಂದ ಬಾಧಿತವಾದ ಶೂದ್ರರ ಸ್ವಾಮಿ ಆದಿಚುಂಚನಗಿರಿಯಂತಹವರೂ ಹೊಸ ಸೇರ್ಪಡೆ. ಹಾಗೆ ಭಾರತದ ವೈಧಿಕ ಶಾಹಿ ವಿರುದ್ಧ ಸಿಡಿದೆದ್ದು, ಜಡ್ಡುಗಟ್ಟಿದ ಸಾಂಪ್ರದಾಯಕತ್ವದ ಎದುರು ಸಮರಕ್ಕಿಳಿದ ಕರ್ನಾಟಕದ ವೀರಶೈವ ಚಳುವಳಿಯ ಮಠಾಧೀಶರೂ ಚಡ್ಡಿ ಪರಿವಾರದ ವಲಯದೊಳಗೆ ಲೀನವಾಗುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿ ಅದೇ ವೀರಶೈವ ಚಳುವಳಿಯ ಮುಂಚೂಣಿಯಲ್ಲಿರುವ, ಹೆಚ್ಚು ಜನ ವ್ಯಾಪಕತೆ ಹೊಂದಿರುವ ಮಠಗಳಾದ ತುಮಕೂರಿನ ಸಿದ್ಧಗಂಗಾ ಮಠಾಧೀಶರು ಮತ್ತು ಗದುಗಿನ ತೋಂಟದಾರ್ಯ ಸ್ವಾಮಿಗಳು ತಮ್ಮದೇ ಆದ ಮಾತುಗಳಲ್ಲಿ ಕೋಮುವಾದದ ಅಟ್ಟಹಾಸ ಅಪಾಯಗಳನ್ನು, ಗುಜರಾತ್‌ನ ನರಮೇಧವನ್ನು ಖಂಡಿಸಿದ್ದಾರೆ. ಹಾಗೆಯೇ ರಾಜ್ಯದಲ್ಲಿ ಇಂತಹ ಹಲವಾರು ಮಠಾಧೀಶರೂ, ಸಂಘ ಪರಿವಾರದ ಬಲೆಗೆ ಬಿದ್ದಿಲ್ಲ. ಮಾತ್ರವಲ್ಲ ಅವುಗಳ ವಿರುದ್ಧ ಧ್ವನಿ ಎತ್ತಿದ್ದಾರೆ. ಇಬ್ಬರು ಸ್ವಾಮಿಗಳ ಪ್ರಖರ ಅಭಿಪ್ರಾಯಗಳನ್ನು ಆಯ್ದು ಇಲ್ಲಿ ಕೊಡಲಾಗಿದೆ.**

ಅನಿಸುತ್ತದೆಯೆ? 'ಮಹಾ ಭಾರತ'ದ ಟಿವಿ ಸೀರಿಯಲ್ ಬರೆದವರು ಯಾರು? ಒಬ್ಬ ಮುಸಲ್ಮಾನ. ಮುಸಲ್ಮಾನರು ಇಲ್ಲಿ ಬೆರೆತುಹೋಗಿದ್ದಾರೆ. ಬಿಸ್ಮಿಲ್ಲಾಖಾನ್ ಶಹನಾಯಿ ಕೇಳಿದ್ರೆ ನಮಗೆ ಮುಸಲ್ಮಾನ ನೆನಪಾಗ್ತಾನೆಯೆ? ಜಾಕಿರ್ ಹುಸೇನ್ ತಬಲಾ ಬಾರಿಸುವಾಗ ಮುಸಲ್ಮಾನ್ ನೆನಪಾಗ್ತಾನೆಯೇ? ಜೇಸುದಾಸರ ಪುರಂದರದಾಸರ ಪದ ಕೇಳಿದರೆ, ಗವಾಯಿಗಳ ಸಂಗೀತ ಕೇಳಿದರೆ, ಸುಬ್ಬಲಕ್ಷ್ಮಿಯವರ ವೆಂಕಟೇಶ ಸುಪ್ರಭಾತ ಕೇಳಿದರೆ ಅವರ ಜಾತಿ, ಧರ್ಮ ನೆನಪಾಗುತ್ತದೆಯೇ? ಮನ್ಸೂರ್ ಅವರ ಪಂಚಾಕರಿ, ಮತಿಕಟ್ಟೆಯವರ ವಚನ ಕೇಳಿದರೆ ಬರೇ ಒಂದು ಇಟ್ಟಿಗೆಗಾಗಿ, ಒಂದು ಕಲ್ಲಿಗಾಗಿ, ಒಂದು ಕಂಬಕ್ಕಾಗಿ, ಒಂದು ಗುಡಿಗಾಗಿ ಪ್ರಾಣ ತೆಗಿತೇವೆ. ಕಾನೂನನ್ನ ಕೈಗೆ ತೆಗೆದುಕೊಳ್ಳುತ್ತೇವೆ. ಇಂಥವರಿಗೆ ನಮ್ಮ ಧಿಕ್ಕಾರ, ಇಂಥ ನಮ್ಮ ಧರ್ಮಕ್ಕೆ ಧಿಕ್ಕಾರ, ನಮ್ಮ ಸಂಸ್ಕೃತಿಗೆ ಧಿಕ್ಕಾರ.

ಧರ್ಮ ಅಂದರೆ ಏನು? ಧರ್ಮೋ ರಕ್ಷತಿ ರಕ್ಷಿತಃ ಯಾರು ಧರ್ಮವನ್ನು ರಕ್ಷಿಸುತ್ತಾರೋ ಅವರನ್ನು ಧರ್ಮ ರಕ್ಷಿಸುತ್ತದೆ. ಹಾಗೆಯೇ ಯಾರು ಕಾನೂನನ್ನು ರಕ್ಷಿಸುತ್ತಾರೋ ಅವರನ್ನು ಕಾನೂನು ರಕ್ಷಿಸುತ್ತದೆ. ಕಾನೂನಿಗೆ ಕಿಮ್ಮತ್ತು ಕೊಡೋದಿಲ್ಲ ಅಂದರೆ ಏನು? ಇಂತಹ ಮಾತುಗಳಿಗೆ

ಪುಟ 11ಕ್ಕೆ

# ಧರ್ಮದ ಹೆಸರಿನಲ್ಲಿ ಚಂಡಾಟ

*ಇತ್ತೀಚಿನ ವಿದ್ಯಮಾನಗಳನ್ನು ಗಮನಿಸಿದ್ದೀರಿ. ದೇವರು, ಧರ್ಮದ ಹೆಸರಿನಲ್ಲಿ ಮನುಷ್ಯರು ಒಬ್ಬರನೊಬ್ಬರು ಚಂಡಾಡುತ್ತಿರುವುದರ ಬಗ್ಗೆ ನಿಮ್ಮ ಪ್ರತಿಕ್ರಿಯೆ ಏನು?*

● (ಕ್ಷಣ ಮೌನ, ಒಂದು ತೀಕ್ಷ್ಣ ನೋಟದೊಂದಿಗೆ) ಧರ್ಮದ ನಿಜವಾದ ಅರ್ಥ ಅವರಿಗೆ ಗೊತ್ತಿಲ್ಲ. ಧರ್ಮದ ತಾಯಿಬೇರು ಪ್ರೀತಿ, ದಯೆ, ಅಂತಃಕರಣ, ಇವನ್ನು ಮರೆತು ಅವರು ಧರ್ಮವನ್ನು dogma (ಸ್ಥಗಿತ ಸಿದ್ಧಾಂತ) ಮಾಡಿದ್ದಾರೆ. ಆದ್ದರಿಂದಲೇ ಇಂಥ ಅನಾಹುತಗಳು ಜರುಗುತ್ತಿವೆ. ಇದು ಇತಿಹಾಸದ ಉದ್ದಕ್ಕೂ ನಡೆದು ಬಂದಿದೆ. ವಿಜ್ಞಾನ ಕಾಂಡದ ಬಳಿಕ ಸರಿಯಾಗಿ ಆಗುತ್ತಿಲ್ಲ. ನೈತಿಕ ಮೌಲ್ಯಗಳಿಗೆ ಸರಿಯಾದ ಸ್ಥಾನವಿಲ್ಲ. ಸ್ವಾರ್ಥ, ದಾಹ, ಅಹಂಕಾರ, ದುರಾಸೆಗಳು ಹೆಚ್ಚಾಗಿವೆ. ಇವುಗಳ ಅಮಲಿಗೆ ಬಿದ್ದ ಜನಕ್ಕೆ ಧರ್ಮ ಏನೆಂದು ಅರ್ಥವಾಗದು.


*ಗೋಧ್ರಾದಂತ ಘಟನೆಗಳು, ದೇಶದ ತುಂಬೆಲ್ಲಾ ನರಮೇಧಗಳ ನಡುವೆ ರಾಮಮಂದಿರ ಬೇಕೆ?*

● ಅದಕ್ಕಿಂತ ಮುಖ್ಯವಾದ ಸಮಸ್ಯೆಗಳು ನಮ್ಮಲ್ಲಿವೆ. ಎಲ್ಲರಿಗೂ ಅನ್ನ, ಬಟ್ಟೆ, ಸೂರು, ಶಿಕ್ಷಣ ಕೊಡಬೇಕಾದ್ದು ಎಲ್ಲರ ಕರ್ತವ್ಯ. ಆಳುವವರು ಈಕಡೆಗೆ ಹೆಚ್ಚಿನ ಗಮನ ಕೊಡುತ್ತಿಲ್ಲ. ಅನವಶ್ಯಕವಾದ ವಿಷಯಗಳಿಗೆ ತೊಡಗಿಸಿಕೊಂಡು ಶಕ್ತಿ ಹಾಳಾಗಿದೆ. ವರ್ಷಕ್ಕೆ ಸಾವಿರಾರು ಮಂದಿರಗಳು ಆಗಿವೆ. ಮನುಷ್ಯರು ಮಾತ್ರ ಅಧೋಗತಿಗೆ ಇಳಿಯುತ್ತಿದ್ದಾರೆ. **ಮಂದಿರಗಳಿಗಿಂತ ಅನ್ನ, ಬಟ್ಟೆ, ವಿದ್ಯೆ ಮುಖ್ಯ, ಅದನ್ನು ನಾವು ಕೊಡಬೇಕು.**

ಹಾಗೂ ಕಟ್ಟುವುದಾದರೆ ನ್ಯಾಯಾಲಯದ ಮಾರ್ಗದರ್ಶನ ಅನುಸರಿಸಲಿ. ಆರ್‌ಎಸ್‌ಎಸ್ ಶಿಸ್ತಿನ ಸಂಘಟನೆ, ಆ ಶಿಸ್ತು ವಿನಾಶದ ದಾರಿ ಹಿಡಿಯಬಾರದು.

*ಕೋಮುವಾದದ ಬಗ್ಗೆ, ಗೋಧ್ರಾ ಘಟನೆಯ ಬಗ್ಗೆ ನಿಮ್ಮ ಅನಿಸಿಕೆ ಏನು?*

● ಅದು ಧರ್ಮಾಂಧತೆ. ಸಮಾಜ ಅಂದರೆ ಏನೂಂತ ತಿಳಿಯದವರು ಮಾಡುತ್ತಿರುವ ಕೆಲಸ. ಇಂಥವುಗಳಿಂದಾಗಿ ಜನರ ಗಮನವನ್ನು ನಿಜವಾದ ಸಮಸ್ಯೆಗಳಿಂದ ಬೇರೆ ಕಡೆಗೆ ಸೆಳೆಯುತ್ತಿದ್ದಾರೆ. ವಿಜ್ಞಾನ ಕಾಂಡದ ಅಂಥ ವರ್ತನೆ ಹೆಚ್ಚಾಗಿದೆ. ಇಂದು ಅಣುಬಾಂಬ್‌ಗಳಿಗಾಗಿ ಬಿಲಿಯಗಟ್ಟಲೆ ಹಣ ಸುರಿಯುತ್ತಿದ್ದಾರೆ. ಜನರ ಉನ್ನತಿಯನ್ನು ಕಡೆಗಣಿಸಿದ್ದಾರೆ. ನಮ್ಮಲ್ಲೆ ಓದಿ, ಈಗ ಸೈನ್ಯದಲ್ಲಿರುವ ನಮ್ಮ ಯೋಧರು ಪತ್ರ ಬರೆದಿದ್ದಾರೆ, 'ನಾವು ಇಲ್ಲಿ ಮೂರು ತಿಂಗಳು ನಿರಂತರವಾಗಿ ಶೂಗಳನ್ನು ಬಿಚ್ಚದೆ ಬದುಕುತ್ತಿದ್ದೇವೆ' ಎಂದು. ಆಡಳಿತ ಮಾಡುವವರಿಗೆ ಈ ದೇಶವನ್ನು ಕಾಯುವ ಯೋಧರ, ದೇಶವನ್ನು ಕಟ್ಟುವ ಶ್ರಮಿಕರ ತ್ಯಾಗ ಅರ್ಥವಾಗಬೇಕು. ಒಂದು ಕಡೆ ಖರ್ಚು ಮಾಡುತ್ತಿದ್ದಾರೆ. ಇನ್ನೊಂದು ಕಡೆ ಕೋಟಿ ಕೋಟಿ ಜನ ತಿನ್ನಲು ಅನ್ನವಿಲ್ಲದೆ, ಉಡಲು ಬಟ್ಟೆಯಿಲ್ಲದೆ ಸೊರಗಿದ್ದಾರೆ. ಜನರನ್ನು ಕೊಂದವರೇ ಪಾಕೆಟ್‌ಗಳಲ್ಲಿ ಊಟ ಬಿಸಾಡಿ ಪ್ರಚಾರ ಪಡೆಯುತ್ತಿದ್ದಾರೆ. ಇವೆಲ್ಲಾ ಎಂಥಾ ವಿಧ್ವಂಸಕಾರಿ ಕೃತ್ಯಗಳು.



ಮಂದಿರಗಳಿಗಿಂತ ಅನ್ನ, ಬಟ್ಟೆ, ವಿದ್ಯೆ ಮುಖ್ಯ
**- ತುಮಕೂರಿನ ಸಿದ್ದಗಂಗಾ ಸ್ವಾಮೀಜಿ**

**ಕೃಪೆ: ಅಗ್ನಿ**

ಪುಟ 9 ರಿಂದ

## ....ಸಂಸ್ಕೃತಿ ಬೆಳೆಸಿದ ಮುಸ್ಲಿಮರು

ಧರ್ಮಗುರುಗಳು ಮುಖಂಡರಾಗಿದ್ದಾರೆ. ಧರ್ಮದ ಮುಖಂಡರು ರಕ್ತದ ಕಾಲುವೆ ಹರಿಸಲು ಮುಖಂಡರಾಗಿದ್ದಾರೆ. ಇಂತಹ ಬರ್ಬರ ಕೃತ್ಯವನ್ನು ಕೋಮುದಳ್ಳುರಿಯನ್ನು ಶಮನ ಮಾಡುವಂತಹ ಕೆಲಸವನ್ನು ನಾವು ಈಗ ಮಾಡಬೇಕಾಗಿದೆ. ವಿವೇಕಾನಂದರು ಹೇಳಿದ್ದರು, ಭಾರತೀಯರಿಗೆ ವೇದಾಂತದ ಮೆದುಳು ಮುಸ್ಲಿಮರ ಶರೀರ ಇರಬೇಕು ಅಂತ. ವೇದಾಂತವು ಸಮದರ್ಶಿತ್ವವನ್ನು ಕಲಿಸುತ್ತೆ. ಮುಸ್ಲಿಂ ಶರೀರ ಗಟ್ಟಿತನವನ್ನು ಕಲಿಸುತ್ತೆ.

ನಿಜವಾದ ಧರ್ಮವಂತರು ಗಾಳಿಯನ್ನು, ನೀರನ್ನು ಒಡೆದು ಹಂಚಿ ಅಂತ ಹೇಳುವುದಿಲ್ಲ. ನಾವು ಬಹಳ ದೊಡ್ಡ ಸಂಸ್ಕೃತಿ ಜನ. ಸಹನೆಯಿಂದ ಜಿದ್ದು ಮಾಡುವವರನ್ನು ಸಮಾಧಾನದಿಂದ ಒಲಿಸಿಕೊಳ್ಳಬೇಕು. ಮನ್ಸೂರರಿಗೆ ಸಂಗೀತ ಧಾರೆಯೆರೆದ ಅಲ್ಲಾ ದಿಯಾಖಾನ್ ಈ ಜಿದ್ದು ಮಾಡಲಿಲ್ಲ.ಆತನೊಬ್ಬ ಮುಸ್ಲಿಂ ಆದರೂ ಭೇದ ಇಲ್ಲ. ನಮ್ಮ ಸಂಗೀತ, ನಮ್ಮ ಶಿಲ್ಪ, ನಮ್ಮ ಬಟ್ಟೆ, ಇಲ್ಲೆಲ್ಲಾ ಬೆರೆತಿರುವ ಮುಸ್ಲಿಮರನ್ನು ನಮ್ಮವರೆಂದು ಭಾವಿಸಬೇಕು. ಈ ಪ್ರವೃತ್ತಿ ಬಿಡದುಕೊಂಡು ಸಾಯುವುದಕ್ಕಲ್ಲ ಇರುವುದು. ನಮ್ಮ ಮಸೀದಿ, ಚರ್ಚು, ದೇವಸ್ಥಾನ ಇವುಗಳ ಸ್ಥಿತಿ ಎಲ್ಲಿಗೆ ಬಂದಿದೆ ನೋಡಿ? ಇಲ್ಲಿ ಮನುಷ್ಯ ಮನುಷ್ಯರು ಸೇರೋದಿಲ್ಲ. ಬಸ್ಟಾಂಡಿನಲ್ಲಿ, ರೈಲ್ವೆ, ಸ್ಟೇಷನ್‌ನಲ್ಲಿ, ಹೋಟೆಲ್‌ಗಳಲ್ಲಿ ನಮ್ಮ ಜನ ಕೂರುತ್ತಾರೆ. ಒಟ್ಟಿಗೆ ಊಟಮಾಡುತ್ತಾರೆ. ಆದರೆ ದೇವರು ಇರುವ ಕಡೆ ಇವರು ಒಟ್ಟಿಗೆ ಸೇರಲ್ಲ. ನಮ್ಮ ಎಲ್ಲ ಮೌಲ್ಯಗಳೂ ಅಧಃಪತನದ ಹಾದಿ ಹಿಡಿದಿವೆ. ಈ ದಿಸೆಯಲ್ಲಿ ನಾವು ಯೋಚಿಸಿ ಮನುಷ್ಯರನ್ನು ಕೂಡಿಸುವಂತಹ, ಪ್ರೀತಿಸುವಂತಹ ವೇದಿಕೆಯನ್ನು ನಿರ್ಮಾಣ ಮಾಡಬೇಕಿದೆ.

**ಕೃಪೆ: ಲಂಕೇಶ್ ಪತ್ರಿಕೆ**

## ಕಾಂಗ್ರೆಸ್‌ಯೇತರ ಪರ್ಯಾಯಕ್ಕಾಗಿ

ಪುಟ 9 ರಿಂದ

ರಾಜಕೀಯ-ಸಂಘಟನಾ ವರದಿಯಲ್ಲಿ ವಿಶೇಷ ಉಲ್ಲೇಖ ಮಾಡಲಾಗಿದೆ. ಇತರೇ ರಾಜ್ಯಗಳಿಗೆ ಆಂಧ್ರದ ಈ ಅನುಭವದಿಂದ ಅರಿತು, ಕಾರ್ಯ ಪ್ರವೃತ್ತರಾಗುವಂತೆ ಕೋರಿದ್ದೇವೆ. **ಪಕ್ಷ ಸೀಟುಗಳ ಲೆಕ್ಕದಲ್ಲಿ ಸಣ್ಣ ಶಕ್ತಿಯಾದರೂ, ಜನರನ್ನು ಅಣಿನೆರೆಸುವಲ್ಲಿ ದೊಡ್ಡ ಶಕ್ತಿಯಾಗಲಿದೆ** ಎಂಬುದನ್ನು ಈ ಅನುಭವ ತೋರಿದೆ. ಮಹಾಧಿವೇಶನದಲ್ಲಿ ಚರ್ಚಿತವಾದ ಮತ್ತೊಂದು ದೊಡ್ಡ ವಿಷಯವೆಂದರೆ, **ನಾವು ನಮ್ಮ ಹೋರಾಟಗಳಲ್ಲಿ - ಪ್ರಚಾರಾಂದೋಲನಗಳಲ್ಲಿ ದೊಡ್ಡ ಪ್ರಮಾಣದ ಜನರನ್ನು ಸೆಳೆದರೂ ಸಹಾ ಏಕೆ ಇದು ಚುನಾವಣಾ ರಾಜಕೀಯದಲ್ಲಿ ಪ್ರತಿಫಲಿತವಾಗಿಲ್ಲ** ಎಂಬುದು ಆಂಧ್ರದ ಪಕ್ಷವು ತಾನು ಸಣ್ಣ ಶಕ್ತಿಯಾಗಿದ್ದರೂ ಸಹಾ ಹೇಗೆ ಸರ್ಕಾರದ ದೈನಂದಿನ ನೀತಿ ನಿರೂಪಣೆಗಳ ಮೇಲೆ ಜನರನ್ನು ಅಣಿನೆರೆಸುವ ಮೂಲಕ ಪ್ರಭಾವ ಬೀರಬಹುದೆಂಬುದನ್ನು ತೋರಿದೆ. ಇದು ಪ್ರಮುಖವಾಗುತ್ತದೆ ಏಕೆಂದರೆ, ಇದು ರಾಜಕೀಯವನ್ನು ಬೀದಿಗಳ ಮೇಲೆ, ಎಲ್ಲಿ ಅದು ಜನಗಳ ನಡುವೆ ಇರಬೇಕಿತ್ತು ಅಲ್ಲಿಗೆ ಅದನ್ನು ತಂದಿದೆ. ಆದಕಾರಣ ಏನೇ ಆಗಲಿ ರಾಜಕೀಯ ಜನಗಳ ನಡುವೆ ನಿರ್ಧರಿತವಾಗಬೇಕಾದ್ದು ಕೊಠಡಿಗಳಲ್ಲೊ ಅಥವಾ ಬೇರೆಲ್ಲೋ ರಾಜಕೀಯ ಮಾಡುವುದರ ಮೂಲಕವಲ್ಲ.

ಆಂಧ್ರ ಹಾಗೂ ತಮಿಳುನಾಡಿನಲ್ಲಿ ಇನ್ನೊಂದು ಅನುಭವವು ಆಗಿದೆ, ಅದನ್ನು ಮಹಾಧಿವೇಶನ ಗಮನಿಸಿದೆ. ಈಗಾಗಲೇ ನಾನು ಹೇಳಿದಂತೆ ನಮ್ಮ ಹೋರಾಟದ ನೆಲೆಯನ್ನು ಚುನಾವಣಾ ಗಳಿಕೆಯಾಗಿ ಮಾರ್ಪಡಿಸಲು ಸಾಧ್ಯವಾಗದಿರುವುದು, ನಮ್ಮ ಬೆಳವಣಿಗೆಗೆ ಇರುವ ದೊಡ್ಡ ತೊಡಕೆಂದರೆ ಜನರ ತಿಳುವಳಿಕೆ ಮಟ್ಟ ತೀರ ಕಡಿಮೆ ಇರುವುದು, ಜಾತಿ ಹಾಗೂ ಧರ್ಮದ ಹೆಸರಿನಲ್ಲಿ ಅವರನ್ನು ಸೆಳೆಯುವುದು ಸುಲಭವಾಗಿದೆ. ನಾವಿದನ್ನು ಪ್ರಮುಖವಾಗಿ ಜಾತಿಯ ಸಂಲಗ್ನತೆಯನ್ನು ಹೊಡೆದಾಕಬೇಕಿದೆ. ಇದನ್ನು ಸಾಧಿಸಲು ಆರ್ಥಿಕ **ಪ್ರಶ್ನೆಗಳ ಮೇಲೆ ನಾವಿರುವಷ್ಟೇ ಕ್ರಿಯಾಶೀಲವಾಗಿ ಸಾಮಾಜಿಕ ಪ್ರಶ್ನೆಗಳ ಕುರಿತು ಸಹಾ ಇರಬೇಕು. ಈ ಎರಡನ್ನು ಒಂದುಗೂಡಿಸಬೇಕು.** ವಾಸ್ತವದಲ್ಲಿ ಈ ಮಹಾಧಿವೇಶನದ ಒತ್ತು ಇದರ ಕುರಿತು ಇದ್ದುದು. **ಸಾಮಾಜಿಕ ದಬ್ಬಾಳಿಕೆ ಹಾಗೂ ಆರ್ಥಿಕ ಶೋಷಣೆ ವಿರುದ್ಧದ ಹೋರಾಟಗಳು ಎರಡೂ ವರ್ಗ ಸಂಘರ್ಷದ ಭಾಗ. ಒಂದರ ಕಾರಣದಿಂದಾಗಿ ಇನ್ನೊಂದನ್ನು ನಿರ್ಲಕ್ಷಿಸುವಂತಿಲ್ಲ.** ಸಾಮಾಜಿಕವಾಗಿ ತುಳಿತಕ್ಕೊಳಗಾಗಿರುವ ದಲಿತರು, ಹಾಗೂ ಗುಡ್ಡಗಾಡು ಜನರಲ್ಲಿ ಮತ್ತಿತರರಲ್ಲಿ, ಕೆಂಪು ಬಾವುಟ ಆರ್ಥಿಕ ಹಾಗೂ, ಖಾಸಗೀಕರಣಗಳ ವಿಷಯಗಳಲ್ಲಿ ಎಷ್ಟರ ಮಟ್ಟಿಗಿನ ಹೋರಾಟ ನಡೆಸುತ್ತದೋ ಅಷ್ಟೇ ಗಂಭೀರವಾಗಿ ಅವರ ಸಾಮಾಜಿಕ ತುಳಿತದ ವಿಷಯವನ್ನು ತೆಗೆದುಕೊಳ್ಳಲಿದೆ ಎಂಬ ವಿಶ್ವಾಸವನ್ನು ಮೂಡಿಸಬೇಕಿದೆ.

ಆಂಧ್ರ ಹಾಗೂ ತಮಿಳುನಾಡಿನಲ್ಲಿ ಜಾತಿ ತಾರತಮ್ಯದ ವಿಷಯವನ್ನು ಕಳೆದ ಮೂರು ವರ್ಷಗಳಲ್ಲಿ ಪ್ರಜ್ಞಾಪೂರ್ವಕವಾಗಿ - ವ್ಯವಸ್ಥಿತವಾಗಿ ಎತ್ತಿಕೊಂಡಿವೆ. ಆಂಧ್ರದಲ್ಲಿ ಈ ಅಸ್ಪೃಶ್ಯತೆ ಎಷ್ಟು ಆಳವಾಗಿದೆ ಎಂಬುದನ್ನು ತೋರಲು ಸರ್ವೆಯನ್ನು ಸಹಾ ನಡೆಸಿದೆ. ನಾವು ಮತ್ತು ಬಹಳಷ್ಟು ಜನ ಅಂದುಕೊಂಡಿದ್ದಕ್ಕಿಂತ ಆಳವಾಗಿ ನಾವು ಮತುವರ್ಜಿವಹಿಸಿದರೆ ಸಮಾಜಿಕವಾಗಿ ತುಳಿತಕ್ಕೊಳಗಾದ ಜನವಿಭಾಗ ದೊಡ್ಡ ಪ್ರಮಾಣದಲ್ಲಿ ನಮ್ಮೊಂದಿಗೆ ಬರುತ್ತಾರೆ, ಎಂಬುದನ್ನು ತೋರಿದೆ.

***ಪ್ರಶ್ನೆ: ನಾಯಕತ್ವ ಬದಲಾವಣೆ ಕುರಿತು ಬಹಳಷ್ಟು ಊಹಾಪೋಹಗಳು ಮಾಧ್ಯಮದಲ್ಲಿದ್ದವು, ಕಮ್ಯುನಿಸ್ಟರಾಗಿ ನೀವು ಹೇಗೆ ಇದಕ್ಕೆ ಪ್ರತಿಕ್ರಿಯಿಸುತ್ತೀರಿ?***

ಉತ್ತರ: ಕಮ್ಯುನಿಸ್ಟರಿಗೆ ನಾಯಕತ್ವದ ಪ್ರಶ್ನೆ ಪ್ರಾಥಮಿಕವಾಗಿ-ವಾಸ್ತವಿಕದಲ್ಲಿ ಪಕ್ಷದ ರಾಜಕೀಯ ನಿಲುಮೆಗೆ ಸಂಬಂಧಿಸಿದ್ದು. ಇತರೇ ಅಂಶವಾದ ವಯಸ್ಸು, ಸ್ವೀಕೃತಿ, ಮತ್ತಿತರ ಅಂಶಗಳು ಅಷ್ಟು ಪ್ರಮುಖವಲ್ಲ. ರಾಜಕೀಯ ನಿಲುಮೆಗೆ ಸಂಬಂಧಿಸಿದ್ದಂತೆ ಈ ಮಾಹಾಧಿವೇಶನದಲ್ಲಿ ದೊಡ್ಡ ರೀತಿಯ ಐಕ್ಯತೆ ಇದೆ. ಇದನ್ನು ಅಧಿವೇಶನಕ್ಕೆ ಮುನ್ನಾ ಬಂದ ತಿದ್ದುಪಡಿಗಳಲ್ಲಿ ನಾವು ಗಮನಿಸಬಹುದು. ಇಂತಹ ಐಕ್ಯತೆ ಪಕ್ಷದಲ್ಲಿ ಇರುವಾಗ ರಾಜಕೀಯ ಕಾರಣಗಳಿಗಾಗಿ ನಾಯಕತ್ವದ ಬದಲಾವಣೆಯ ಪ್ರಶ್ನೆ ಉದ್ಭವಿಸದು.

## ಫ್ಯಾಲೆಸ್ತೈನ್ ..........ಇಸ್ರೇಲಿ ಆಕ್ರಮಣ

ಪುಟ 7 ರಿಂದ

ಮಾಸಿಲ್ಲ 1982ರಲ್ಲಿ ಲೆಬನಾನಿನಲ್ಲಿ ಪ್ಯಾಲೆಸ್ತೈನ್ನರ ನಿರಾಶ್ರಿತರ ಶಿಬಿರದ ಮೇಲೆ ದಾಳಿ ಮಾಡಿ 800 ರಿಂದ 1000 (ಹೆಂಗಸರು, ಮಕ್ಕಳು ಸೇರಿ) ಜನರ ನರಮೇಧ ನಡೆಸಿದ ರೆಹಾರ್ಡ್ ಶರೋನ್‌ರನ್ನು ಆತನನ್ನು ಯುರೋಪಿನಲ್ಲಿ ಈ ನರಮೇದಕ್ಕೆ ಕೋರ್ಟಿಗೆ ಎಳೆಯಲಾಗಿದೆ. ಬೆಲ್ಜಿಯಂನಲ್ಲಿ ಜಿನೋವಾ ಒಪ್ಪಂದವನ್ನು ಉಲ್ಲಂಘಿಸಿ ಈ ನರಮೇಧ ವೈಯಕ್ತಿಕವಾಗಿ ಜವಾಬ್ದಾರಿ ಎಂದು ಈ ಕೇಸಿನಲ್ಲಿ ಆಪಾದಿಸಲಾಗಿದೆ. 1982ರಲ್ಲಿ ಲೆಬನಾನ್‌ನಲ್ಲಿ ನಡೆದ ಈ ನರಮೇಧದಲ್ಲಿ ಬಲಿಯಾದವರ ಸಂಬಂಧಿಕರು ಈ ಕೇಸು ಹಾಕಿದ್ದಾರೆ.

ಬೆಲ್ಜಿಯಂ ಕಾನೂನು ಯುದ್ಧ ಅಪರಾಧ, ಅಂತರ್ರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘಿಸಿದವರ ಮೇಲೆ ಬೇರೆ ದೇಶದವರಾದರೂ, ಹಳೆಯ ಕೇಸಾದರೂ ಕೋರ್ಟಿಗೆ ತರಬಹುದು. ಬೆಲ್ಜಿಯಂ ಕೋರ್ಟು ಶಾರೋನ್‌ರನ್ನು ಹಾಜರಾಗಲು ಹೇಳಿದ್ದು ಆತ ಈ ವರೆಗೆ ನಿರಾಕರಿಸಿದ್ದಾರೆ. ಆದರೆ ಆಗಿನ ಇಸ್ರೇಲಿನ ಸರ್ಕಾರ (ಪ್ರಧಾನಿ ಬೆಗಿನ್‌ರದ್ದು) ನೇಮಿಸಿದ್ದ ಕಹಾನ್ ಕಮೀಶನ್ ಶರೋನ್ ಈ ನರಮೇಧಕ್ಕೆ ವೈಯಕ್ತಿಕ ಜವಾಬ್ದಾರಿ ಎಂದು ಸಾರಿದೆ. ಈ ಕಮೀಶನ್ ವರದಿ ಬಂದಾಗ ಶರೋನ್ ಕ್ಯಾಬಿನೆಟ್ ಮಂತ್ರಿಯಾಗಿದ್ದು ಆತನ ರಾಜೀನಾಮೆ ಕೊಡಬೇಕಾಗಿ ಬಂದಿತ್ತು. ಶರೋನ್ ಲೆಬನಾನ್ 1980-82 ರಲ್ಲಿ ಇಸ್ರೇಲಿ ಸೈನ್ಯದ ಮುಖ್ಯಸ್ಥನಾಗಿದ್ದ ಕಾರ್ಯಾಚರಣೆಯಲ್ಲಿ ಅಂತರ್ರಾಷ್ಟ್ರೀಯ ಕಾನೂನು ಉಲ್ಲಂಘಿಸಿದ್ದಾರೆ ಎಂದು ಸ್ವತಂತ್ರ ಅಂತರ್ರಾಷ್ಟ್ರೀಯ ಕಮಿಶನ್ ಸಹ ತೀರ್ಪಿತ್ತಿದೆ. ಇದಲ್ಲದೆ ಬೆಲ್ಜಿಯಂ ಕೋರ್ಟ್ ಕೇಸಿನಲ್ಲಿ ಸಾಕ್ಷ್ಯ ಹೇಳಲು ತಯಾರಾಗಿದ್ದ ಹಾಗೂ ಲೆಬನಾನ್ ನರಮೇಧದಲ್ಲಿ ಶರೋನ್ ಜತೆ ಸಹಕರಿಸಿದ್ದ ಕ್ರಿಶ್ಚಿಯನ್ ಉಗ್ರವಾದಿ ಹೊಬೆಕಾ ಇತ್ತೀಚೆಗೆ ಕಾರ್ ಬಾಂಬ್ ಒಂದರಿಂದ ಸತ್ತ ಇದು ಶರೋನ್‌ರನ್ನು ಬಚಾವು ಮಾಡಲು ಇಸ್ರೇಲಿ ಏಜಂಟರು ಮಾಡಿದ ಕೊಲೆ ಎನ್ನಲಾಗಿದೆ. ಶರೋನ್ ನರಮೇಧಕ್ಕೆ ಜವಾಬ್ದಾರಿ ಎಂದು ಸಾರ್ವಜನಿಕವಾಗಿ ಹೇಳಿದ್ದೇ ಆವನಿಗೆ ಮುಳುವಾಯಿತು. ಹೀಗಿದೆ ಶರೋನ್ ರಕ್ತ ಸಿಕ್ತ ರೆಕಾರ್ಡ್.

**ಎಲ್ಲೆಲ್ಲೂ ಶಾಂತಿಗೆ ಕೂಗು**

ಇಸ್ರೇಲಿನ ಆಕ್ರಮಣ ಎಲ್ಲೆಲ್ಲೂ ಖಂಡನೆಗೆ ಒಳಗಾಗಿದೆ. ಇಸ್ರೇಲಿನಲ್ಲಿ ಶಾಂತಿಪ್ರಿಯರು ಈ ಆಕ್ರಮಣ ಖಂಡಿಸಿ ಭಾರಿ ಪ್ರದರ್ಶನಗಳನ್ನು ನಡೆಸಿದ್ದಾರೆ. ಕೆಲವು ಅಂತರ್ರಾಷ್ಟ್ರೀಯ ಶಾಂತಿ ಚಳುವಳಿಗಾರರು ಅರಾಫತ್‌ನ ಕೇಂದ್ರ ಕಛೇರಿಯ ಸುತ್ತ 'ಮಾನವ ತಡೆ'ಗಳ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಬಿಬಿಸಿ ಮತ್ತಿತರ ಅಂತರ್ರಾಷ್ಟ್ರೀಯ ಸುದ್ದಿ ಸಂಸ್ಥೆಗಳ ಪ್ರತಿನಿಧಿಗಳ ಮೇಲೆ ನಿರ್ಬಂಧ ಹಸ್ತೆಯನ್ನು ವ್ಯಾಪಕವಾಗಿ ಖಂಡಿಸಲಾಗಿದೆ. ಫೆಬ್ರವರಿ ಕೊನೆ ವಾರದಲ್ಲಿ ಇಸ್ರೇಲಿ ರಾಜಧಾನಿಯಲ್ಲಿ ಹತ್ತು ಸಾವಿರ ಜನ ಭಾಗವಹಿಸಿದ್ದರು. ಯುರೋಪು, ಅಮೆರಿಕ, ಏಷ್ಯಾಗಳಲ್ಲೂ ಇಸ್ರೇಲಿ ಆಕ್ರಮಣ ಖಂಡಿಸಿ ವ್ಯಾಪಕ ಪ್ರತಿಭಟನಾ ಪ್ರದರ್ಶನಗಳಾಗಿವೆ.

# $H_2O$ = ನೀರು ವಾದ ವಿವಾದ

**ಅತ್ಯಂತ ಕೆಟ್ಟ ಕಮರ್ಷಿಯಲ್ ಚಿತ್ರವಾದರೂ $H_2O$ ಕಾವೇರಿ ನೀರಿನಂತಹ ಸಮಸ್ಯೆಗೆ ಪರಿಹಾರ ಬಡಿದಾಟವಲ್ಲ, ಪರಸ್ಪರ ತಿಳುವಳಿಕೆ, ಸಹಬಾಳ್ವೆ ಎಂಬ ಪ್ರಬಲ ಸಂದೇಶವನ್ನು ಹೊರಡಿಸುತ್ತದೆ. ಈ ಚಿತ್ರದ ಸುತ್ತ ಬೆಳೆದಿರುವ ವಾದ-ವಿವಾದಗಳಿಗೆ ಏನರ್ಥವಿದೆ?**



$H_2O$ ಎಂಬುದು 'ನೀರಿಗೆ ಹೇಳುವ ರಾಸಾಯನಿಕ ಸೂತ್ರದ ಹೆಸರು. ಇರುವುದನ್ನೆ ಸೀದಾಸಾದಾ ಹೇಳಿದರೆ ಹೇಗೆ? ನಿಮಗೂ ಮೆದುಳಿದೆಯೇ? ಇದ್ದರೂ ಬುದ್ಧಿ ಇದೆಯೇ? ಎಂದು ಪರೀಕ್ಷಿಸಬೇಡವೇ. ಅರ್ಥವಾಗಬೇಕಾದ್ದನ್ನು ಅರ್ಥವಾಗದ ರೀತಿಯಲ್ಲಿ ಹೇಳುವುದೇ ಉಪೇಂದ್ರನ ಸ್ಪೆಷಾಲಿಟಿ ಅಲ್ಲವೇ? ಇಂತಹ ಚಿತ್ರ ವಿಚಿತ್ರಗಳ ನಟ ಕಂ ನಿರ್ದೇಶಕ ಉಪೇಂದ್ರರವರ 'ಶ್', 'ಎ' (ಬುದ್ಧಿವಂತರಿಗೆ ಮಾತ್ರ) ದಂತಹ ಚಿತ್ರ ಸರಣಿಗಳ ಸಾಲಿಗೆ ಈಗ $H_2O$.

ಈ $H_2O$ ಶುರುವಾತಿಯಿಂದಲೇ ಸದಾ ಸುದ್ದಿಯಲ್ಲಿರುವಂತೆ ನೋಡಿಕೊಳ್ಳಲಾಗಿದೆ. ಸಿನಿಮಾದ ಹಾಡಿನ ಕ್ಯಾಸೆಟ್ ಬಿಡುಗಡೆಯ ನೆಪದಲ್ಲಿ ಅತೀ ವಿಜೃಂಬಣೆಯ ಭಾರಿ ಸಮಾರಂಭ ದಾವಣಗೆರೆಯಲ್ಲಿ ನಡೆಸಿ, ನಂತರದಲ್ಲಿ ಮಾಧ್ಯಮಗಳಲ್ಲಿ, ಬೀದಿ ಗೋಡೆಗಳ ಮೇಲೆ ಒಂದೊಂದು ರೂಪದ ಪ್ರಚಾರದಲ್ಲಿತ್ತು. ಈಗ ಚಿತ್ರ ಬಿಡುಗಡೆಯಾದ ದಿನದಿಂದಲೇ ವಾದ ವಿವಾದಗಳ ದೂಳಿಗೆ ಸಿಲುಕಿದೆ.

**ಸಮಸ್ಯೆಯೇನು?**

- ಈ ಚಿತ್ರ ಪ್ರದರ್ಶನ ನಿಲ್ಲಿಸಿ.
- ಚಿತ್ರದ ನಾಯಕಿ ಕಾವೇರಿಗೇಕೆ ಮೈತುಂಬ ಬಟ್ಟೆಇಲ್ಲ,
- ಸಿನಿಮಾ ಅರ್ಧ ಭಾಗ ತಮಿಳುಮಯ, ಇದು ಕನ್ನಡಿಗರ ಸ್ವಾಭಿಮಾನಕ್ಕೆ ಪೆಟ್ಟು...

ಹೀಗೆ ಪಟ್ಟು ಹಿಡಿದು ಪ್ರತಿಭಟಿಸುತ್ತಿದ್ದಾರೆ ವಾಟಾಳ್, ಜಾಣಗೆರೆಯಂತಹ ಕನ್ನಡ ಓರಾಟಗಾರರು, ಅಲ್ಲದೆ $H_2O$ V/S 'ಏಕಾಂಗಿ' ಎಂಬ ಚಿತ್ರನಗರಿಯ ಸಮರದ ಸತ್ಯ ಹೊರ ಚಿಮ್ಮಿದೆ. ಹಾಗೆಯೇ ಹೇಳಿಕೇಳಿ ಕಾವೇರಿ ನದಿ ನೀರಿನ ವಿವಾದವನ್ನೇ ಕಥಾವಸ್ತುವನ್ನಾಗಿರಿಸಿ ಕೊಂಡಿರುವ ಈ $H_2O$ ಚಿತ್ರ ಅಷ್ಟೇ ವಿವಾದಗಳನ್ನು ಎಬ್ಬಿಸಿದೆ. ಚಿತ್ರ ಮಂದಿರದ ಪರದೆಯನ್ನು ಸುಡಲಾಗಿದೆ. ಚಿತ್ರ ನಿರ್ಮಾಪಕ ಧನರಾಜ್ ರಾತ್ರೋರಾತ್ರಿ ಅಷ್ಟಿಷ್ಟು ಇರುವ ತಮಿಳು ಸಂಭಾಷಣೆಗಳನ್ನು ಕನ್ನಡಕ್ಕೆ ಡಬ್ ಮಾಡಿ ರೀಲು ಸುತ್ತಿದ್ದಾರಂತೆ! ನಿಜವಾಗಲೂ ಈ ವಿವಾದ ಬಟ್ಟೆಯ ಸಮಸ್ಯೆಯೇ? ಭಾಷೆ ಅಥವಾ ಭಾವನೆಗಳ ಸಮಸ್ಯೆಯೇ?

ನಾಯಕಿಯರ ಬಟ್ಟೆಗಳನ್ನು ಇಂಚಿಂಚೂ ಕುಗ್ಗಿಸುವುದರಲ್ಲಿ ಕನ್ನಡ ಚಿತ್ರರಂಗವೂ ಸಹ ಹಾಲಿವುಡ್, ಬಾಲಿವುಡ್‌ಗಳೊಂದಿಗೆ ಸ್ಪರ್ಧೆಗೆ ಇಳಿದಿದೆ. ಇನ್ನೂ ಈ ಚಿತ್ರಕ್ಕೆ ಏನು ವಿಶೇಷತೆ? ಕರ್ನಾಟಕದಲ್ಲಿ ಉತ್ತಮ ಕಥೆಗಳುಳ್ಳ ಚಿತ್ರಗಳು ಪ್ರೇಕ್ಷಕರನ್ನು ಸೆಳೆಯುವ ಬದಲು ಕೀಳು ಅಭಿರುಚಿ ಎರಚಿ ಹಣ ಸುಲಿಯುವ ಸುಲಭದ ಮಾರ್ಗ ಹಿಡಿದಿವೆ. ಹೀಗೆ ಸತ್ವಯುತ ಕಥಾವಸ್ತು, ಹಾಡು ಸಂಗೀತ ಭಾಷೆ ಪಕ್ವ ಅಭಿನಯ, ನೂತನ ತಾಂತ್ರಿಕತೆಗಳನ್ನು ಬೆಳೆಸದೇ ಸೊರಗುತ್ತಿದೆ. ಅನುಕರಣೆಯೇ ಅತಿಯಾದಾಗ ಸೃಜನಶೀಲತೆ ಅರಳುವುದಾದರೂ ಹೇಗೆ?

ಈಗಿನ ಚಲನ ಚಿತ್ರಗಳಲ್ಲಿನ ಅಶ್ಲೀಲತೆ, ಹಿಂಸೆ, ಕ್ರೌರ್ಯಗಳನ್ನು ಕಿಂಚಿತ್ತೂ ವಿರೋಧಿಸದೇ ಈ ಹೋರಾಟಗಾರರ ಪಡೆ ತಮ್ಮ ಕಾವೇರಿ ಕರುಣೆಸು ಉಡುಗೆ ಎಂದು ಧ್ವನಿ ಎತ್ತುವುದಕ್ಕೆ ಬೇರೆ ಕಾರಣಗಳಿರಬೇಕು. ಹಾಗೆಯೇ ತಮಿಳು, ತೆಲುಗು, ಹಿಂದಿ, ಇಂಗ್ಲೀಷ್ ನಂತಹ ದೇಶ-ವಿದೇಶಗಳ ಭಾಷೆ ಚಿತ್ರಗಳೇ ಪ್ರದರ್ಶನವಾಗುತ್ತಿರುವಾಗ, ಅದು ಪ್ರಜೆಗಳ ಹಕ್ಕನ್ನಾಗಿಸುವಾಗ ಈ ಚಿತ್ರದಲ್ಲಿನ ತಮಿಳು ಸಂಭಾಷಣೆಗೆ ಮಾತ್ರ ವಿರೋಧವೇ? ಕನ್ನಡ ಸಿನಿಮಾಗಳಲ್ಲಿಯೇ ಅದೆಷ್ಟು ಇಂಗ್ಲೀಷ್ ಬಳಸುವುದಿಲ್ಲ, ಅಥವಾ ಈ ಸ್ವಾಭಿಮಾನದ ಪ್ರಶ್ನೆಯ ಹಿಂದಿರುವುದಾದರೂ ಏನು? ಎಂಬ ಪ್ರಶ್ನೆ ಸಹಜ. ಚಿತ್ರವಿಮರ್ಶೆಗೆ ಮೊದಲು ಚಿತ್ರ ಪ್ರದರ್ಶನ ನಡೆಯುವ ಸನ್ನಿವೇಶದಲ್ಲಿ ಉದ್ಭವವಾಗುವ ಪ್ರಶ್ನೆಗಳಿವು.

**ಸಹಬಾಳ್ವೆಯೊಂದೇ**

'ಕಾವೇರಿ ನೀರು' ಈ ಚಿತ್ರದ ಕಥಾವಸ್ತು. ಅದರ ಸಾಂಕೇತಿಕ ರೂಪ ಆಶ್ರಮದಲ್ಲಿ ಬೆಳೆದ ಕಾವೇರಿ. ಕನ್ನಡ - ತಮಿಳು ಭಾಷಿಕ ತಂದೆ ತಾಯಿಗಳು ಕೊಲೆಗೀಡಾದಾಗ, ಈ ಅನಾಥ ಶಿಶು ಬೆಳೆದಿದ್ದು ಆಶ್ರಮದಲ್ಲಿ ಈ ಹರೆಯದ ಚೆಲುವೆ ಕಾವೇರಿ (ಪ್ರಿಯಾಂಕ)ಯನ್ನು ಪ್ರೀತಿಸುವ, ದಕ್ಕಿಸಿಕೊಳ್ಳಲು ಅತ್ಯಂತ ಭಾವನಾತ್ಮಕವಾಗಿ ಬಡಿದಾಡುವ ಕನ್ನಡಿಗ ಮಂಡ್ಯದ ಉದಯ ಶಂಕರಗೌಡ (ಉಪೇಂದ್ರ), ತಮಿಳಿಗ ವೈರ ಮುತ್ತು (ಪ್ರಭುದೇವ). ಇವರು ಕಾವೇರಿ ನದಿಯ ಎರಡು ತೀರದ ಊರಿನವರು. ಕಾವೇರಿಗಾಗಿ ನಡೆಯುವ ನಾಯಕರ ವರಸೆಗಳು, ಬಡಿದಾಟಗಳು ಇದಕ್ಕೆ ಬೆಂಗಾಲಾಗುವ ಜನರೂ ಸೇರಿ ತಾರಕ್ಕೇರುತ್ತವೆ. ಈ ನಾಯಕರತ್ತ ಕಾವೇರಿ ಒಲಿಯುವಂತೆ ಹಲವಾರು ಕಥೆಗಳು ಉಪಕಥೆಗಳು, ಹೇಳಲ್ಪಡುತ್ತವೆ. ಆದರೆ ಕಾವೇರಿ ಬಗ್ಗೆ ಉಭಯ ಬಣಗಳಲ್ಲಿ ಒಮ್ಮತ ಅಥವಾ ಸಮ್ಮತಿ ಏರ್ಪಡದಂತೆ, ಈ ಬಡಿದಾಟ ಸತತ ಜೀವಂತವಾಗಿರುವಂತೆ ರಾಜಕೀಯ ಷಡ್ಯಂತ್ರಗಳು ವಿಜೃಂಭಿಸುತ್ತವೆ. 'ಕಾವೇರಿ' ಸಮಸ್ಯೆ ಇತ್ಯರ್ಥವಾಗದೇ ಸಮಸ್ಯೆ ಜಟಿಲವಾಗಿಡಲು 'ಕಿರಿಕ್' (ತೆಲುಗು ಹಾಸ್ಯನಟದ ಬಾಬು ಮೋಹನ್) ನಂತಹ ರಾಜಕಾರಣಿಗಳ ಕೈವಾಡ ಇದೆ. ಪರಿಣಾಮ ವ್ಯಾಪಕ ಹಿಂಸೆ, ಕೊಲೆ ಆಸ್ತಿನಾಶ ಸುಡುವಿಕೆ ನಡೆದು ಭೀಕರ ಹಿಂಸಾಕಾಂಡವೇ ನಡೆಯುತ್ತದೆ. ಈ ದೃಶ್ಯಗಳು ಕಾವೇರಿನೀರಿಗಾಗಿ ಹಿಂದೆ ನಡೆದ ಹಿಂಸಾಚಾರವನ್ನು ನೆನಪಿಸುತ್ತದೆ. ಇಂತಹ ಸ್ಥಿತಿಯಲ್ಲಿ ಈ ಹಿಂಸೆ ದಳ್ಳುರಿ- ಕೊನೆಗೂ ಅರ್ಥಹೀನವೆಂದು ಇಬ್ಬರ ಒಡೆದಾಟದಲ್ಲಿ ಜನಸಾಮಾನ್ಯರ ರಕ್ತ ಹರಿಸುವುದು ಪಾತಕವೆಂದು ಅದನ್ನು ನಿಲ್ಲಿಸುವ ವಿವೇಕ ಮೂಡುತ್ತದೆ, ಈ ದಳ್ಳುರಿಯಲ್ಲಿ ಸಾಯಲು ಬಯಸುವ ಎರಡು ತಂತಿ ಒಂದೇ ದೇಶವಿರುವ ಹೆಂಗಸರನ್ನು ಬಳಸಲಾಗಿದೆ. ಆದರೆ ಇಬ್ಬರೂ ಕೂಡಿಯೇ ಬಾಳಬೇಕು, ಸತ್ತರೆ ಇಬ್ಬರೂ ಸಾಯಬೇಕು ಆದ್ದರಿಂದ ಅನ್ಯಮಾರ್ಗವೇ ಇಲ್ಲ ಎಂಬುದು. ಹೀಗೆ ತಮ್ಮ ತಪ್ಪಿನ ಅರಿವು ಪರಸ್ಪರ ತಿಳುವಳಿಕೆ, ಮೂಡಿದುದರಿಂದಾಗಿ ನಿಸರ್ಗದ ಕೊಡು-ಕೊಳ್ಳುವಿಕೆಗೆ ಹೊಂದಿಕೊಳ್ಳುವುದು ಅನಿವಾರ್ಯವೆಂಬ ನಿಲುವಿಗೆ ಬರುತ್ತಾರೆ. ಇದು ಸ್ವಾಗತಾರ್ಹವಾದುದು.

ಇದನ್ನು ನಿರ್ದೇಶಕ ತುಂಬಾ ಉತ್ತಮ ರೀತಿಯಲ್ಲಿ ನಿರೂಪಿಸಿದ್ದಾರೆ. ಆದರೆ ಇಷ್ಟಕ್ಕೆ ನಿಲ್ಲದೆ ಇಂತಹ ಪರಸ್ಪರ ಒಮ್ಮತ ಸಹಬಾಳ್ವೆ ಸಹಿಸದ ರಾಜಕಾರಣಿ 'ಕಿರಿಕ್' ಪ್ರತಿ ತಂತ್ರಹೂಡಿ ಮತ್ತೆ ನಾಯಕರು ಚೂರಿ ಹಿಡಿದು ಬಡಿದಾಡಲು ತೊಡಗುವುದರೊಂದಿಗೆ ಸಿನಿಮಾ ಸಮಾಪ್ತಿಯಾಗುತ್ತದೆ. ಈ ಸಿನಿಮಾದ ಅಂತ್ಯವನ್ನು ಹೀಗೆ ಸಮಾಪ್ತಿ ಗೊಳಿಸಬೇಕಿರಲಿಲ್ಲವೆಂಬ ಟೀಕೆ ವ್ಯಾಪಕವಿದೆ. ಅದನ್ನು ಅರಿವಿನ ಪರಿಹಾರಕ್ಕೆ ನಿಲ್ಲಿಸಬಹುದಿತ್ತು. ಆದರೆ ಕಾವೇರಿಯ ಜಲವಿವಾದದಂತಹ ಜಟಿಲ ದೀರ್ಘಕಾಲಿಕವಾಗಿ ಹರಿದುಬಂದ ಸಮಸ್ಯೆಯನ್ನು ವಿಶ್ಲೇಸುವಾಗ, ಅದಕ್ಕೆ ಪರಿಹಾರ ಸೂಚಿಸುವಾಗ ತುಂಬಾ ಎಚ್ಚರ, ಗಂಭೀರತೆ ಅಗತ್ಯವಿದೆ.

ಕನ್ನಡ ಈ ಚಿತ್ರಕ್ಕೆ ವಿರೋಧ ವ್ಯಕ್ತಗೊಳ್ಳುವಲ್ಲಿ, ಕಾವೇರಿ ಸಮಸ್ಯೆಗೆ ಪರಿಹಾರ ಸೂಚಿಸುವ ಹಿಂಸೆಯನ್ನೂ ಖಂಡಿಸುವ ಅದರ ಅಂಶಗಳು ಕಾರಣವಿರುವುದು. (ಜಲವಿವಾದದಲ್ಲಿ ಪ್ರತಿಭಟನಾಕಾರರ ನಿಲವು ತಿಳಿದಿರುವಂತಹದ್ದು) ಅಲ್ಲದೇ ಒಂದೇ ದಿನ ಎರಡು ಚಿತ್ರಗಳ ಬಿಡುಗಡೆ ರವಿಚಂದ್ರನ್‌ನ ಮಹತ್ವಾಕಾಂಕ್ಷೆಯ 'ಏಕಾಂಗಿ' ಯ ಶೀತಲ ಸಮರವೂ ಪ್ರಭಾವ ಬೀರಿದೆ ಎಂಬ ಸುದ್ದಿ ವ್ಯಾಪಕವಿದೆ.

ಒಟ್ಟಾರೆ $H_2O$ ಚಿತ್ರದ ಯಥಾ ರೀತಿ ಉಪೇಂದ್ರನ ಅತೀ ಆರ್ಭಟ, ಚಿತ್ರ ವಿಚಿತ್ರ ವೇಷಗಳು, ಮಾತುಗಳು ಸಂಗೀತದ ಕರ್ಕಶ ಕೊರೆತದಲ್ಲಿ ಹಾಡಿದ್ದೇನು ಎಂಬ ಪ್ರಶ್ನೆ. ಉತ್ತಮ ಛಾಯಾಗ್ರಹಣ ಬಿಟ್ಟರೆ ಹೇಳಿಕೊಳ್ಳುವಂತಹದ್ದೇನಿಲ್ಲ ಈ ಚಿತ್ರದಲ್ಲಿ.

- ಎಸ್.ವೈ.ಗುರುಶಾಂತ್

## ಬಂಗಾಳ- ರಾಜ್ಯವ್ಯಾಪಿ ಸೌಹಾರ್ಧತಾ ಕಾರ್ಯಕ್ರಮಗಳು

ಕೋಮು ಸೌಹಾರ್ಧತೆ ಮತ್ತು ಶಾಂತಿಗಾಗಿ ...ರ್ಚ್ 14 ಮತ್ತು 15 ರಂದು ಬಂಗಾಳದಲ್ಲಿ ...ದ್ಯಾಂತ ರಕ್ತದಾನ ಶಿಬಿರ, ಸಮಾವೇಶಗಳು ...ು ರ‍್ಯಾಲಿಗಳನ್ನು ಸಂಘಟಿಸಲಾಗಿತ್ತು.

...ಾಜ್ಯದ ಎಲ್ಲಾ 19 ಜಿಲ್ಲಾ ಕೇಂದ್ರಗಳು ...ು ಉಪವಿಭಾಗಗಳು ಮತ್ತು ಪ್ರಾಂತ್ಯಗಳಲ್ಲಿ ...ರಂಗ ಮತ್ತು ಎಡರಾಜಕೀಯ ಪಕ್ಷಗಳು ...ತಿಗಳು ವಿವಿಧ ರೀತಿಯ ಕೋಮು ...ಾರ್ಧತಾ ಕಾರ್ಯ ಕ್ರಮಗಳನ್ನು ...ಿಪುವುದರ ಮೂಲಕ ರಾಜ್ಯಾದ್ಯಂತ ಶಾಂತಿ ...ನೆಗಾಗಿ ಶ್ರಮಿಸಿದವು.

...ಮಾರ್ಚ್ 14 ರಂದು ಕೋಲ್ಕತ್ತಾ ವಿದ್ಯಾನಿಲಯದ ಶತಮಾನೋತ್ಸವ ...ರ್ಭದಲ್ಲಿ ನೆರೆದಿದ್ದ ವಿಚಾರವಾದಿಗಳು, ...ವಿದರು ಶಿಕ್ಷಣ ತಜ್ಞರು, ಕ್ರೀಡಾ ಕ್ಷೇತ್ರಗಳ ಗಣ್ಯರು ದೇಶಾದ್ಯಂತಹ ಸಂಘಪರಿವಾರ ಶಕ್ತಿಗಳು ಹರಿಯಬಿಟ್ಟಿರುವ ಕೋಮುದ್ವೇಷ ವಾತಾವರಣ ವನ್ನ ತೀವ್ರವಾಗಿ ಖಂಡಿಸಿದರು. ಈ ಎಲ್ಲಾ ಘಟನೆಗಳೂ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ತನ್ನ ಹಿತಾಸಕ್ತಿಗಳ ರಕ್ಷಣೆಗಾಗಿ ಬಳಸಿಕೊಳ್ಳುತ್ತಿರು ವುದಾಗಿ ಅವರು ಆರೋಪಿಸಿದರು.

ಸಮಾವೇಶದಲ್ಲಿ ಹೆಸರಾಂತ ಸಂಗೀತಗಾರ, ವಿ. ಬ್ಲುರ್, ಚಿತ್ರಕಾರ, ಇಶ್ ಮಹಮ್ಮದ್, ಕವಿ ನಿರನ್ ಚಕ್ರವರ್ತಿ, ಖ್ಯಾತ ಸಮಾಜ ಸೇವಕರಾದ ಮಹಾಶ್ವೇತಾ ದೇವಿ, ಚಿತ್ರ ತಯಾರಕ ಮದಿನಾಲ್ ಸೇನ್, ರಂಗಭೂಮಿ ಗಣ್ಯರಾದ ಉಷಾ ಗಂಗೂಲಿ, ಕ್ರೀಡಾ ವಿಮರ್ಶಕ, ಮಾಜಿ ಒಲಂಪಿಕ್ ಆಟಗಾರ ಪಿ.ಕೆ. ಬ್ಯಾನರ್ಜಿ ಮತ್ತು ಜಾದುಗಾರ ಜ್ಯೂನಿಯರ್ ಪಿ.ಸಿ. ಸರ್ಕಾರ ಮೊದಲಾದವರು ಪಾಲ್ಗೊಂಡು ಮಾತನಾಡಿದರು.

ಇದಲ್ಲದೆ, ಗಣ್ಯರಾದ ಅನಂತ ಶಂಕರ್ ರೈ, ಹೈರೆನ್ ಮುಖರ್ಜಿ, ಸುಕುಮಾರಿ ಭಟ್ಟಚಾರ್ಯ ಮತ್ತು ಸುಚಿತ್ರ ಮಿತ್ರ ಮೊದಲಾದವರು ಕಾರ್ಯಕ್ರಮಕ್ಕೆ ಶುಭ ಕೋರಿ ಸಂದೇಶ ಕಳಿಸಿದ್ದರು. ರಾಜ್ಯದ ಎಡರಂಗ ವಿಶೇಷ ಆಸಕ್ತಿ ವಹಿಸಿ ನಡೆಸಲಾದ ಈ ಸಮಾವೇಶ ಅಧ್ಯಕ್ಷತೆಯನ್ನು ಎಡರಂಗದ ಅಧ್ಯಕ್ಷರಾದ ಬಿಮನ್ ಬಸು ವಹಿಸಿದ್ದರು.

ಅದೇ ದಿನ ಬೆಳಿಗ್ಗೆ ಖಾಶುದಿರಾಮ್ ಅನುಶೀಲನಾ ಭವನದಲ್ಲಿ ಏರ್ಪಜಿಸಲಾಗಿದ್ದ, ರಕ್ತದಾನ ಶಿಬಿರವನ್ನು ರಾಜ್ಯದ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಚಾರ್ಯ ಉದ್ಘಾಟಿಸಿದರು. ಸುಮಾರು 521 ಜನರು ಶಾಂತಿ, ಸೌಹಾರ್ಧತೆಯನ್ನು ಬೆಂಬಲಿಸಿ ರಕ್ತದಾನ ಮಾಡಿದರು.

DECR 319-79/79 AIKYARANGA WEEKLY Reg. No. 17015/64 CPM(G)/ KA /BGS-119/2002
... ಮುದ್ರಣ ಮತ್ತು ಪ್ರಕಾಶನ: ಎಸ್. ಸೂರ್ಯನಾರಾಯಣ ರಾವ್